೧೧
ವರ್ಷ ೪

ಸಂಕ್ರಮಣ

ಜುಲಾಯಿ + ಆಗಸ್ಟ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನ : ಜುಲಾಯಿ + ಆಗಸ್ಟ್ ೨೦೦೫

ಸಂಪುಟ ೪, ಸಂಚಿಕೆ ೪

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

•

ಶೈಲಾ ಛಬ್ಬಿ   ಲಲಿತಾ ಸಿದ್ದಬಸವಯ್ಯ

ಮೋಹನ ಹಬ್ಬು

ಎಸ್. ಬಿ. ಹಿರೇಮಠ   ಸಂಕುಲಜೀವ

ಎಲ್. ವಿ. ಶಾಂತಕುಮಾರಿ

ಷ. ಶೆಟ್ಟರ್   ಸಿ. ಪಿ. ಕೆ.

ಸ. ರಘುನಾಥ

ದಮಯಂತಿ ನರೇಗಲ್ಲ   ಕೃ. ಶಿ. ಹೆಗಡೆ

•

ಬಸವರಾಜ ವಕ್ಕುಂದ

ಪ್ರಸನ್ನ   ಅಶೋಕ ಶೆಟ್ಟರ್

ನಾ. ದಾಮೋದರ ಶೆಟ್ಟಿ

•

ವೆಂಕಟೇಶ ಕುಲಕರಣಿ   ಜಿ. ಹೆಚ್. ಪ್ರಸಾದ್

ಲಲಿತಾ ಸಿದ್ದಬಸವಯ್ಯ

ವೆಂಕಟಲಕ್ಷ್ಮಿ ಬಿ. ಎಸ್.   ಎನ್. ಬಸವಾರಾಧ್ಯ

ಜಿ. ಎಸ್. ಶಿವರುದ್ರಪ್ಪ

•

ಸಿದ್ಧಲಿಂಗ ಪಟ್ಟಣಶೆಟ್ಟಿ

•

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

ಸಂಕಲನ

ಜುಲಾಯಿ + ಆಗಸ್ಟ್ ೨೦೦೫

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :
A Kannada Literary Magazine
Volume 4, Issue 4 : July + August 2005
Edited by Dr. Siddhaling Pattanshetti
Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•
•
•

ಸಂಕಲನ - ೨೨ : ಸಂಪುಟ ೪, ಸಂಚಿಕೆ ೪ : ಜುಲಾಯಿ + ಆಗಸ್ಟ್ ೨೦೦೫
ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
✆ : ೦೮೩೬-೨೪೬ ೨೭೧೮

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)
ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

•

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಸಂಪಾದಕರ ಮಾತು

ಸಂಕಲನವನ್ನು ಗಂಭೀರವಾಗಿ ಓದುವ, ಪ್ರೀತಿಯಿಂದ ಮೆಚ್ಚುವ ಆಸಕ್ತರ ಸಂಖ್ಯೆ ಸಂಚಿಕೆಯಿಂದ ಸಂಚಿಕೆಗೆ ನಿಧಾನ ಹೆಚ್ಚುತ್ತಿದೆ. ಇಂಥ ವಿರಳ ಪತ್ರಿಕೆ ಹೆಚ್ಚು ಜನರಿಗೆ ತಲುಪುವಂತೆ ಮಾಡಿರಿ ಎಂದು ಅನೇಕರು ಅಭಿಮಾನದಿಂದ ಬರೆದಿದ್ದಾರೆ, ಹೇಳಿದ್ದಾರೆ. ಇದಕ್ಕಾಗಿ **ಸಂಕಲನ** ಋಣಿಯಾಗಿದೆ.

ಮುಖ್ಯವಾಗಿ ಕನ್ನಡ ಅಧ್ಯಾಪಕರಿಗೆ, ಸಾಹಿತಿಗಳಿಗೆ, ಸಾಹಿತ್ಯಾಸಕ್ತರಿಗೆ **ಸಂಕಲನ**ವನ್ನು ತಲುಪಿಸಲು ನಾವು ಮೊದಲಿನಿಂದಲೂ ಯತ್ನಿಸುತ್ತ ಬಂದಿದ್ದೇವೆ. ಈಗಲೂ **ಸಂಕಲನ**ವನ್ನು ನಿಯಮಿತವಾಗಿ ಓದುತ್ತಿರುವ ಮೆಚ್ಚುತ್ತಿರುವ ಅನೇಕ ಅಧ್ಯಾಪಕರು, ಸಾಹಿತಿಗಳು ನಾವು ಮತ್ತೆ ಮತ್ತೆ ವಿನಂತಿಸಿಕೊಂಡ ನಂತರವೂ ತಮ್ಮ ಚಂದಾ ಹಣ ಕೊಡದಿರುವುದು, ನವೀಕರಿಸದಿರುವುದು ಖೇದದ ಸಂಗತಿ.

ಸಂಕಲನದಲ್ಲಿ ಪ್ರಕಟವಾಗುತ್ತಿರುವ 'ನನ್ನ ಅವ್ವ ನನ್ನ ಅಪ್ಪ' ಮಾಲಿಕೆಯ ಲೇಖನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಆಗ್ರಹಿಸಿ ಅನೇಕ ಪತ್ರಗಳು ಬಂದಿವೆ. ಪುತ್ತೂರಿನ ಒಬ್ಬ ನ್ಯಾಯಾಧೀಶೆ ಸಹೋದರಿಯಂತೂ ಅತ್ಯಂತ ಪ್ರೀತಿಪೂರ್ವಕ ಒಂದು ನಿಶ್ಚಿತ ಮೊತ್ತವನ್ನೇ ಕಾಣಿಕೆ ಕಳಿಸುವುದಾಗಿ ಬಹಳ ಹಿಂದೆಯೇ ಬರೆದಿದ್ದಾರೆ. ಅವರ ಆಗ್ರಹವನ್ನು ಒಪ್ಪಿದ್ದೇವೆ. ಬೇಗ ಈ ಬಗ್ಗೆ ನಿರ್ಧಾರ ಕೈಕೊಳ್ಳಲಾಗುವುದು.

ಡಾ. ಷ. ಶೆಟ್ಟರ್ ಅವರ 'ಕವಿರಾಜಮಾರ್ಗ ಮಂಥನ'ದ ಲೇಖನ ಮಾಲಿಕೆ ಬಗೆಗೆ ಕರ್ನಾಟಕವಷ್ಟೇ ಅಲ್ಲ, ತಮಿಳುನಾಡಿನ ವಿದ್ವಾಂಸರೂ ಆಸಕ್ತಿ ತೋರಿ ಪ್ರತಿಗಳನ್ನು ತರಿಸಿಕೊಳ್ಳುತ್ತಿದ್ದಾರೆ. ಕೆಲವರು ಈ ಲೇಖನಗಳನ್ನು ತಮಿಳಿಗೆ ಅನುವಾದಿಸಲು ಬಯಸಿ, ಅನುಮತಿ ಕೋರಿ ಪತ್ರ ಬರೆದಿದ್ದಾರೆ. ಇದು **ಸಂಕಲನ**ಕ್ಕೆ ಅಭಿಮಾನದ ಸಂಗತಿ. ಈ ಲೇಖನಗಳನ್ನೂ ಪುಸ್ತಕರೂಪದಲ್ಲಿ ತರಲು ಪತ್ರಗಳು ಬಂದಿವೆ. ಡಾ. ಶೆಟ್ಟರ್ ಅವರು ಇದೇ ವಿಷಯ ಕುರಿತು ಬರೆದ ಇನ್ನೂ ಹಲವು ಲೇಖನಗಳು ಈ ಮಾಲಿಕೆಯಲ್ಲಿ ಪ್ರಕಟವಾಗಲಿದ್ದು, ಅವನ್ನೆಲ್ಲ ಒಟ್ಟಾಗಿ ನಂತರ ಪುಸ್ತಕ ರೂಪದಲ್ಲಿ ತರುವ ಬಗ್ಗೆ ನಿಧಾನ ಯೋಚಿಸಬಹುದಾಗಿದೆ.

೧ ಜುಲಾಯಿ ೨೦೦೫
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಪರಿವಿಡಿ

೧. ಗುರು ಗುನ ಲಿಖಾ ನ ಜಾಯ್ : *ಶೈಲಾ ಛಬ್ಬಿ* ೫ - ೧೦

೨. ಸಖಿಗಾಥಾ : *ಲಲಿತಾ ಸಿದ್ದಬಸವಯ್ಯ* ೧೧ - ೧೨

೩. ನನ್ನ ಅಪ್ಪ ನನ್ನ ಅಮ್ಮ : *ಮೋಹನ ಹಬ್ಬು* ೧೨ - ೧೭

೪. ಶಾಸನೋಕ್ತ ತುಳಿಲಸಂದಕುಲದವರು :
ಎಸ್. ಬಿ. ಹಿರೇಮಠ ೧೮ - ೨೬

೫. ಒಂದು ಭ್ರೂಣದ ಆತ್ಮಕತೆ... : *ಸಂಕುಲಜೀವ* ೨೬ - ೨೭

೬. ಮೂರು ಕವಿತೆಗಳು : *ಎಲ್. ವಿ. ಶಾಂತಕುಮಾರಿ* ೨೭ - ೩೦

೭. ದ್ರಾವಿಡ ಸಂಬಂಧ -೩ : *ಷ. ಶೆಟ್ಟರ್* ೩೧ - ೪೧

೮. ಬಿಂದುದಶಕ : *ಸಿ. ಪಿ. ಕೆ.* ೪೧ - ೪೨

೯. ಎಚ್.ಎಸ್.ವಿ. ಅವರ 'ಮೂವತ್ತು ಮಳೆಗಾಲ' :
ಷ ರಘುನಾಥ ೪೩ - ೪೮

೧೦. ಅಮೇರಿಕಾ... ಅಮೇರಿಕಾ!! :
ದಮಯಂತಿ ನರೇಗಲ್ಲ ೪೯ - ೬೫

೧೧. ಕನ್ನಡ ಒಲುಮೆಯ ಮರಾಠೀ ಪ್ರಾಧ್ಯಾಪಕ :
ಕೃ. ಶಿ. ಹೆಗಡೆ ೬೬ - ೭೧

೧೨. ಪುಸ್ತಕ ಪರಿಶೀಲನೆ : ೭೧ - ೭೮
೧. ಕೆಬ್ಬೆನೆಲ : ಲಲಿತಾ ಸಿದ್ದಬಸವಯ್ಯ —*ಬಸವರಾಜ ವಕ್ಕುಂದ*
೨. ಕುಮಾರ ಗಂಧರ್ವ : ಶಿರೀಷ್ ಜೋಶಿ —*ಪ್ರಸನ್ನ*
೩. ಬಿದ್ದುದು ಗರಿಯಲ್ಲ; ಹಕ್ಕಿಯೇ! : ಎಚ್. ಎಂ. ಮರುಳಸಿದ್ಧಯ್ಯ, ಬಿ. ಎಂ. ಮರಕಿಣಿ —*ಅಶೋಕ ಶೆಟ್ಟರ್*
೪. ನಾಟಕತ್ರಯ : ಕೆ. ಎಸ್. ರತ್ನಮ್ಮ —*ನಾ. ದಾಮೋದರ ಶೆಟ್ಟಿ*

೧೩. ಸಂಕಲನ : ಅನಿಸಿಕೆ : ೭೯ - ೮೦

೧೪. ಕಡೀಪುಟ : *ಸಿದ್ಧಲಿಂಗ ಪಟ್ಟಣಶೆಟ್ಟಿ* ಆವರಣ ಪುಟ - ೩

ಗುರು ಗುನ ಲಿಖಾ ನ ಜಾಯ್

ಶೈಲಾ ಛಬ್ಬಿ

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜಲ ಶಲಾಕಯಾ
ಚಕ್ಷುರುನ್ಮೀಲಿತಂ ಏನ ತಸ್ಮೈ ಶ್ರೀಗುರವೇ ನಮಃ ।

ಅಜ್ಞಾನದ ದಟ್ಟ ಅಂಧಕಾರವನ್ನು ತೊಲಗಿಸಿ ಜ್ಞಾನದೀಪವನ್ನು ಬೆಳಗಿಸುವ ಮಹತ್ ಕಾರ್ಯವನ್ನು ಮಾಡುವದರಿಂದಲೇ ನಮ್ಮ ವೇದಗಳು ಗುರುವಿಗೆ ದೇವತೆಯ ಸ್ಥಾನವನ್ನು ಕೊಟ್ಟಿವೆ.

ಜನನಿಯು ನಮ್ಮ ಮೊದಲ ಗುರುವಾದರೂ ಶಾಲೆ ಕಾಲೇಜುಗಳಲ್ಲಿ ಶಿಕ್ಷಣ ನೀಡಿದ ವಿದ್ಯಾಗುರುಗಳ ಪಾತ್ರ ಪ್ರತಿಯೊಬ್ಬರ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅನೇಕ ಶಿಕ್ಷಕರು ನಮಗೆ ಕಲಿಸಿದ್ದರೂ ಎಲ್ಲೋ ಕೆಲವೇ ಕೆಲವರು ನಮ್ಮ ಜೀವನವನ್ನು ರೂಪಿಸುವಲ್ಲಿ, ಮಾರ್ಪಡಿಸುವಲ್ಲಿ ಹಾಗೂ ಪ್ರಭಾವಿತಗೊಳಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತಾರೆ.

ನನ್ನ ಹದಿನಾರು ವರ್ಷಗಳ (೧೦+೪+೨) ಸುದೀರ್ಘ ವಿದ್ಯಾರ್ಥಿ ಜೀವನದಲ್ಲಿ ಕೆಲವರು ನನ್ನ ಮನದಾಳದಲ್ಲಿ ಸ್ಥಿರವಾಗಿ ನಿಂತಿದ್ದಾರೆ. ಕೆಲವರು ನನಗರಿವಿಲ್ಲದೆ ನನ್ನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಾಯ ಮಾಡಿದ್ದಾರೆ. 'ವರ್ಣಮಾತ್ರಂ ಕಲಿಸಿದಾತಂ ಗುರು' ಎಂಬಂತೆ ಕೇವಲ ಒಂದೇ ಅವಧಿಗೆ (period) ಕಲಿಸಿದ ಗುರುಗಳೂ ತಮ್ಮ ಛಾಪು ಬೀರಿದ್ದಾರೆ. ಅವರೆಲ್ಲರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುವ ಅವಕಾಶ ಈಗ ಪ್ರಾಪ್ತವಾಗಿದೆ. ಅವರ ಬಗ್ಗೆ ನನ್ನಲ್ಲಿ ಮಡುಗಟ್ಟಿದ ಭಾವನೆಗಳನ್ನು ವ್ಯಕ್ತಪಡಿಸಲು ನಾನು ಎಷ್ಟು ವರ್ಷಗಳಿಂದ ಕಾದಿದ್ದೆ!

ಧಾರವಾಡದ ಪ್ರಜೆಂಟೇಶನ್ ಕಾನ್ವೆಂಟ್ ಸ್ಕೂಲಿನಲ್ಲಿಯ ನನ್ನ ಪ್ರಾಥಮಿಕ ಶಾಲಾ ದಿನಗಳು ನನ್ನನ್ನು ದಟ್ಟವಾಗಿ ಪ್ರಭಾವಿಸಿದವು. ಆಗ ನಮ್ಮ ವರ್ಗದ ಶಿಕ್ಷಕರೇ ನಮ್ಮ ಪಾಲಿನ ದೇವರಾಗಿದ್ದರು. ಅವರು ಹೇಳಿದ್ದು ವೇದವಾಕ್ಯ. ಶಿಸ್ತು, ನಿಯಮಿತತನ, ಸಮಯ ಪಾಲನೆ, ಹೋಂವರ್ಕ್ ಮಾಡುವದು, ಸತ್ಯವನ್ನೇ ನುಡಿಯುವದು, ಪರೋಪಕಾರ, ಹಂಚಿ ತಿನ್ನುವದು, ಬಡವರಿಗೆ ಸಹಾಯ, ಆರೋಗ್ಯ ಹಾಗೂ ಸ್ವಚ್ಛತೆಯ ಅರಿವು, ಶ್ರಮಗೌರವ ಕ್ಷಮೆ ಮುಂತಾದ ಗುಣಗಳನ್ನು ನಮ್ಮಲ್ಲಿ ಹುಟ್ಟುಹಾಕಿದವರು ಅಲ್ಲಿಯ ವಿದ್ಯಾಗುರುಗಳು. ನಾವು ಹುಡುಗಿಯರು ಮಾಲೆ ಹಾಕಿಕೊಂಡು ಹೋದಾಗ ನಮ್ಮ ಮಾಲೆಯಲ್ಲಿಯ ಕಿಂಚಿತ್ ಭಾಗವನ್ನು ಕತ್ತರಿಸಿ ಹೂ ಮುಡಿದಿರದ ಬಾಲಕಿಯರಿಗೆ ತಾವೇ ಮುಡಿಸುತ್ತಿದ್ದರು ನಮ್ಮ ೧ನೇ ಕ್ಲಾಸಿನ ಸಿಸ್ಟರ್. ಅವರ ಆ ಕಾರ್ಯವನ್ನು ನಾನು ಬಹುವಾಗಿ ಮೆಚ್ಚಿಕೊಂಡಿದ್ದೆ. ನಮ್ಮ ೩ನೇ ತರಗತಿಯ ಸಿಸ್ಟರ್ ಗಣಿತದಲ್ಲಿ ಜಾಣರಾದ ವಿದ್ಯಾರ್ಥಿಗಳಿಗೆ ಇಬ್ಬರು ದಡ್ಡ ವಿದ್ಯಾರ್ಥಿಗಳನ್ನು ಕೊಟ್ಟು ಅವರಿಗೆ ಗಣಿತ ತಿಳಿಸಿಕೊಡುವ ಕೆಲಸವನ್ನು ಹಚ್ಚುತ್ತಿದ್ದರು. ನಾನು ನನ್ನ ಸಹಪಾಠಿಗಳಾದ ಅಣ್ಣಾಜಿ ಹಾಗೂ ಮಲ್ಹಾರಿ ಎಂಬಿಬ್ಬರಿಗೆ ಗಣಿತ ಹೇಳಿಕೊಟ್ಟ ನೆನಪು ಹಚ್ಚಹಸುರಾಗಿದೆ. ಇದರಿಂದ ದಡ್ಡರು ಜಾಣರಾಗುತ್ತಿದ್ದುದರ ಜೊತೆಗೆ ಜಾಣರು ಇನ್ನೂ ಜಾಣರೂ, ಆತ್ಮವಿಶ್ವಾಸವುಳ್ಳವರೂ ಆಗುತ್ತಿದ್ದರು.

೪ನೇ ಕ್ಲಾಸಿನ ಸಿಸ್ಟರ್ ನನ್ನನ್ನು ವಿಶೇಷವಾಗಿ ಪ್ರಭಾವಿಸಿದರು ಎನ್ನಬಹುದು. ಅ, ಬ ವರ್ಗಗಳನ್ನು ಸೇರಿಸಿದ್ದರಿಂದ ಆ ಕ್ಲಾಸು ದೊಡ್ಡದಾಗಿತ್ತು. ಕ್ಲಾಸಿನಲ್ಲಿ ಗುರುಗಳು ಒಂದು ಮಂತ್ರಿಮಂಡಲವನ್ನೇ ರಚಿಸಿದ್ದರು. ಅದರಲ್ಲಿ ಮುಖ್ಯಮಂತ್ರಿ, ಶಿಕ್ಷಣಮಂತ್ರಿ, ಆರೋಗ್ಯಮಂತ್ರಿ ಹೀಗೆ ಹಲವು ಸಚಿವರು ಇರುತ್ತಿದ್ದರು. ತಿಂಗಳಿಗೊಮ್ಮೆ ಮಂತ್ರಿಮಂಡಲ ಬದಲಾಗುತ್ತಿತ್ತು. ಅದರಲ್ಲಿ ನನಗೆ ಯಾವಾಗಲೂ ಶಿಕ್ಷಣಮಂತ್ರಿ ಇಲ್ಲವೆ ಆರೋಗ್ಯಮಂತ್ರಿಯ ಪಟ್ಟ. ಹೋಂವರ್ಕ್ ಮಾಡಿಕೊಂಡು ಬಂದ ಹಾಗೂ ಬರದವರ ಪಟ್ಟಿ ತಯಾರಿಸುವದು, ಹುಡುಗಿಯರ ಕೂದಲು, ಹಲ್ಲು, ಉಗುರು, ಬಟ್ಟೆಯ ಸ್ವಚ್ಛತೆಯನ್ನು ಪರಿಶೀಲಿಸಿ ಅಸ್ವಚ್ಛರಾಗಿದ್ದವರನ್ನು ಎಚ್ಚರಿಸುವದು, ಅವರ ಯಾದಿ ತಯಾರಿಸುವದು ಇತ್ಯಾದಿ ಕೆಲಸಗಳನ್ನು ಬಹು ಆಸಕ್ತಿಯಿಂದ ಮಾಡುತ್ತಿದ್ದೆವು. ಮಂತ್ರಿಗಳಾದವರು ನಿತ್ಯ ಶಾಲೆ ಬಿಟ್ಟನಂತರ ಬೆಂಚುಗಳನ್ನು ಸರಿಸಿ ಕಸಗುಡಿಸುವ, ಶಾಲಾ ಆವಾರವನ್ನು ಶುಚಿಗೊಳಿಸುವ ಕೆಲಸಗಳನ್ನು ಅಚ್ಚುಕಟ್ಟಾಗಿ ಪ್ರೀತಿಯಿಂದ ಮಾಡುವ ರೂಢಿಯನ್ನು ಹಾಕಿಕೊಟ್ಟರು. ಅಂದು ನನಗೆ ಅದರ ಮಹತ್ವ ಬಹಳ ತಿಳಿದಿರಲಿಕ್ಕಿಲ್ಲ. ಆದರೆ ಕಾಲಾಂತರದಲ್ಲಿ ಓದಲ್ಲದೆ ಇತರೆ ಈ ಸಂಗತಿಗಳು, ವಿದ್ಯೆಗಳು ಜೀವನವನ್ನು ರೂಪಿಸುವಲ್ಲಿ ಎಷ್ಟು ಪ್ರಯೋಜನಕಾರಿ ಎಂಬುದನ್ನು ಅರಿತೆ. ಆ ಗುರುಗಳ ಹೆಸರುಗಳನ್ನು ಪ್ರತ್ಯೇಕವಾಗಿ ಹೇಳಿ ಕೃತಜ್ಞತೆ ಸೂಚಿಸಲು ಮನ ತುಡಿಯುತ್ತದೆ. ಆದರೆ ಅವರು ಸಂನ್ಯಾಸಿನಿಯರು. ನನಗೆ ಅವರ ನಾಮಧೇಯದ ಪರಿಚಯವೇ ಇಲ್ಲ. ಈಗ ಅವರನ್ನು ಸ್ಮರಿಸಿಕೊಳ್ಳುವ ಅವಕಾಶ ದೊರೆತಾಗ ಅವರನ್ನು ಹೆಸರಿಸಲಾರೆನಲ್ಲ ಎಂದು ಬೇಸರ-ಖೇದ ಉಂಟಾಗುತ್ತದೆ. ಅವರು ವಿದ್ಯಾರ್ಥಿಗಳ ಪಾಲಿಗೆ ಅನಾಮಿಕರಾಗೇ ಉಳಿದುಬಿಟ್ಟರಲ್ಲ ಎಂದು ದುಃಖವಾಗುತ್ತದೆ. ಆದರೂ ನನ್ನ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿದ ಆ ಗುರುವರ್ಯರಿಗೆ ನನ್ನ ನಮನಗಳನ್ನು ಇಲ್ಲಿಂದಲೇ ಸಲ್ಲಿಸುತ್ತೇನೆ.

ಇಂಥ ಶಿಸ್ತಿನ ಶಾಲೆಯಿಂದ ನಾನು ೫ನೇ ತರಗತಿಗಾಗಿ ಗವರ್ನಮೆಂಟ ಗರ್ಲ್ಸ ಸ್ಕೂಲು ಸೇರಿದಾಗ ಅಲ್ಲಿಯ ಸಡಿಲವಾದ ನಿಯಮಗಳನ್ನು ಕಂಡು ನಿರಾಶೆಯಾಯಿತು. ೪ನೇ ಕ್ಲಾಸಿನಲ್ಲಿ ವರ್ಷವಿಡೀ ಗಣಿತದಲ್ಲಿ ೧೦೦ ಪ್ರತಿಶತ ಅಂಕ ಗಳಿಸಿದ ನಾನು ಹೈಸ್ಕೂಲಿನಲ್ಲಿ ಇಳಿಯುತ್ತಾ ಹೋದೆ. ಪಠ್ಯದ ಬಗ್ಗೆ ನನಗೆ ಅಲ್ಲಿ ಅಂಥ ಸಮಾಧಾನ ದೊರೆಯದಿದ್ದರೂ ಪಠ್ಯೇತರ ಚಟುವಟಿಕೆಗಳಾದ ಆಟ, ಮಾಸ್ ಡ್ರಿಲ್, ಸಂಗೀತ, ನಾಟಕ, ಚಿತ್ರಕಲೆ, ಹಸ್ತಕಲೆಗಳನ್ನು ಕಲಿಯುವ ಸದವಕಾಶ ಲಭ್ಯವಾಯಿತು. ಸಂಗೀತ, recitation, ಚರ್ಚಾಕೂಟ, ರಸಪ್ರಶ್ನೆ, ನೃತ್ಯ, ನಾಟಕ, ಪಂದ್ಯಾಟಗಳು ನನ್ನ ಸರ್ವತೋಮುಖ ಏಳಿಗೆಗೆ ಕಾರಣವಾದವು; ಧೈರ್ಯ, ಆತ್ಮವಿಶ್ವಾಸವನ್ನು ತುಂಬಿದವು. ಅದೊಂದು ಸರಕಾರಿ ಶಾಲೆಯಾದ್ದರಿಂದ ಶಿಕ್ಷಕರು ಮೇಲಿಂದ ಮೇಲೆ ವರ್ಗಾವಣೆ ಹೊಂದುತ್ತಿದ್ದರು. ಹೀಗಾಗಿ ಶಿಕ್ಷಕರ ಸತತ ಸಂಪರ್ಕ, ಅವರ ಪ್ರಭಾವ ನಮ್ಮ ಮೇಲಾಗುವದು ಅಷ್ಟು ಸರಳವಾಗಿರಲಿಲ್ಲ. ಇಂಥದರಲ್ಲೂ ಶ್ರೀಮತಿ ಶಾಂತಾ ಮುಳುಗುಂದಮಠ(ಈಗ ಶಾಂತಲಾ ಹಿರೇಮಠ)ರ ಶಿಷ್ಯತ್ವವು ಮೂರು ವರ್ಷ ಕಾಲ ಸಿಕ್ಕದ್ದು ನನ್ನ ಸುದೈವವೇ ಸರಿ. ಅವರ ಶಾಂತ ಹಾಗೂ ಮೃದು ಸ್ವಭಾವ, ವಿದ್ಯಾರ್ಥಿಗಳೊಡನೆ ಸರಾಗವಾಗಿ ಬೆರೆಯುವಿಕೆ, ಪಾಠ ಹೇಳುವ ಕ್ರಮಗಳೂ ನನ್ನನ್ನು ಅವರತ್ತ ಸೆಳೆದವು. ಇತಿಹಾಸ-ಭೂಗೋಲದಂಥ ಬೋರಿಂಗ ವಿಷಯಗಳನ್ನು ಅವರು ಆಸಕ್ತಿ ಕೆರಳಿಸುವಂತೆ ಬೋಧಿಸುತ್ತಿದ್ದರು.

ಕನ್ನಡವನ್ನೂ ಕಲಿಸುತ್ತಿದ್ದ ಮುಳುಗುಂದಮಠ ಟೀಚರರು ಉತ್ತಮವಾಗಿ ಪಾಠ ಮಾಡುವದರ ಜೊತೆಗೆ ನಿಬಂಧ ಬರೆಯಲು ನಮ್ಮನ್ನು ಹಚ್ಚಿ ಚೆನ್ನಾಗಿ ಹಾಗೂ ವಿಭಿನ್ನವಾಗಿ ಬರೆದವರನ್ನು ಓದಲು ಹೇಳಿ ಅದನ್ನು ಹೇಗೆಲ್ಲ ಬರೆಯಬಹುದು ಎಂದು ತೋರಿಸಿಕೊಟ್ಟರು. ಅವರು ಮದುವೆಯಾಗಿ ಮುಂದೆ ಬೇರೆಡೆ ವರ್ಗವಾಗಿ ಹೋದಾಗ ಅಗಲಿಕೆಯ ದುಃಖ ನನ್ನನ್ನು ಬಾಧಿಸಿತ್ತು. ಆದರೆ ನನ್ನ ತಂದೆ ಆರ್. ಎಚ್. ಕುಲಕರ್ಣಿಯವರು ಶಿಕ್ಷಣ ಖಾತೆಯಲ್ಲಿ ಇದ್ದದ್ದರಿಂದ ಮುಳುಗುಂದಮಠ ಟೀಚರರ ಪತಿ ಶಿವಶಂಕರ ಹಿರೇಮಠರ ಜೊತೆ ಅನ್ಯೋನ್ಯವಾಗಿದ್ದರು. ನಮ್ಮ ಮನೆಗೂ ಬರುತ್ತಿದ್ದರು. ಈ ಕಾರಣದಿಂದಾಗಿ ಟೀಚರರ ಸಂಪರ್ಕ ಅಂದಿನಿಂದ ಇಂದಿಗೂ ಇದೆ. ಈಗಲೂ ಭೇಟಿಯಾದಾಗ ನಾವು ಆತ್ಮೀಯವಾಗಿ ಮಾತನಾಡುತ್ತೇವೆ. ನಾನು ಗರ್ಭಿಣಿಯಾಗಿದ್ದಾಗ ಅವರು ಮನೆಗೆ ಆಹ್ವಾನಿಸಿ ಕುಬಸವನ್ನೂ ಮಾಡಿದ್ದರು.

ನಮ್ಮ ಶಾಲೆಯಲ್ಲಿ ಮುಳ್ಳೂರ ಎಂಬ ಹಿರಿಯ ಶಿಕ್ಷಕಿ ಇದ್ದರು. ಅವರು ಒಂದೆರಡು ಗೈರುಹಾಜರಿಯ ಕ್ಲಾಸುಗಳನ್ನು ತೆಗೆದುಕೊಂಡಿದ್ದನ್ನು ಬಿಟ್ಟರೆ ನನಗೆ ಅವರ ಸಂಪರ್ಕ ಬರಲೇ ಇಲ್ಲ ಎನ್ನಬಹುದು. ಅವರು ತುಂಬಾ ಕಡಕ್. ಶಿಸ್ತಿನ ಶಿಪಾಯಿ. ಅವರೆಂದರೆ ಎಲ್ಲರಿಗೂ ಭಯ. ತಡವಾಗಿ ಬಂದ ವಿದ್ಯಾರ್ಥಿನಿಯರಿಗೆ ವಿಸ್ತಾರವಾದ ಶಾಲಾ ಮೈದಾನವನ್ನು ಓಡುತ್ತ ಸುತ್ತುವ ಶಿಕ್ಷೆ ವಿಧಿಸುತ್ತಿದ್ದರು. ೯ನೇ ಕ್ಲಾಸಿನಲ್ಲಿದ್ದಾಗ ನಾನು ಪ್ರತಿ ಶನಿವಾರ ಮುಂಜಾನೆ ತಡವಾಗಿ ಶಾಲೆ ತಲುಪಿದಾಗ ಆ ಶಿಕ್ಷಾ ಸಮಯವೂ ಮುಗಿದು ಎಲ್ಲರೂ ಕ್ಲಾಸು ಸೇರಿಕೊಂಡಿರುತ್ತಿದ್ದರು. ಅಂದು ನಮಗೆ ಶಾಂತಾ ಮುಳುಗುಂದಮಠರದೇ ಪ್ರಥಮ ಅವಧಿ. ನಾನು ಕ್ಲಾಸು ಪ್ರವೇಶಿಸಲು ಅನುಮತಿ ಕೇಳಿದಾಗ 'ಹ್ಞೂ ಬಾರವ್ವಾ' ಎಂದು ತುಸು ವ್ಯಂಗ್ಯಮಿಶ್ರಿತ ದನಿಯಲ್ಲಿ ನಗುತ್ತ ಒಳಸೇರಿಸಿಕೊಳ್ಳುತ್ತಿದ್ದರು. ಅಂತೂ ಮುಳ್ಳೂರ ಟೀಚರರ ದೃಷ್ಟಿಗೆ ಬೀಳದೆ ಪಾರಾದೆನಲ್ಲ ಎಂದು ನಿಟ್ಟುಸಿರುಬಿಡುತ್ತಿದ್ದೆ. ಒಂದು ಶನಿವಾರ ನಾನು ತುಸು ಬೇಗ ಅಂದರೆ ಪ್ರಾರ್ಥನೆ ಮುಗಿಯುತ್ತಿರುವಾಗ ಬಂದು ಸಿಕ್ಕಿಹಾಕಿಕೊಂಡೆ. ಮುಳ್ಳೂರರು ನನ್ನನ್ನು ಹಿಡಿದು ಲೇಟಾಗಿ ಬಂದವರ ಜೊತೆ ಓಡಲು ಹಚ್ಚಿದರು. ನಾನು ಅವಮಾನದಿಂದ ಅವನತಮುಖಿಯಾದೆ. ಮುಂದಿನ ವಾರ ನಾನು ಸರಿಯಾಗಿ ಪ್ರಾರ್ಥನೆಗೆ ಮುನ್ನ ಹಾಜರಿದ್ದದ್ದನ್ನು ನೋಡಿ ನನ್ನ ಸ್ನೇಹಿತೆಯರು 'ಏನು ಶೈಲಿ, ಇವತ್ತ ಸೂರ್ಯ ಪಶ್ಚಿಮಕ್ಕ ಹುಟ್ಟ್ಯಾನೇನು' ಎಂದು ಗೇಲಿ ಮಾಡಿದರು. ಮುಳಗುಂದಮಠರು ನನ್ನ ಕಣ್‌ಕಣ್ ಬಿಟ್ಟು ನೋಡಿದರು. ಮುಂದೆ ನಾನೆಂದೂ ಶನಿವಾರ ತಡಮಾಡಿ ಬರಲಿಲ್ಲ. ಆಗೆಲ್ಲ ನನಗೆ ಅನಿಸಿದ್ದು– ನನಗೆ ಈ ಶಿಕ್ಷೆ ಮೊದಲೇ ಸಿಕ್ಕಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತಲ್ಲ! ಮುಳ್ಳೂರರು ನನಗೆ ವಿದ್ಯಾಭ್ಯಾಸ ಕಲಿಸದಿದ್ದರೂ ಬಾಳಿನಲ್ಲಿ ಅವಶ್ಯವಾಗಿ ಅಳವಡಿಸಿಕೊಳ್ಳಬೇಕಾದ ಶಿಸ್ತಿನ ಪಾಠವನ್ನು ಆ ಶಿಕ್ಷೆಯ ಮೂಲಕ ಕಲಿಸಿದರು.

ನಾನು ೧೦ನೇ (SSLC) ಕ್ಲಾಸಿನಲ್ಲಿದ್ದಾಗ ರಾವಳ ಎಂಬ ಹೊಸ ಗುರುಗಳು ಶಾಲೆಗೆ ಬಂದರು. ಹಿಂದಿಯಲ್ಲೇ ಮಾತನಾಡುತ್ತ ಅಭಿನಯದ ಮೂಲಕ ಬಹಳ ಸೊಗಸಾಗಿ ಪಾಠ ಮಾಡುತ್ತಿದ್ದರು. ಅವರ ಅಭಿನಯ ನಮಗೆ ಮೋಜೆನಿಸುತ್ತಿತ್ತು. ಅವರು ನಮ್ಮೊಡನೆ

ಸಲುಗೆಯಿಂದ ಬೆರೆಯುತ್ತಿದ್ದರಿಂದ ನಾನು ಹಾಗೂ ಕೆಲ ತುಂಟ ಹುಡುಗಿಯರು ಸೇರಿ ಅವರಿಗೆ ಏನಾದರೂ ಅಂದು ಛೇಡಿಸುತ್ತಿದ್ದೆವು. ಹೀಗೆ ಒಂದು ದಿನ ನಾನು ಸಲಿಗೆಯ ಭರದಲ್ಲಿ ಅವರಿಗೆ ಏನೋ ಅಂದಾಗ 'ಈ ಮಾತು ಬರಕೂಡದು' ಎಂಬ ಅರ್ಥದಲ್ಲಿ ಚುಟುಕಾಗಿ ನನ್ನನ್ನು ಎಚ್ಚರಿಸಿದರು. ಅಂದಿನಿಂದ ನಾನು ಗುರುಗಳೊಂದಿಗೆ ಅತಿ ಸದರ ಸಲ್ಲ ಎಂಬುದನ್ನು ಅರಿತೆ. ಅವರು ಬೈಯಲಿಲ್ಲ, ಬೆದರಿಸಲಿಲ್ಲ, ಹೊಡೆಯಲಿಲ್ಲ ಅಥವಾ ಶಿಕ್ಷಿಸಲಿಲ್ಲ. ಆದರೆ ನನ್ನ ಮನಃಪರಿವರ್ತನೆ ಮಾಡಿದರು. ಅಂದಿನಿಂದ ನನಗೆ ಅವರ ಬಗ್ಗೆ ವಿಶೇಷ ಗೌರವ ಮೂಡಿತು. ಹಿಂದಿ ಎಂದರೆ ಹಿಂದ್ಹಿಂದೆ ಹೋಗುತ್ತಿದ್ದ ನಾನು ಅವರ ಕಲಿಸುವ ಶೈಲಿಯಿಂದಾಗಿ ವಿಷಯದಲ್ಲಿ ವಿಶೇಷ ಆಸ್ಥೆ ವಹಿಸುವಂತಾದೆ. ೫ನೇ ೀಯತ್ತೆಯಿಂದ ಇವರೇ ಕಲಿಸಿದ್ದರೆ ನಾನು ಹಿಂದಿಯಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಬಹುದಿತ್ತಲ್ಲ ಎಂದು ಹಲವಾರು ಬಾರಿ ಅಂದುಕೊಂಡಿದ್ದೇನೆ. ಮುಂದಿನ ಎಷ್ಟೋ ವರ್ಷಗಳ ವರೆಗೆ ಅವರ-ನನ್ನ ಭೆಟ್ಟಿ ಆಗುತ್ತಲಿತ್ತು. ಆಗೆಲ್ಲ ಅವರು ನನ್ನನ್ನು ಪ್ರೀತಿಯಿಂದ ವಿಚಾರಿಸುತ್ತಿದ್ದರು. ಹಾಗೇ ಒಂದೇ ಅವಧಿಗೆ ಕಲಿಸಿದ ಎಚ್. ಜಿ. ಜೋಶಿ ಗುರುಗಳು (ನನ್ನ ತಂದೆಯ ಆತ್ಮೀಯ ಸ್ನೇಹಿತರು) ತಮ್ಮ ಕೊನೆಯ ದಿನದ ವರೆಗೂ ನನ್ನ ಬೆನ್ನು ತಟ್ಟಿದರು. 'ನೀನು ನಿನ್ನ ಪುಸ್ತಕ ಪ್ರಕಟ ಮಾಡಿಯಾದ ಮೇಲೇ ನಾನು ಸಾಯುತ್ತೇನೆ' ಎಂದು ಹಟ ತೊಟ್ಟು ಕುಳಿತು ಹಾಗೆ ಮಾಡಿಸಿದರು. ಅವರಿಗೆ ಅಷ್ಟು ಅಭಿಮಾನ ನನ್ನ ಕಂಡರೆ.

ಕಾಲೇಜಿನಲ್ಲಿ ಹಲವಾರು ಅಧ್ಯಾಪಕರಿಂದ ಅಧ್ಯಯನ ಮಾಡಿದ್ದರೂ ಸಂಸ್ಕೃತ ಗುರುಗಳಾದ ಪ್ರೊ. ಎಮ್. ಎನ್. ಜೋಶಿಯವರ ಆಲಂಕಾರಿಕ ಭಾಷೆ, ವರ್ಣನೆ, ಕಲಿಸುವಿಕೆ, ಸರಳತೆ, ಸೌಜನ್ಯಗಳಿಂದ ನಾನು ಪ್ರಭಾವಿತಳಾದೆ. ಅವರಿಂದಾಗಿ ನನ್ನ ಇಂಗ್ಲೀಷು ಸುಧಾರಿಸಿತು. ೪ ವರ್ಷ ಕಾಲ ಅವರಿಂದ ಕಲಿತ ನಾನು ಅವರ ಬಗ್ಗೆ, ಅವರ ವಿದ್ವತ್ತಿನ ಬಗ್ಗೆ ವಿಶೇಷ ಗೌರವವನ್ನಿಟ್ಟುಕೊಂಡಿದ್ದೇನೆ. ಈಗಲೂ ಆಗೊಮ್ಮೆ-ಈಗೊಮ್ಮೆ ಅವರು ಕಾರ್ಯಕ್ರಮಗಳಲ್ಲಿ, ಬೀದಿಯಲ್ಲಿ ಸಿಗುತ್ತಿರುತ್ತಾರೆ. ನನ್ನ ಇನ್ನೊಬ್ಬ ಸಂಸ್ಕೃತ ಗುರುಗಳಾದ ಡಾ. ದಯಾನಂದ ಶಾನಭಾಗರ ಬಗ್ಗೆ ಬರೆಯಲು ಈ ಅಂಕಣವನ್ನು ವೇದಿಕೆಯನ್ನಾಗಿ ಮಾಡಿಕೊಳ್ಳುವ ಸುಯೋಗ ಪ್ರಾಪ್ತವಾಗಿದೆ. ಅದರ ಸದುಪಯೋಗವನ್ನು ನಾನು ಮಾಡಿಕೊಳ್ಳಲೇಬೇಕು.

ಕಾಲೇಜು ಹಾಗೂ ವಿಶ್ವವಿದ್ಯಾಲಯ ಸೇರಿ ಒಟ್ಟು ನಾಲ್ಕು ವರ್ಷ ಡಾ. ಶಾನಭಾಗರನ್ನು ಗುರುಗಳಾಗಿ ಪಡೆಯುವ ಅದೃಷ್ಟ ನನ್ನದಾಗಿತ್ತು. ಬಿ. ಎ. ದಲ್ಲಿ ಮನಃಶಾಸ್ತ್ರ ನನ್ನ ಮುಖ್ಯ ವಿಷಯವಾಗಿತ್ತು. ಎಮ್.ಎ.ಗೆ ಆ ವಿಷಯವನ್ನಿನ್ನೂ ಪ್ರಾರಂಭಿಸಿರಲಿಲ್ಲ. ಹೀಗಾಗಿ ಸಮಾಜಶಾಸ್ತ್ರವನ್ನು ತೆಗೆದುಕೊಂಡು ಓದು ಮುಂದುವರಿಸಲು ನಿರ್ಧರಿಸಿದ್ದ ನನ್ನನ್ನು ವಿಶ್ವವಿದ್ಯಾಲಯದ ಆವರಣದಲ್ಲಿ ಅಕಸ್ಮಾತ್ತಾಗಿ ಭೇಟಿ ಮಾಡಿ ಯಾವುದೋ ಹೊಸ ವಿಷಯವನ್ನು ತೆಗೆದುಕೊಂಡು ಓದು ಮುಂದುವರಿಸುವದಕ್ಕಿಂತ ಅದಾಗಲೇ ನಾನು ಕಾಲೇಜಿನಲ್ಲಿ ಅಧ್ಯಯನ ಮಾಡಿದ ಸಂಸ್ಕೃತ ವಿಷಯವನ್ನು ತೆಗೆದುಕೊಂಡು ಎಮ್.ಎ. ಮಾಡುವದು ಸೂಕ್ತ ಎಂದು ಸೂಚಿಸಿದರು. ನಾನು ಹಿಂದೇಟು ಹಾಕಿದಾಗ, 'ನಾನಿದ್ದೇನೆ. ಏನೂ ಹೆದರಬೇಡ' ಎಂದು ಅಭಯಹಸ್ತವನ್ನು ಚಾಚಿ ನಾನು ಸಂಸ್ಕೃತ ಎಮ್.ಎ. ಮಾಡುವಂತೆ ಪ್ರೋತ್ಸಾಹಿಸಿದ್ದು

ಡಾ. ಶಾನಭಾಗರೇ. ಅಂದು ಒಲ್ಲದ ಮನಸ್ಸಿನಿಂದ ಸಂಸ್ಕೃತವನ್ನು ತೆಗೆದುಕೊಂಡರೂ ಕ್ರಮೇಣ ನನಗೆ ಅದರ ಬಗ್ಗೆ ಒಲವು ಮೂಡಿ ಇಂದಿಗೂ ಆ ಶ್ರೀಮಂತ ಭಾಷೆಯನ್ನು ಅಭ್ಯಸಿಸಿದುದು ನನ್ನ ಸಾಹಿತ್ಯಿಕ ಚಟುವಟಿಕೆಗಳಿಗೆ ವರವಾಗಿ ಪರಿಣಿಸಿದೆ. ಅದಕ್ಕಿಂತ ಮಿಗಿಲಾಗಿ ಜೀವನದಲ್ಲಿ ಒಬ್ಬ ಆದರ್ಶ ಗುರುವನ್ನು ಪಡೆದ ಹೆಮ್ಮೆ, ಸಮಾಧಾನ ನನಗಿದೆ.

ಆಜಾನುಬಾಹು ವ್ಯಕ್ತಿತ್ವ, ಗೌರವರ್ಣ. ಖಾದಿ ಜುಬ್ಬ, ಧೋತರ, ಟೊಪ್ಪಿ ಹಾಗೂ ಗಾಂಭೀರ್ಯದಿಂದಲೇ ನೋಡುಗರ ಮನವನ್ನು ಚುಂಬಕದಂತೆ ಸೆಳೆಯುವ ಡಾ. ಶಾನಭಾಗರು simple living and high thinking ಗೆ ಹೆಸರಾದವರು. ಆದರ್ಶವನ್ನೇ ಹಾಸಿ ಹೊದ್ದವರು, ಉಸಿರಾಗಿಸಿಕೊಂಡವರು. ವಿದ್ಯಾರ್ಥಿಗಳನ್ನು ತುಂಬ ಆತ್ಮೀಯವಾಗಿ ಕಾಣುವ ಈ ಆಚಾರ್ಯರು ಪಠಿಸುತ್ತಿದ್ದುದು 'ವಿದ್ಯಾರ್ಥಿದೇವೋ ಭವ' ಎಂಬ ಮಂತ್ರ.

ಶಾನಭಾಗ ಗುರುಗಳ ಪಾಠ ಮಾಡುವ ಶೈಲಿ, ವಿದ್ಯಾರ್ಥಿಗಳ ಬಗ್ಗೆ ತೋರುವ ಕಾಳಜಿ, ಕಳಕಳಿ, ಶಿಸ್ತು, ಸಮಯ ಪರಿಪಾಲನೆ, ಪ್ರಾಮಾಣಿಕತೆ, ಕ್ರಿಯಾಶೀಲತೆ, ಪರೋಪಕಾರ ಬುದ್ಧಿ, ನ್ಯಾಯನಿಷ್ಠುರತೆ, ವಾಕ್‌ಚಾತುರ್ಯ, ಸಂಘಟನಾ ಶಕ್ತಿ, ಉಚ್ಚ ವಿಚಾರಗಳು ಯಾವ ಶಿಷ್ಯನ ಚಿತ್ತವನ್ನು ತಾನೇ ಅಪಹರಿಸಿಲ್ಲ?

ಪ್ರತಿ ವರ್ಷ ತಮ್ಮ ಎಲ್ಲ ಆಜಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ಶುಭಾಶಯ ಪತ್ರ ಹಾಗೂ ಪಾಸಾದುದಕ್ಕೆ ಅಭಿನಂದನಾಪತ್ರವನ್ನು ಕೈಯಾರೆ ಬರೆಯುತ್ತಿದ್ದರು. ಮಾಜಿ ವಿದ್ಯಾರ್ಥಿಗಳಿಗೆ ಮಕರ ಸಂಕ್ರಾಂತಿಯ ಕುಸುರೆಳ್ಳು, ನೂಲ ಹುಣ್ಣಿಮೆಯ ರಕ್ಷಾಸೂತ್ರವನ್ನು ಹಾಗೂ ಉಭಯ ಕುಶಲೋಪರಿಯ ಪತ್ರವನ್ನು ಕಳಿಸುವ ಇವರ ಸತ್‌ಸಂಪ್ರದಾಯಕ್ಕೆ, ಶಿಷ್ಯವಾತ್ಸಲ್ಯಕ್ಕೆ ನಾನು ಮೂಕವಿಸ್ಮಿತಳಾಗಿದ್ದೇನೆ. ಕಳೆದ ೩೮ ವರ್ಷಗಳಿಂದಲೂ ಅವರು ನನಗೆ ಬರೆಯುತ್ತಿದ್ದಾರೆ. ಇದರಲ್ಲಿ ತುಸು ವಿಳಂಬವಾದರೂ ನನ್ನ ಮನ ಚಡಪಡಿಸುತ್ತದೆ.

ಅವರು ನಮ್ಮನ್ನು ತಮ್ಮ ಮನೆಗೆ ಆಹ್ವಾನಿಸುವದಲ್ಲದೆ ವಿದ್ಯಾರ್ಥಿಗಳ ಮನೆಗೂ ಅನಿರೀಕ್ಷಿತ ಭೇಟಿ ಇತ್ತು ಮನೆ ಮಂದಿಯೊಡನೆ ಸರಾಗವಾಗಿ ಬೆರೆಯುತ್ತಿದ್ದರು. ನಾವು ವಿದ್ಯಾರ್ಥಿಗಳು ಅವರ ಸ್ಟಾಫ್ ರೂಂಗೆ ಹೋಗಿ ಹರಟುವಾಗ ಎಷ್ಟೋ ಬಾರಿ ಮಸಾಲೆ ದೋಸೆ, ಉದ್ದಿನ ವಡೆ, ಚಹಾವನ್ನು ತರಿಸಿ ತಿನಿಸಿದ್ದಾರೆ. ಬಡ ವಿದ್ಯಾರ್ಥಿಗಳ ಫೀ, ವಸತಿ, ಊಟ, ಔಷಧಿಗಳಿಗಾಗಿ ಉದಾರವಾಗಿ ಖರ್ಚು ಮಾಡಿದ್ದಾರೆ. ಎಲ್ಲರಿಗೂ ಸಹಾಯ ಮಾಡಿ ಮನೆಗೆ ಅರ್ಧ ಸಂಬಳ ಮಾತ್ರ ಒಯ್ಯುತ್ತಿದ್ದರು. ಕಲಿತು ನೌಕರಿ ಸೇರಿದ ನಮಗೆ ಬಡ ವಿದ್ಯಾರ್ಥಿಗಳಿಗಾಗಿ ತುಸು ಧನಸಹಾಯ ಮಾಡುವ ಒಳ್ಳೆಯ ರೂಢಿಯನ್ನು ಹಾಕಿಕೊಟ್ಟರು. ಶಿಷ್ಯರ ಕಲ್ಯಾಣ ಮಾಡುವದು ತಮ್ಮ ಕರ್ತವ್ಯ, ಧರ್ಮವೆಂದು ತಿಳಿದರೇ ಹೊರತು ಯಾವದೇ ಪ್ರತಿಫಲಾಪೇಕ್ಷೆಯಿಂದಲ್ಲ. 'ಕರ್ಮಣ್ಯೇವಾಧಿಕಾರಸ್ತೆ...' ಅವರ ಜೀವನ ದರ್ಶನ ಅಂದಿಗೂ ಇಂದಿಗೂ.

ಪಠ್ಯಕ್ಕಿಂತ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚು ಆಸಕ್ತಿ ತಾಳುತ್ತಿದ್ದ ನಾನು ಸಂಸ್ಕೃತ ವಿಭಾಗದಲ್ಲಿ ಪಂದ್ಯಾಟ, ವರ್ಷಾಕೂಟ, ಬೆಳದಿಂಗಳೂಟ, ನಾಟಕ, ಶೈಕ್ಷಣಿಕ ಪ್ರವಾಸಾದಿಗಳನ್ನು ಏರ್ಪಡಿಸಿ ಎಂದು ಗುರುಗಳಿಗೆ ಗಂಟುಬಿದ್ದಾಗ ಅವೆಲ್ಲವನ್ನು ನಮ್ಮ ವಿಭಾಗದಲ್ಲಿ ಪ್ರಥಮ ಬಾರಿಗೆ ಆರಂಭಿಸಿದರು. 'ನೀನು ತುಂಬಾ ತ್ರಾಸು ಕೊಟ್ಟುಬಿಟ್ಟೆ.

ನನ್ನಿಂದಾಗಿ ನಾನು ೨೨ ವರ್ಷ ಕಾಲ ಸತತವಾಗಿ ಪ್ರವಾಸಾದಿಗಳನ್ನು ಏರ್ಪಡಿಸಬೇಕಾಯ್ತು' ಎಂದು ಶಾನಭಾಗರು ಹುಸಿಮುನಿಸು ತೋರಿದಾಗ ನಾನು ಹೆಮ್ಮೆಪಡುತ್ತೇನೆ. ಇದರಿಂದಾಗಿ ನಮಗೆ ಹಾಗೂ ಕಿರಿಯ ವಿದ್ಯಾರ್ಥಿಗಳಿಗೆ ಆದ ಲಾಭಕ್ಕಾಗಿ ಸಂತೋಷಿಸುತ್ತೇನೆ.

'A great teacher inspires' ಎನ್ನುವಂತೆ ಶಾನಭಾಗರು ವಿದ್ಯಾರ್ಥಿಗಳಿಗೆ ಸ್ಫೂರ್ತಿಯ ಸೆಲೆ. ರಾಷ್ಟ್ರಪ್ರಶಸ್ತಿಯಿಂದ ಹಿಡಿದು ಹಲವಾರು ಶ್ರೇಷ್ಠ ಪ್ರಶಸ್ತಿಗಳಿಗೆ ಭಾಜನರಾದ ಇವರು ತಮ್ಮ ನಿವೃತ್ತಿಯ ನಂತರ 'ಸಂಶೋಧನ' ಎಂಬ ಸಂಸ್ಥೆಯನ್ನು ಹುಟ್ಟುಹಾಕಿ ತಮ್ಮ ವಿದ್ಯಾರ್ಥಿಗಳೊಟ್ಟಿಗೆ ರಾಷ್ಟ್ರಮಟ್ಟದ ಸೆಮಿನಾರು, ಪುಸ್ತಕ ಮುದ್ರಣ, ಅಧ್ಯಯನ ಮುಂತಾದವುಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದಾರೆ. ನನ್ನ ಪ್ರಕಟಿತ ಬಿಡಿ ಹಾಸ್ಯಲೇಖನಗಳನ್ನು ಪುಸ್ತಕರೂಪಕ್ಕೆ ತರಲು ಹಿಂಜರಿಯುತ್ತಿದ್ದ ನನ್ನನ್ನು ಪ್ರೋತ್ಸಾಹಿಸಿ, ಆತ್ಮವಿಶ್ವಾಸ ತುಂಬಿಸಿ ಅದು ಮುದ್ರಣಗೊಳ್ಳುವಂತೆ ಮಾಡಿದ್ದಾರೆ. ನಾನು ಶಿರಸಿಯಿಂದ ಖರೀದಿಸಬಯಸಿದ್ದ ಗಂಧದ ಆಭರಣ ಪೆಟ್ಟಿಗೆಯನ್ನು ಮದುವೆಯಲ್ಲಿ ನನಗೆ ಉಡುಗೊರೆಯಾಗಿ ಕಳಿಸಿ ಆಶ್ಚರ್ಯಪಡಿಸಿದ್ದಾರೆ. ಅದನ್ನು ನಾನು ಒಡವೆಗಳಿಂದಲ್ಲದಿದ್ದರೂ ಗುರುಗಳ ಅಮೂಲ್ಯ ಓಲೆಗಳಿಂದ ಅಲಂಕರಿಸಿ ಬೀರುವಿನಲ್ಲಿ ಭದ್ರವಾಗಿರಿಸಿದ್ದೇನೆ.

ನನ್ನ ಅಲ್ಪಾವಧಿ ಅಧ್ಯಾಪಕ ವೃತ್ತಿಯಲ್ಲಿ ನಾನೇನಾದರೂ ವಿದ್ಯಾರ್ಥಿಗಳನ್ನು ಬಹುವಾಗಿ ಹಚ್ಚಿಕೊಂಡಿದ್ದರೆ ಅಥವಾ ಇಂದು ಬಡವಿದ್ಯಾರ್ಥಿಗಳಿಗೆ ಸಹಾಯ ಸಲ್ಲಿಸುತ್ತಿದ್ದರೆ ಅದೆಲ್ಲ ಕೇವಲ ಗುರುಗಳ ಗಾಢ ಪ್ರಭಾವದಿಂದಲೇ ಎನ್ನುವದು ೧೦೦% ಸತ್ಯ. ಶಾನಭಾಗರು ಎಂದೆಂದೂ ತಮ್ಮ ಅಭಿಪ್ರಾಯಗಳನ್ನು ನಮಗೆ ಉಪದೇಶ ಮಾಡಿಯಾಗಲಿ, ಒತ್ತಾಯಪೂರ್ವಕವಾಗಲಿ ಹೇರಲಿಲ್ಲ. ಅವರು ತಮ್ಮ ಮಟ್ಟಿಗೆ ಹಲವಾರು ಜೀವನ ಮೌಲ್ಯಗಳನ್ನು ಆಚರಣೆಯಲ್ಲಿ ತಂದಿದ್ದರು. ಅವರ ನಡತೆಯಿಂದಲೇ ನಾವು ಅವರನ್ನು ಅನುಕರಿಸುವ ಪ್ರೇರಣೆ ಸಿಗುತ್ತಿತ್ತು. ಇಂಥ ಗುರುವನ್ನು ಪಡೆಯಲು ಅದೃಷ್ಟ ಬೇಕು. ಗುರುವಾಗಿ, ಸ್ನೇಹಿತನಾಗಿ, ಹಿರಿಯಣ್ಣನಾಗಿ, ಮಾರ್ಗದರ್ಶಕನಾಗಿ ತತ್ವಜ್ಞಾನಿಯಾಗಿ ಶಿಷ್ಯಕೋಟಿಯ ಅಭ್ಯುದಯಕ್ಕಾಗಿ ಶ್ರಮಿಸುತ್ತಿರುವ ೭೦ರ ವಯಸ್ಸಿನ ಶಾನಭಾಗರು ಇಂದು ದೈಹಿಕವಾಗಿ ಸ್ವಸ್ಥರಾಗಿಲ್ಲ. ಅವರಿಗೆ ದೇವರು ಭರಪೂರ ಆಯುರಾರೋಗ್ಯವನ್ನು ದಯಪಾಲಿಸಲಿ. ಒಂದು ವೇಳೆ ಪುನರ್ಜನ್ಮವೆಂಬುದು ಇದ್ದಲ್ಲಿ ಡಾ. ಶಾನಭಾಗರೇ ನನ್ನ ಏಳೇಳೂ ಜನ್ಮಗಳಲ್ಲಿ ಗುರುವಾಗಿ ಲಭಿಸಲಿ ಎಂಬುದು ನನ್ನ ಹೃದಯಾಂತರಾಳದ ಪ್ರಾರ್ಥನೆ. ಅವರು ನಮಗೆ ವಿದ್ಯೆಯನ್ನು ಮಾತ್ರ ಕೊಟ್ಟಿಲ್ಲ, ಅರಿವಿನ ಬೆಳಕನ್ನು ನೀಡಿದ್ದಾರೆ. ಅವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೆ. ಸಂಕ್ಷಿಪ್ತದಲ್ಲಿ ಹೇಳುವದಾದರೆ,

ಸಬ್ ಧರತೀ ಕಾಗದ್ ಕರ್ರೂ ಲೇಖನೀ ಸಬ್ ಬನರಾಯ್ ।
ಸಪ್ತ ಸಮಂದರ್ ಕೀ ಮಸಿ ಕರ್ರೂ ಗುರು ಗುನ್ ಲಿಖಾ ನ ಜಾಯ್ ॥ —ಕಬೀರ್

ಸಮಸ್ತ ಪೃಥ್ವಿಯನ್ನೇ ಕಾಗದವನ್ನಾಗಿ ಮಾಡಿ, ಎಲ್ಲ ಮರಗಳನ್ನು ಲೆಕ್ಕಣಿಕೆ ಮಾಡಿ
ಸಪ್ತಸಾಗರಗಳನ್ನೇ ಮಸಿ ಮಾಡಿದರೂ ಗುರು-ಗುಣ(ಮಹಿಮೆ)ವನ್ನು ಬರೆಯಲಾಗದು.

■ ಶೈಲಾ ಛಬ್ಬಿ : ೧೨, ಮೇಘನಂದನ, ತೇಜಸ್ವಿನಗರ, ಧಾರವಾಡ-೫೮೦ ೦೦೭ ■

ಲಲಿತಾ ಸಿದ್ದಬಸವಯ್ಯ

ಹಿಂದೊಮ್ಮೆ ಮುಂದೊಮ್ಮೆ ಎಡಬಲ ಮಗ್ಗುಲಲಿ ಮಗುದೊಮ್ಮೆ
ನಿನ್ನೊಂದಿಗೇ ನಡೆದು ಬಂದಿದ್ದೇನೆ ಕಳೆದ ಮುವ್ವತ್ತು ವರ್ಷ
ಪುರುಷ ನೀನೆಂಬುದನು, ಪ್ರಕೃತಿ ನಾನೆಂಬುದನು ಅದೆಷ್ಟು ಸಲ ಮರೆತು
ನನ್ನ ಪಾತ್ರದಿ ನೀನು ನಿನ್ನ ಪಾತ್ರದಿ ನಾನು ಕುಣಿದು ತೂಗಿಸಿದೆವು ನಾಟಕವನಂತು

ನನ್ನ ನಾಲಿಗೆಯಲಿ ಅರಳಿದ್ದು ಬರಿ ಹೂ ಪತ್ರೆ ಘಮವಲ್ಲ; ಅಲ್ಲಿತ್ತು ಮುಳ್ಳುಕಂಟಿ
ನಿನ್ನ ಹುಂಬತನದಲಿ ನೀ ಕೊಟ್ಟ ಏಟುಗಳಿಗೆ ಜಗದ ಮೇಲಿತ್ತೆ ಔಷಧ ಸಾಟಿ
ಯಾವ ಧೈರ್ಯದಲಿ ನಡೆದೆವ್ರೋ ಅಷ್ಟೊಂದು ಏರುತಗ್ಗಿನ ಇಕ್ಕಟ್ಟಿನೋಣಿಗುಂಟ
ತಿರುಗಿ ನೋಡಿದರೆ ಝಲ್ಲೆನ್ನುವುದು ಜೀವ; ಉದ್ದಕ್ಕೂ ನೀನೇ ದಾರಿನೆಂಟ

ಬೆಣ್ಣೆಯಲಿ ನೂಲೆಳೆದಂತೆ ನುಣ್ಣನೆಯ ಮಿಣ್ಣನೆಯ ಮಾತು ಕಲಿತವ ನೀನಲ್ಲ
ಒಳಗೆ ದತ್ತೂರಿ ಕೆಂಡವನಿರಿಸಿ, ಮೇಲು ಮಾತಿನಲಿ ಉಂಡೆಬೆಲ್ಲವ ತಿರುವವನಲ್ಲ
ಕಡುಜಾಣ ನಾಜೂಕಿನಲಿ ಗಾಜಿನರಮನೆಯೊಳಗೆ ಸೂಜಿ ಬಚ್ಚಿಡುವವನಲ್ಲ
ಪ್ರೀತಿಯೆಂದರೆ ಪ್ರೀತಿ, ದ್ವೇಷವೆಂದರೆ ದ್ವೇಷ ಗೆರೆ ಸರಳ ನಿನ್ನ ಶಬ್ದಕೋಶದರ್ಥ

ಅಹಮಿಕೆಯ ಹುತ್ತದಲಿ ಉಂಡ ಕ್ಷೀರವೂ ವಿಷದ ಹಲ್ಲಾದವಳ
ಬುಸುಗುಡುವ ರಭಸದಲಿ ನನಗೆ ನಾನೇ ಉರಿವ ಕೊಳ್ಳಿಯಾದವಳ
ನಿನ್ನಕ್ಕರೆಯ ಸೇಕದಲಿ ತಣ್ಣನೆಯ ಜ್ಯೋತಮ್ಮನಾಗಿಸಿದೆ ಮನೆಗೆ
ಉಂಡಷ್ಟೂ ಸವೆಯದ ಒಳಮನೆಯ ಕಣಜವದು, ನಿನ್ನೊಲವು ನನಗೆ

ಎಡವಿದ್ದೇನೆ ಲೆಕ್ಕವಿಡಲೂ ನಾಚುವಷ್ಟು ಸಲ ಮತ್ತೆ ಕೊಡವಿ ಎದ್ದಿದ್ದೇನೆ
ತಪ್ಪುಗಳ ಹೊಟ್ಟೆಯಲ್ಲಿಟ್ಟು, ಬೆನ್ನಲ್ಲೂ ನನಗಾಗಿ ಇನ್ನೊಂದು ಜೊತೆ ಕಣ್ಣನ್ನಿಟ್ಟು
ಮಂಡಿ ಬೀಳಿಗೆ ನಿನ್ನ ಅಂಗೈಯ ಕೊಟ್ಟು, ಬಸವಳಿದಾಗ ಭುಜ ಆತುಗೊಟ್ಟು
ಕಕ್ಕುಲತೆ ಹೊಳೆ ಹರಿಸಿದ್ದೀಯ, ಕಾಡೇ ಗೂಡಾಗಿ ಹೋದ ಅಪ್ಪನನು ಮರೆಸುವಷ್ಟು

ಕಂಡ ಸವಿತಿನುಸುಗಳೆಲ್ಲವನು ಒಂದೇ ಗಂಗಳದಲ್ಲುಂಡದ್ದು ನಾವೇ ಅಲ್ಲವೇನು
ಬಂದ ಬವಣೆಯ ನಂಜು ಬಟ್ಟಲನೊಂದೆಗುಕ್ಕಿನಲಿ ನುಂಗಿದ್ದು ನಾವೇ ಅಲ್ಲವೇನು
ಬಿದ್ದಾಗ ನಕ್ಕವರ, ಎದ್ದಾಗ ಕುಕ್ಕುವರ, ಕಡೆಗಣ್ಣಿನರುಗಿನಲಿ ಬಿಟ್ಟುಕೊಂಡು
ಹಕ್ಕಿ ಪತ್ರವ ಬದಿಗಿಕ್ಕಿ, ಬಾಧ್ಯತೆಯ ಬಾಂದುಗಲ್ಲುಗಳನೊಂದೊಂದೇ ಹುಡುಕಿಕೊಂಡು

ಸರಿನೆಂಟರೆದುರಿನಲಿ ಗೆದ್ದ ನಗೆಯನೆ ಹೊರತುಟಿ ತುಂಬ ನಿರತ ಬಿಂಬಿಸುತ್ತ
ಬಿದ್ದ ಬರೆಗಳ ನೋವ ಒಳತುಟಿ ಕಚ್ಚಿ ಇಬ್ಬರೊಂದಾಗಿ ಹಣೆದು ಮಣಿಸುತ್ತ
ನೊಗವುರುಳೆ ನಮ್ಮ ಭುಜಗಳನೆ ಹೂಡಿ, ಕೊಂಡಿ ಕಳಚಿದರೆ ತೋಳುಗಳ ಅವುಚಿ
ಸಮೆದ ಗಾಲಿಗೆ ತೊಡೆಗಳ ಬದಲು ಮಾಡಿ ಕೀಲೆಣ್ಣೆ ತೀರಿದರೆ ತನುವ ನೆತ್ತರ ಮೆತ್ತಿ

ಕೊಟ್ಟ ಕುದುರೆಯನೇರಿ ಪಂಥ ಗೆದ್ದಿದ್ದೇವೆ. ಇಂದು ಕೊರಳಲ್ಲಿ ಜೋಡಿಪದಕ
ಯಾವ ತೇರೊಳಗೆ ಯಾವ ದೇವನಿದ್ದರೇನು, ಜೀವಜಾತುರೆಯಲ್ಲಿ ನೀನೆನ್ನ ನಿತ್ಯಸಖಿ
ಬುತ್ತಿಗಂಟಿನಲಿ ನಾವುಳಿಸಿರುವ ಪುಣ್ಯಫಲ ನಮ್ಮ ಮಕ್ಕಳ ನೆತ್ತಿತಂಪಿಗಿರಲಿ
ಹೊರಡೋಣವೇ ಇನ್ನು, ಅರೆಗಳಿಗೆ ರಥಚಕ್ರ ನಿಲ್ಲಲಹುದೇ ನಡುದಾರಿಯಲ್ಲಿ

■ ಲಲಿತಾ ಸಿದ್ದಬಸವಯ್ಯ :
ಗುರುಸನ್ನಿಧಿ, ೫೨೧೭, ೨ನೇ ತಿರುವು, ಅಶೋಕನಗರ, ತುಮಕೂರು - ೫೭೨ ೧೦೧ ■

'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ: ಕೃತಜ್ಞತೆ- ೨೧

ನನ್ನ ಅಪ್ಪ ನನ್ನ ಅಮ್ಮ

ಮೋಹನ ಹಬ್ಬು

೧. ಏನನ್ನೂ ನೀಡದೆ ಎಲ್ಲವನ್ನೂ ನೀಡಿದ ನನ್ನ ಅಪ್ಪ :

ನನ್ನ ಅಪ್ಪ ತೀರಿಕೊಂಡದ್ದು ೧೯೬೨ ರ ಅಕ್ಟೋಬರ್ ತಿಂಗಳಲ್ಲಿ. ಆ ವರ್ಷ ನಾನು ಕುಮಟಾದ ಕೆನರಾ ಕಾಲೇಜಿನ ವಿದ್ಯಾರ್ಥಿಯಾಗಿದ್ದೆ. ಊರಲ್ಲಿ ನಾನು ಬೇಸಿಗೆಯ ರಜೆಯ ದಿನಗಳನ್ನು ಕಳೆಯುತ್ತಿದ್ದಾಗಲೇ ಅಪ್ಪನ ಸಾವಿನ ಲಕ್ಷಣಗಳು ಗೋಚರಿಸಿದ್ದವು. ಅವನ ಗಂಟಲ ಪಾರ್ಶ್ವದಲ್ಲಿ ಗಂಟೊಂದು ಕಾಣಿಸಿಕೊಂಡಿತ್ತು. ಅಪ್ಪ ಅದನ್ನು ಆಗಾಗ ಒತ್ತಿಕೊಳ್ಳುತ್ತ 'ಕಿಪ್ಪೊಟೆಯಂತ ಕಾಣ್ತದೆ. ಆದರೆ ನೋವೇ ಇಲ್ಲ' ಎಂದು ಅಚ್ಚರಿಪಡುತ್ತಿದ್ದ. ಸುಣ್ಣ-ಬೆಲ್ಲದ ಮಿಶ್ರಣ ಮಾಡಿ ಅದಕ್ಕೆ ಲೇಪಿಸುತ್ತಿದ್ದ. ದಿನೇದಿನೇ ಈ ಗಂಟು ವೃದ್ಧಿಸುತ್ತ ಕೊನೆಗೊಂದು ದಿನ ಬಾಯಿಬಿಟ್ಟು ವ್ರಣವಾಯಿತು. ಗಂಟಲ ವ್ರಣವಾದ್ದರಿಂದ ಆಹಾರ ನುಂಗಲು ಅಪ್ಪ ತಿಣುಕುತ್ತಿದ್ದ. ಕ್ರಮೇಣ ಅವನ ದೇಹ ಕ್ಷೀಣಿಸುತ್ತ ಹೋಯಿತು.

ಮಧ್ಯಂತರದ ರಜೆ ಪ್ರಾರಂಭವಾಗುವ ಒಂದು ವಾರದ ಮುನ್ನ ಊರಿಂದ ನನಗೆ ಸಂದೇಶ ಬಂತು. ಅಪ್ಪ ದಿನಗಳನ್ನು ಎಣಿಸುತ್ತಿದ್ದ. ಹಾಸಿಗೆಯಿಂದ ಎದ್ದೇಳಲೂ ಸಾಧ್ಯವಾಗುತ್ತಿರಲಿಲ್ಲ. ಆತ ಕುಳಿತುಕೊಳ್ಳಲು ಬಯಸಿದಾಗ ನಾನು ತಲೆದಿಂಬನ್ನು ನನ್ನ ಎದೆಗೆ ಆನಿಸಿ ಅವನನ್ನು ಆಧರಿಸಿ ಹಿಡಿಯಬೇಕಾಗುತ್ತಿತ್ತು. ಆತನ ಬದುಕಿನ ಅಂತ್ಯದ ಕ್ಷಣಗಣನೆ ಆರಂಭವಾಗಿತ್ತು. ಪಕ್ಕದ ಮನೆಯಲ್ಲಿ ವಾಸವಾಗಿದ್ದ ನಾಯ್ಕ ಕಾರಕೂನರು ಅಪ್ಪನ ಆರೋಗ್ಯ ವಿಚಾರಿಸಲು ಆಗಾಗ ನಮ್ಮ ಮನೆಗೆ ಬರುತ್ತಿದ್ದರು. ಅಪ್ಪ ಯಾತನೆಯಿಂದ 'ಕಾರಕೂನ್ರೆ! ನನ್ನ ಕತೆ ಮುಗೀತು' ಎಂದು ನಿಟ್ಟುಸಿರಿಡುತ್ತಿದ್ದರು. ಕಾರಕೂನರು, ಪಾಪ, ಏನೂ ಹೇಳಲಾಗದೇ ಮುಖದಲ್ಲೇ ಸಂತಾಪ ಸೂಚಿಸುತ್ತಿದ್ದರು. ಅಪ್ಪ ಏಡಿ-ಗಂತಿಯ ಹಿಡಿತದಿಂದ ಪಾರಾಗುವ ಸಾಧ್ಯತೆ ತೀರ ಕಡಿಮೆಯಾಗಿತ್ತು. ಒಂದು ದಿನ ಯಾತನೆ ತಾಳಲಾರದೆ ರಸ್ತೆಯಾಚೆಯ

ಮನೆಯೊಂದರಲ್ಲಿ ವಾಸವಾಗಿದ್ದ ಭಿಡೆ ಕಂಪೌಂಡರರನ್ನು ಕರೆದುಕೊಂಡು ಬರಬೇಕೆಂದು ಹಟ ಹಿಡಿದ. ಭಿಡೆಯವರು ಬರಲಿಲ್ಲ, ಅವರ ನಿರ್ಧಾರ ತಪ್ಪು ಎನ್ನುವಂತಿರಲಿಲ್ಲ. ಆ ಕುಗ್ರಾಮದಲ್ಲಿ ಯಾವುದೇ ವೈದ್ಯಕೀಯ ಸೌಲಭ್ಯಗಳು ಇಲ್ಲದಿರುವಾಗ, ಕಂಪೌಂಡರರೇ ಡಾಕ್ಟರರಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಪರಿಮಿತ ಜ್ಞಾನದ ಭಿಡೆಯವರು ಏನು ಮಾಡಲು ಸಾಧ್ಯವಿತ್ತು? ಪ್ರಾಯಶಃ ಯಾವ ಶಕ್ತಿಯೂ ಅಪ್ಪನನ್ನು ಮೂಲ ಸ್ಥಿತಿಗೆ ತರುವಂತಿರಲಿಲ್ಲ. ಅಪ್ಪ ತೆವಳುತ್ತ ಭಿಡೆಯವರ ಮನೆಗೆ ಹೋಗುವವನ್ನು ಕಂಡು ಅಂಗಡಿಯ ಇಬ್ರಾಹಿಮ್ ಸಾಹೇಬರು 'ಇದೇನು ಹುಚ್ಚು ನಿಮ್ದು? ಮನೆಗೆ ಹೋಗಿ' ಎಂದು ಗದ್ದರಿಸಿ ಅಪ್ಪನನ್ನು ಮನೆಗೆ ಸೇರಿಸಿದರು. ಅಪ್ಪನಿಗೆ ಸಾವಿನ ಭಯವಿದ್ದಂತಿತ್ತು. ಮಕ್ಕಳ ಭವಿಷ್ಯದ ಕುರಿತು ಆತಂಕವಂತೂ ಇದ್ದೇ ಇತ್ತು.

ದೀಪಾವಳಿಯ ಅಮಾವಾಸ್ಯೆಯ ದಿನ ಮಂಚಿಕೇರಿಯಲ್ಲಿ ಬೆಳಿಗ್ಗೆ ೫ ಗಂಟೆಗೆ ಅಪ್ಪ ತೀರಿಕೊಂಡ. ಅವನ ಜೀವನದ ಹಣತೆ ನಂದಿತು. ನಸುಕು ಹರಿದಾಗ ನಮ್ಮ ಮನೆಯಲ್ಲಿ ಕತ್ತಲಾವರಿಸಿತ್ತು.

ಅಪ್ಪನ ಮೂಲ ಊರು ಕಾರವಾರ ತಾಲೂಕಿನ ಅರಗಾ ಗ್ರಾಮ. ಪ್ರಾಯಶಃ ಅವನ ೨೦ ನೆಯ ವಯಸ್ಸಿನಲ್ಲಿ ಶಾನುಭೋಗ ಗ್ರಾಮಲೆಕ್ಕಿಗನಾಗಿ ಕೆಲಸಕ್ಕೆ ಸೇರಿದ್ದ. ನಾನು ಎಂಟನೆಯ ವರ್ಗದಲ್ಲಿದ್ದಾಗಲೇ ಅಪ್ಪ ತನ್ನ ಐವತ್ತೈದನೆಯ ವಯಸ್ಸಿನಲ್ಲಿ ನಿವೃತ್ತಿ ಹೊಂದಿದ್ದ (೧೯೫೮). ಮೂವತ್ತೈದು ವರ್ಷಗಳ ಸೇವಾವಧಿಯನ್ನು ಹಳಿಯಾಳ, ಯಲ್ಲಾಪುರ, ಅಂಕೋಲಾ ಹಾಗೂ ಭಟಕಳ ತಾಲೂಕುಗಳಲ್ಲಿ ಕಳೆದಿದ್ದ. ಸುಮಾರು ಇಪ್ಪತ್ತು ವರ್ಷಗಳಷ್ಟು ದೀರ್ಘಕಾಲ ಯಲ್ಲಾಪುರ ತಾಲೂಕಿನ ಮಂಚೀಕೇರಿ ಎಂಬ ಗ್ರಾಮದಲ್ಲಿ ಜೀವನ ಸಾಗಿಸಿದ್ದ. ಆತ ಪ್ರಾಮಾಣಿಕನಾಗಿದ್ದ –ಎಷ್ಟೆಂದರೆ –ಅವನಿಂದ ಕೆಲಸ ಮಾಡಿಕೊಂಡ ಹಳ್ಳಿಯ ಜನರು ಪ್ರತಿಫಲವಾಗಿ ಬಾಳೆಗೊನೆಯನ್ನೋ, ಅಡಕೆಯನ್ನೋ ತಂದುಕೊಟ್ಟರೆ, 'ನನ್ನ ಕೆಲಸಕ್ಕೆ ಸರಕಾರ ಸಂಬಳ ಕೊಡುತ್ತದೆ ಇಕೊಳ್ಳಿ' ಎನ್ನುತ್ತ ಅದರ ಅಂದಾಜು ಬೆಲೆಯನ್ನು ಅವರಿಗೆ ಕೊಟ್ಟು ಕಳುಹಿಸುತ್ತಿದ್ದ. ಒಬ್ಬಳೇ ಮಗಳು ಹಾಗೂ ಆರು ಗಂಡುಮಕ್ಕಳ ಬೃಹತ್ ಸಂಸಾರವಾದರೂ ದೂರದ ಹಳ್ಳಿಯಿಂದ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ನಮ್ಮ ಮನೆಯ ಬಾಗಿಲು ಸದಾ ತೆರೆದಿರುತ್ತಿತ್ತು. ಮಂಚೀಕೇರಿಯಲ್ಲಿ ಬಂಧುಬಳಗದವರು ಯಾರೂ ಇರದಿದ್ದರೂ, ಅಪ್ಪನಿಗೆ ಜನಸಂಪರ್ಕ ಚೆನ್ನಾಗಿತ್ತು. ಆಗಾಗ ಅವನ ಸ್ನೇಹಿತರು ಮನೆಗೆ ಬರುತ್ತಿದ್ದರು.

ಅಪ್ಪನಿಗೆ ಬೀಡಿ ಸೇದುವ ಚಟವಿತ್ತು. ಒಮ್ಮೆ ನಾನು ಪ್ರಾಯಶಃ ಆಗ ಎಂಟು ವರ್ಷದ ಹುಡುಗ – ಅಪ್ಪನ ಗ್ರಾಮಚಾವಡಿಗೆ ಹೋಗಿದ್ದೆ. ಗೋಡೆಯ ಮೇಲೆ 'ಇಲ್ಲಿ ಬೀಡಿ ವಗೈರೆ ಸೇದಬಾರದು' ಎಂದು ಬರೆದ ಫಲಕವನ್ನು ನೋಡಿದೆ. ಅಪ್ಪ ಸ್ನೇಹಿತರೊಡನೆ ಬೀಡಿ ಸೇದುತ್ತಿದ್ದ. ನಾನು ಕೇಳಿಯೇ ಬಿಟ್ಟೆ, 'ಅಪ್ಪ, ಬೋರ್ಡಿನಲ್ಲಿ ಹೀಗಿದೆ. ನೀನು ಬೀಡಿ ಸೇದ್ತಿದೀಯಲ್ಲ!' ಅಲ್ಲಿದ್ದವರೆಲ್ಲ ನಕ್ಕರು. ಅಪ್ಪನ ಸ್ನೇಹಿತ ಕಂಪ್ಲಿ ಶಿವರಾಮ ಹೆಗಡೆಯವರು 'ಶಾನುಭೋಗ್ರೆ! ನಿಮ್ಮ ಮಗ ಜೋರಾಗಿದಾನೆ : ನೋಡಿ ನಿಮಗೇ ಪ್ರಶ್ನೆ ಹಾಕಿಬಿಟ್ಟ' ಎಂದರು.

'ಹಬ್ಬು' ಉಪನಾಮವುಳ್ಳ ಸಮುದಾಯ ಬ್ರಾಹ್ಮಣವರ್ಗದಲ್ಲೇ ಅತಿ ಚಿಕ್ಕದು. ಮೂಲತಃ ನಾವು ಸ್ಮಾರ್ತ ಬ್ರಾಹ್ಮಣರು. ಮಂಚೀಕೇರಿಯ ಸುತ್ತಣ ಹಳ್ಳಿಗಳಲ್ಲಿ ಹವ್ಯಕ ಬ್ರಾಹ್ಮಣರು

ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರೂ ಸ್ಮಾರ್ತ ಸಂಪ್ರದಾಯದವರೇ. ಇದು ನಾನು ಕುಂಬಾರಮಕ್ಕಿ ಭಟ್ಟರಿಂದ ಕೇಳಿದ ಕತೆ. ಒಮ್ಮೆ ಅಪ್ಪ ಸ್ನೇಹಿತ ಕಂಪ್ಲಿ ಶಿವರಾಮ ಹೆಗಡೆಯವರ ಆಮಂತ್ರಣದ ಮೇರೆಗೆ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಅವರ ಮನೆಗೆ ಹೋಗಿದ್ದರಂತೆ. ಊಟಕ್ಕೆ ಅಪ್ಪನಿಗೆ ಅಡ್ಡಪಂಕ್ತಿ ನೀಡಿದರಂತೆ. ಅಪ್ಪನಿಗೆ ಸಿಟ್ಟು ಬಂದು ಪಂಕ್ತಿಯಿಂದೆದ್ದು, 'ನನ್ನ ಬ್ರಾಹ್ಮಣ್ಯಕ್ಕೆ ಬೆಲೆ ಇಲ್ಲವೆಂದಾದರೆ ನಾನು ಧರಿಸಿದ ಈ ಜನಿವಾರಕ್ಕೇನು ಬೆಲೆ? ಇಕೊಳ್ಳಿ' ಎನ್ನುತ್ತ ಜನಿವಾರವನ್ನು ಹರಿದುಹಾಕಿದನಂತೆ. ಆಮೇಲೆ ಎಲ್ಲರೂ ಅವನನ್ನು ಸಮಾಧಾನಗೊಳಿಸಿ ಹೊಸ ಜನಿವಾರವನ್ನು ತೊಡಿಸಿ ಸಹಪಂಕ್ತಿಯಲ್ಲಿ ಅವಕಾಶ ನೀಡಿದರಂತೆ.

ಅಪ್ಪ ಸತ್ತಾಗ ನನ್ನ ವಯಸ್ಸು ಹದಿನೆಂಟು. ಅಣ್ಣ ದೈಹಿಕವಾಗಿ ದುರ್ಬಲ. ಮನೆಯಲ್ಲಿ ಮಾರ್ಗದರ್ಶನ ಮಾಡಲು ಹಿರಿಯರಾರೂ ಇರಲಿಲ್ಲ. ಅಪ್ಪನ ಮೃತದೇಹ ಹಾಸಿಗೆಯ ಮೇಲೆ ಒರಗಿದಾಗ ಮುಂದೇನು ಎಂದು ಹೊಳೆಯದೆ ದಿಕ್ಕು ತಪ್ಪಿದವನಾಗಿದ್ದೆ. ಮನೆಯೆದುರಿಗೆ ವಿಶ್ವೇಶ್ವರ ಶಾಸ್ತ್ರಿ ಎಂಬುವವರಿದ್ದರು. ಅವರು ಮುಂಬಯಿಯಲ್ಲಿ ಕೆಲ ಕಾಲ ವಾಸವಾಗಿದ್ದರು. ಅವರನ್ನು ಬೊಂಬೆ ಶಾಸ್ತ್ರಿ ಎಂದೇ ಕರೆಯುತ್ತಿದ್ದರು. ಅವರೇ ಅಪ್ಪನ ಇಬ್ಬರು ಸ್ನೇಹಿತರಿಗೆ ಹೇಳಿ ಕಳುಹಿಸಿದರು. ಮಂಚೀಕೇರಿಯ ಹೈಸ್ಕೂಲಿನ ಮುಖ್ಯಾಧ್ಯಾಪಕರಾಗಿದ್ದ ದಿವಂಗತ ವಿ. ಆರ್. ಹೆಗಡೆಯವರು ವಿಷಯ ತಿಳಿದು ನಮ್ಮ ಮನೆಗೆ ಬಂದರು. ಕೆಳಗಿನ ಮಂಚೀಕೇರಿಯ ಶೇಷಭಟ್ಟರು, ಪರಮಭಟ್ಟರು ಚಟ್ಟವನ್ನು ಸಿದ್ಧಪಡಿಸಿದರು. ಅಪ್ಪನ ಹೆಣವನ್ನು ದರ್ಭೆಯ ಮೇಲೆ ಮಲಗಿಸಿ ಸ್ನಾನಾದಿ ಶುದ್ಧಿಕಾರ್ಯವನ್ನು ಮಾಡಿ ಸ್ಮಶಾನಕ್ಕೆ ಸಾಗಿಸಲಾಯಿತು. ಅದಾಗಲೇ ಮಾಬ್ಲ ಶೆಟ್ಟರು ಮಂಚೀಕೇರಿಯ ಸಮೀಪದ ಹರೀಗದ್ದೆ ರಸ್ತೆಯ ಪಾರ್ಶ್ವದ ಅರಣ್ಯದ ಒಂದು ಸ್ಥಳದಲ್ಲಿ ಕಟ್ಟಿಗೆಯ ವ್ಯವಸ್ಥೆ ಮಾಡಿದ್ದರು. ಚಟ್ಟಕ್ಕೆ ಹೆಗಲು ಕೊಡಲು ಮೇಲೆ ಉಲ್ಲೇಖಿಸಿದ ಮೂರೇ ಜನ ಇದ್ದರು. ನಾಲ್ಕನೆಯವನಾಗಿ ನಾನು ಹೆಗಲು ಕೊಟ್ಟೆ.

ಅಪ್ಪನ ಶವವನ್ನು ಅಗ್ನಿಗೆ ಅರ್ಪಿಸಿ ಮನೆಗೆ ಬಂದಾಗ ಮಧ್ಯಾಹ್ನ ಮೂರು ಗಂಟೆ. ಮನೆಯಲ್ಲಿ ಒಂದು ಹಿಡಿ ಅವಲಕ್ಕಿ ಇರಲಿಲ್ಲ. ಮಾಜಿ ಶಾಸಕರಾಗಿದ್ದ ಪಿ. ಎಸ್. ಫಾಯದೆ ಅವರು ತಮ್ಮ ಮನೆಯಿಂದ ನಾಲ್ಕು ಪಾಯಲಿ ಅಕ್ಕಿ ಕಳುಹಿಸಿಕೊಟ್ಟಿದ್ದರು.

ನಾವಿದ್ದದ್ದು ಬಾಡಿಗೆ ಮನೆಯಲ್ಲಿ. ಸ್ವಂತ ಸೂರಿಲ್ಲದೇ ಅಪ್ಪ ನಡೆದಾಗ ಅವನಿಗೆ ಅರವತ್ತು ವರುಷ. ಮಾಸಿಕ ನಾಲ್ವತ್ತು ರೂಪಾಯಿ ನಿವೃತ್ತಿವೇತನದ ಹೊರತಾಗಿ ಬೇರೆ ಯಾವದೇ ಉತ್ಪನ್ನ ಮೂಲವಿಲ್ಲದ ಅಪ್ಪ ನಮ್ಮನ್ನು ನಡುನೀರಿನಲ್ಲಿ ಕೈ ಬಿಟ್ಟಿದ್ದ. ಅಥವಾ ಅದೃಶ್ಯ ರೂಪದಲ್ಲಿ ನಮ್ಮನ್ನು ಕೈ ಹಿಡಿದು ನಡೆಸುತ್ತಿದ್ದನೆ? ಅವ ಬಿಟ್ಟುಹೋದದ್ದು ಅಮ್ಮನನ್ನು, ನನ್ನನ್ನು ಹಿಡಿದು ಆರು ಗಂಡುಮಕ್ಕಳನ್ನು, ಖಾಲಿ ಪಾತ್ರೆಗಳನ್ನು ಹಾಗೂ ನಮ್ಮದಲ್ಲದ ಭಾಡಿಗೆ ಮನೆಯನ್ನು.

ನನ್ನ ಅಪ್ಪನಿಗೆ ಒಬ್ಬ ತಮ್ಮ ಹಾಗೂ –ನಾನು ಎಂದೂ ನೋಡದ –ತಂಗಿ ಇದ್ದರು. ಪಿತ್ರಾರ್ಜಿತವಾದ ಒಂದಷ್ಟು ಭತ್ತದ ಗದ್ದೆ ಮತ್ತು ಒಂದು ಮನೆ ಇತ್ತು. ಮುಲ್ಕೀ ಪರೀಕ್ಷೆ ಪಾಸಾದ ನಂತರ ಅಪ್ಪ ಕೆಲಸಕ್ಕೆ ಸೇರಿದ. ಅಷ್ಟರಲ್ಲೇ ಅವನ ತಂಗಿಯ ಮದುವೆಯಾಗಿತ್ತು. ಅಪ್ಪ ಸಕಲ ಆಸ್ತಿಯನ್ನು ತಮ್ಮನಿಗೆ ಒಪ್ಪಿಸಿ ಹೊರಟುಬಿಟ್ಟ. ಚಿಕ್ಕಪ್ಪ ಊರ ಸೊಸೈಟಿಯ

ಸೆಕ್ರೆಟರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ. ಅಪ್ಪ ಚಿಕ್ಕಪ್ಪನ ಮದುವೆಯನ್ನು ಮಾಡಿದ. ತನ್ನ ಮೂವತ್ತೊಂದನೆಯ ವರ್ಷದ ವರೆಗೂ ಆತ ಅವಿವಾಹಿತನಾಗಿಯೇ ಉಳಿದ.

ದಿನಾಂಕ ೯-೪-೧೯೩೩ ರಂದು ಆತ ಬರೆದ ಒಂದು ಪತ್ರದ ಮಜಕೂರ ಹೀಗಿದೆ :

'ತಮ್ಮ ಉಪದೇಶಪರ ವಾಕ್ಯಗಳನ್ನೊಳಗೊಂಡ ಸಂದೇಶವು ಬಂದು ಮುಟ್ಟಿದ್ದಕ್ಕೆ ಉತ್ತರವಾಗಿ ಸತ್ಯವನ್ನು ಸ್ಮರಿಸಿ. ಯಾವದೂ ಮುಚ್ಚುಮರೆ ಇಲ್ಲದೆ ತಮಗೆ ಅರಿಗೆ ಮಾಡಿಕೊಂಡದ್ದಾಯ್ತು. ಇಲ್ಲಿ ಒಂದು ಮಾತು ಬರೆಯದಿದ್ದರೆ ನನ್ನ ಅಂತರ್ಯವು ತಾವು ಸತ್ಪಕ್ಷಪಾತಿಗಳೂ, ದೀನದಯಾಳರೂ, ದುಷ್ಟರ ನಿಗ್ರಹ ಮಾಡುವಂಥವರೂ ಎನ್ನುವದು ಈ ವರೆಗಿನ ತಮ್ಮ ಕೃತಿಯಿಂದಲೇ ಜನತೆಯ ನಿದರ್ಶನಕ್ಕೆ ಬರುತ್ತದೆ. ನನ್ನ ಅಂತಃಕರಣವನ್ನೇ ತಮ್ಮ ಮುಂದಿಡುತ್ತಿದ್ದೇನೆ.'

'ನಾನೊಬ್ಬ ಬಡತನದಿಂದ ಕಾಲ ಕಳೆದು ಈ ಸ್ಥಿತಿಗೆ ಬಂದು ಮುಟ್ಟಿದವನು. ನನ್ನ ತಾರುಣ್ಯಾವಸ್ಥೆಯಲ್ಲಿ ನಮ್ಮ ಸಮಾಜದ ರೀತಿನೀತಿಗಳಿಗನುಸರಿಸಿ ನನ್ನ ಬಡತನದ ಕಾರಣವು ನನ್ನ ಇಚ್ಛೆಯನ್ನು ಪೂರೈಸಿಕೊಳ್ಳುವದಕ್ಕಾಗಿ ಒಬ್ಬ ಸ್ತ್ರೀಯ ಮೋಹಪಾಶಕದಲ್ಲಿ ಬಿಗಿಯುವಂತೆ ಮಾಡಿತು. ತಾರುಣ್ಯದ ಮದವೇರಿದ ವ್ಯಕ್ತಿಗೆ ಸದಸದ್ವಿವೇಕವು ಎಲ್ಲಿಂದ ಬರಬೇಕು? ಆದರೆ ವಿವೇಕವು ಹೊಳೆದಾಗಲೆಲ್ಲ ಆ ಸ್ತ್ರೀಯು ನನ್ನನ್ನು ಅಡ್ಡದಾರಿಗೆ ಎಳೆದು ಕಂಟಕಪ್ರಾಯ ವಾಗುತ್ತಿದ್ದಳು. ಈ ಪರಿಣಾಮವಾಗಿ ೧೧ ವರ್ಷಗಳು ಕಳೆದವು..... ನನ್ನ ಸದಸದ್ವಿವೇಕವು ಅವಳನ್ನು ತ್ಯಾಜ್ಯ ಮಾಡಿದ ವಿನಹ ಉನ್ನತಿಯಾಗಲಾರದೆಂಬುದನ್ನೂ ನಿರ್ದೇಶ ಮಾಡಿತು.....'

ಇಂತಿ ತಮ್ಮ ನಮ್ರ ಸೇವಕ (ಸಹಿ)

ಪತ್ರದಲ್ಲಿನ ಆ ಮಹನೀಯರು ಯಾರು ಎಂಬುದರ ಉಲ್ಲೇಖವಿಲ್ಲ.

ಅಂತೂ ತನ್ನ ೪೦ರ ವಯಸ್ಸಿನಲ್ಲಿ ಆ ಸ್ತ್ರೀಯನ್ನು ತ್ಯಜಿಸಿ, ಇನ್ನೊಂದು ಹೆಣ್ಣನ್ನು (ನನ್ನ ಅಮ್ಮನನ್ನು) ಮದುವೆಯಾದ. ಮುಂದಿನ ಹದಿನೈದು ವರ್ಷಗಳಲ್ಲಿ ಎಂಟು ಮಕ್ಕಳು ಹುಟ್ಟಿದವು. ಹಿರಿಯವಳು ನನ್ನಕ್ಕ, ಮಧ್ಯದಲ್ಲಿ ಆರು ಗಂಡುಮಕ್ಕಳು, ಕೊನೆಯಲ್ಲಿ ಒಂದು ಹೆಣ್ಣು. ಅಪ್ಪ ಆಗಾಗ ಹಾಡಿಕೊಳ್ಳುತ್ತಿದ್ದ :

"ವರ್ಷಕ್ಕೆ ಒಂದು ಕೂಸು ಹುಟ್ಟುತ್ತದೆ / ಅಜ್ಜಿಗೆ ಆಗ್ತದೆ ಆನಂದ"

ನನ್ನ ತಂಗಿ ಹುಟ್ಟಿದಾಗ –ಪ್ರಾಯಶಃ ನಾನು ಹತ್ತು ವರ್ಷದವ –ಗಾಂವಕಾರ ಮಾಸ್ತರರು ನನ್ನನ್ನು ಕೇಳಿದರು 'ತಮ್ಮನೋ ತಂಗಿಯೋ?' ನಾನು ಹರ್ಷದಿಂದ ಉತ್ತರಿಸಿದ್ದೆ. 'ತಂಗಿ'. ಮಾಸ್ತರರು 'ಚಚ್‌ಚ್' ಎಂದು ವಿಷಾದ ವ್ಯಕ್ತಪಡಿಸಿದ್ದು ಯಾಕೆಂದು ಆಗ ನನಗೆ ಅರ್ಥವಾಗಲಿಲ್ಲ. ಕಿರಿಯ ತಂಗಿ 'ಜಾಂಡಿಸ್'(ಹಳದಿ ರೋಗ)ದಿಂದ ತೀರಿಕೊಂಡಳು. ಆ ನಂತರದ ನನ್ನ ಹಾಗೂ ನನ್ನ ತಮ್ಮಂದಿರ ಹೋರಾಟದ ಕಥೆ ಇಲ್ಲಿ ಅಪ್ರಸ್ತುತ. ನಿವೃತ್ತಿಯ ನಂತರದ ಅಪ್ಪನ ಮಹತ್ವದ ಸಾಧನೆಯೆಂದರೆ ಅಕ್ಕನ ಮದುವೆ ಮಾಡಿದ್ದು.

ಅಪ್ಪನಿಗೆ ಹಳೆಗನ್ನಡ, ಹೊಸಗನ್ನಡ ಸಾಹಿತ್ಯದ ಅರಿವಿತ್ತು. ಕೊಂಕಣಿ, ಮರಾಠಿ ಭಾಷೆಗಳನ್ನು ಅರಿತಿದ್ದ. 'ಆದಿ ಬೀಜ ಏಕಲೆ: ಬೀಜ ಅಂಕುರಲೆ; ರೂಪವಾಢಲೆ' (ಆದಿಯಲ್ಲಿ ಒಂದು ಬೀಜವಿತ್ತು, ಬೀಜ ಅಂಕುರಿಸಿತು. ರೂಪ ಬೆಳೆಯಿತು) ಇದು ಅವನ ಪ್ರಿಯ ಪದ್ಯ. ಹೈಸ್ಕೂಲಿನ ಶಿಕ್ಷಕರಿಂದ ಬಿಡಿಸಲಾಗದ ಅಂಕಗಣಿತದ ಸಮಸ್ಯೆಗಳನ್ನು ಆತ ಪರಿಹರಿಸಿದ ಉದಾಹರಣೆಗಳಿದ್ದವು.

ನಾನು ಎಂಟನೆಯ ವರ್ಗದಲ್ಲಿದ್ದಾಗ (ನನಗಾಗ ೧೩ ರ ವಯಸ್ಸು) ಒಮ್ಮೆ ನನ್ನನ್ನು ತನ್ನ ಜೊತೆಗೆ ವಾಯುವಿಹಾರಕ್ಕೆ ಕರೆದುಕೊಂಡು ಹೋಗಿದ್ದ. ಅಪ್ಪನಿಗಾಗ ಐವತ್ತೆರಡು ವರ್ಷ. ಆ ಸಂದರ್ಭದಲ್ಲಿ ಆತ ನನಗೆ ಕೇಳಿದ ಪ್ರಶ್ನೆ ಹೀಗಿತ್ತು : 'ಒಂದು ವೇಳೆ ನಾನು ಸತ್ತುಹೋದರೆ ನೀನೇನು ಮಾಡುವೆ?' ನನ್ನ ಬಾಡಿದ ಮುಖ ಕಂಡು ಆತ ನಗುತ್ತ ಸಂತೈಸಿದ, 'ಈಗ್ಲೆ ನಾನು ಸಾಯೋದಿಲ್ಲ ಬಿಡು.' ಅಪ್ಪನಿಗೆ ತನ್ನ ಇಳಿವಯಸ್ಸಿನ ಅರಿವಿತ್ತು. ಮಕ್ಕಳ ಭವಿಷ್ಯದ ಬಗ್ಗೆ ಚಿಂತೆಯಿತ್ತು.

ನನ್ನ ಬದುಕಿನ ಹೋರಾಟದ ಹಲವು ಸಂದರ್ಭಗಳಲ್ಲಿ ನನಗೆ ಅಪ್ಪನ ಬಗ್ಗೆ ಸಿಟ್ಟು ಬರುತ್ತಿತ್ತು. ಒಮ್ಮೆ ಆತ ಹೇಡಿಯಂತೆ ಮನೆಬಿಟ್ಟು ಹೋದ ಸಂದರ್ಭ ನನಗೆ ನೆನಪಿತ್ತು. ಆದ ನಮಗೆ ನಿಲ್ಲಲು ನೆಲೆಯನ್ನು ಕಲ್ಪಿಸದೇ ನಮ್ಮನ್ನು ನಡುನೀರಿನಲ್ಲಿ ಬಿಟ್ಟು ಸತ್ತ ಎಂದು ಯೋಚಿಸಿದಾಗ ಸಂತಾಪವಾಗುತ್ತಿತ್ತು.

ನಾನು ನಿವೃತ್ತನಾದ ನಂತರ, ಅಪ್ಪನ ಹಳೆಯ ಕಡತವನ್ನು ಪರಿಶೀಲಿಸುತ್ತಿದ್ದಾಗ, ಅವನ ಬರೆಹದ ಹಳೆಯ ಕಟ್ಟೊಂದು ಸಿಕ್ಕಿತು. ಕುತೂಹಲದಿಂದ ಅವನ ಬರೆಹಗಳನ್ನು ಓದಿದಾಗ, ವರ್ತಮಾನಕ್ಕೆ ಸ್ಪಂದಿಸದ ಒಬ್ಬ ಶ್ರೀಸಾಮಾನ್ಯನ ಮನಸ್ಸಿನ ಒಳನೋಟಗಳ ಅರಿವಾಯಿತು. ಅಪ್ಪನ ಕುರಿತಾದ ನನ್ನ ನಿಲುಮೆಯನ್ನು ಬದಲಿಸಿಕೊಳ್ಳಬೇಕಾಯಿತು. ಭೌತಿಕ ಅರ್ಥದಲ್ಲಿ ಆತ ಮಕ್ಕಳಿಗಾಗಿ ಏನನ್ನೂ ಮಾಡಲಿಲ್ಲ. ಆದರೆ, ಈ ಲೋಪವೇ ನಮಗೆ ಬದುಕಿಗಾಗಿ ಹೋರಾಟ ಮಾಡಲೇಬೇಕಾದ ಅನಿವಾರ್ಯತೆಯನ್ನೂ, ಹೋರಾಟಕ್ಕೆ ಬೇಕಾದ ಮನೋಬಲವನ್ನು ಒದಗಿಸಿ ಕೊಟ್ಟಿತು. ಇಂದು ನಾವು –ಆರು ಗಂಡುಮಕ್ಕಳು –ಉತ್ತಮ ಬದುಕನ್ನು ಪಡೆಯಲು ಸಾಧ್ಯವಾದುದು. ಈ ಬಲದಿಂದಲೇ ಅದಕ್ಕಾಗಿ ನಾವೆಲ್ಲರೂ ಅಪ್ಪನಿಗೆ ಚಿರಋಣಿಗಳು.

ಅಪ್ಪ ಚಿಂತನಶೀಲನಾಗಿದ್ದ. ಕಾಲಕಾಲಕ್ಕೆ ಬರೆಹದ ಮೂಲಕ ತನ್ನ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಿದ್ದ. ಆತ ಅಪ್ಪಟ ಗಾಂಧೀವಾದಿಯಾಗಿದ್ದ. ಗಾಂಧಿಯವರನ್ನು ದೇವರ ಅವತಾರವೆಂದೇ ಭಾವಿಸಿದ್ದ. ಸಾವಿನ ವರೆಗೂ ಆತ ಖಾದಿ ಧೋತರ, ಖಾದಿ ಜುಬ್ಬ ಧರಿಸುತ್ತಿದ್ದ. ದೇಶದ ಏಳ್ಗೆ ಅವನ ಹಂಬಲವಾಗಿತ್ತು. ಸ್ವಾತಂತ್ರ್ಯಪೂರ್ವ ದಿನಗಳನ್ನು ಕಂಡ ಆತನಿಗೆ ಸ್ವಾತಂತ್ರ್ಯೋತ್ತರ ಭಾರತದ ಬಗ್ಗೆ ಹಲವು ಕನಸುಗಳಿದ್ದವು. ಸಮಾಜದಲ್ಲಿರುವ ನ್ಯೂನತೆಯ ಬಗ್ಗೆ ಸ್ಪಷ್ಟ ಸಾಲುಗಳಿದ್ದವು. ಆತನದು ಪ್ರಗತಿಶೀಲ ಮನೋಧರ್ಮವಾಗಿತ್ತು. ಆತನ ಧೋರಣೆ ದಲಿತಪರವಾಗಿತ್ತು. ಮುಖ್ಯವಾಗಿ ಆತ ತನ್ನ ದೌರ್ಬಲ್ಯಗಳನ್ನರಿತ ಪ್ರಾಮಾಣಿಕ ವ್ಯಕ್ತಿಯಾಗಿದ್ದ.

ಬದುಕಿದ್ದರೆ, ಅಪ್ಪನಿಗೆ ಈಗ ಒಂದು ನೂರು ವರ್ಷ ವಯಸ್ಸಾಗಿರುತ್ತಿತ್ತು. ಈ ಬರಹದ ಮೂಲಕ, ನಾನು ಅವನಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

೨. ಎಲ್ಲ ಕೊಟ್ಟು ಏನನ್ನೂ ಪಡೆಯದ ನನ್ನ ಅಮ್ಮ :

ನನ್ನ ಅಮ್ಮನಿಗೆ ಈಗ ೮೩ ರ ವಯಸ್ಸು. ಜೀವನದ ನೋವು-ನಲಿವುಗಳನ್ನು –ನಲಿವಿಗಿಂತ ನೋವೇ ಹೆಚ್ಚು –ಬಹು ದೀರ್ಘ ಕಾಲ ಅನುಭವಿಸಿ ಮಾಗಿದ ಜೀವ ಅದು. ನನ್ನ ಅಪ್ಪನಿಗೂ ಅಮ್ಮನಿಗೂ ಇಪ್ಪತ್ತು ವರ್ಷಗಳ ವ್ಯತ್ಯಾಸ. ಮದುವೆಯ ನಂತರ ಹದಿನಾರು ವರ್ಷ ಮಕ್ಕಳನ್ನು ಹಡೆಯುವದು. ಅವರನ್ನು ಬೆಳೆಸುವದು ಅವಳ ಕಾಯಕವಾಯಿತು. ಅಪ್ಪ ಸತ್ತಾಗ ಅಮ್ಮನಿಗೆ ನಾಲ್ವತ್ತು ವರ್ಷ. ಆರು ಮಕ್ಕಳ ಸಂಸಾರದಲ್ಲಿ ದುಡಿಯುವ ಕೈಗಳು ಸೊನ್ನೆ. ನನ್ನ ಸೋದರ

ಮಾವಂದಿರು ನೆರವಿಗೆ ಬಾರದಿದ್ದರೆ, ಬಹುಶಃ ನಾವು ಸಮಾಜದಲ್ಲಿ ನಗಣ್ಯರಾಗಿ ಮಾಯವಾಗುತ್ತಿದ್ದೆವು. ಅವರು ಇಂದು ಬದುಕಿ ಉಳಿದಿಲ್ಲ. ಆದರೆ, ಅವರ ನೆರವು ನಮ್ಮೆಲ್ಲರ ಮನೆಗಳಲ್ಲಿ ದೀಪ ಉರಿಯುವಂತೆ ಮಾಡಿದೆ.

ಅಮ್ಮ ನಮಗೆಲ್ಲರಿಗೂ ಸಮಾನವಾಗಿ ಪ್ರೀತಿಯ ಧಾರೆ ಎರೆದಿದ್ದಾಳೆ. ನನ್ನ ಎಲ್ಲ ಸಹೋದರರೂ ತಮ್ಮ ತಮ್ಮ ನೆಲೆ ಕಂಡುಕೊಂಡಿದ್ದಾರೆ. ಅಮ್ಮನ ಜೀವನಾಸಕ್ತಿ ಅಪ್ರತಿಮವಾದುದು. ತಮ್ಮ ಈ ವಯಸ್ಸಿನಲ್ಲಿಯೂ ಊಟ-ಉಣಿಸಿನಲ್ಲಿ ರುಚಿಯನ್ನು ಅಪೇಕ್ಷಿಸುತ್ತಾಳೆ. ಸ್ವತಃ ಅವಳು ಉತ್ತಮವಾಗಿ ಅಡುಗೆ ಮಾಡುತ್ತಾಳೆ. ಎಂಟು ಮಕ್ಕಳ ತಾಯಿಯಾದರೂ ಅವಳ ಆರೋಗ್ಯ ಚೆನ್ನಾಗಿಯೇ ಇದೆ. ಅವಳು ಕಲಿತದ್ದು ಮೂರನೆಯ ವರ್ಗದ ವರೆಗೆ. ಆದರೆ, ಈಗಲೂ ಓದುವದನ್ನು ಹವ್ಯಾಸವಾಗಿರಿಸಿಕೊಂಡಿದ್ದಾಳೆ. ರಾಮಾಯಣ, ಮಹಾಭಾರತಗಳ ವಾಚನ ದಿನಾಲು ನಡೆದೇ ಇರುತ್ತದೆ. ಕತೆ-ಕಾದಂಬರಿಗಳನ್ನು ಓದುತ್ತಾಳೆ.

ಅಮ್ಮ ಸುಖವಾಗಿದ್ದಾಳೆಯೇ? ಅಮ್ಮ ನಮಗೆ ಎಲ್ಲವನ್ನೂ ನೀಡಿದ್ದಾಳೆ. ನಾವು ಅಮ್ಮನಿಗೆ ನೆಮ್ಮದಿಯನ್ನು ನೀಡಲು ನಾವು ನೀಡುತ್ತಿರುವದು ತೀರಲಿಲ್ಲ. ಅವಳು ತನ್ನ ಶೇಷಾಯುಷ್ಯವನ್ನೂ ಕಳೆಯುವ ನಿಟ್ಟಿನಲ್ಲಿ –ಇಂದಿನ ಒತ್ತಡದ ದಿನಗಳಲ್ಲಿ ಸಿಲುಕಿರುವ ನಾವು, ಆರು ಗಂಡುಮಕ್ಕಳು, ಒದಗಿಸಿರುವ ಅನುಕೂಲತೆಯ ಬಗ್ಗೆ ನನಗೆ ಅತೃಪ್ತಿ ಇದೆ.

ನನ್ನ ಅಪ್ಪನ ಬಗೆಗೆ ಬರೆದ ಎರಡು ಕವನಗಳು ನನ್ನ ಕವನ ಸಂಕಲನದಲ್ಲಿ ಪ್ರಕಟವಾಗಿವೆ. ಅವುಗಳ ಕೆಲವು ಸಾಲು ಹೀಗಿವೆ :

೧. ಅಪ್ಪ ಹೇಳುತ್ತಿದ್ದ : "ಮಗು! ನಾನು ಹುಟ್ಟಿದ್ದು ಮುಳ್ಳುಗಳ ಮರೆಯಲ್ಲಿ
ಬೆಳೆದದ್ದು ಮುಳ್ಳುಗಳ ಮಡಿಲಲ್ಲಿ / ಇನ್ನು ನಿನ್ನ ನಿಗದಿ."
ಅಪ್ಪ ಧೀರೋದಾತ್ತ. ನಾಲ್ಕು ಜನ / ಕೈ ಅನ್ನುತ್ತಿದ್ದಂತೆಯೆ / ಚಟ್ಟವೇರಿದ.
ಅವ ಗುಡುಗಿದಾಗ ನೆಲ ನಡುಗದಿದ್ದರೂ / ಶೀರಗಾಲ ಅದುರುತ್ತಿದ್ದುದು ನಿಜ
ಅವನ ಬದುಕಿನ ಬೇರೀಜು / ವಜಾಬಾಕಿ ಮಾಡಿದಾಗ / ಶೇಷ ಶೂನ್ಯ. ಆದರೂ / ಅತಿ ಸಂಭಾವಿತ.
(ಜನ ಹೇಳುವುದು ಸ್ವಾಮೀ!) / ಇಂಥ ನನ್ನಪ್ಪ / ಮನೆಯಂಗಳದಲ್ಲಿ ಏಕನಾಗರ
ಹೆಡೆಬಿಚ್ಚಿ ನಿಂತಾಗ / ಮೂರು ದಿನ ಹೊರಬೀಳಲಿಲ್ಲ / ನಾನು / ಅದೇ ಅಪ್ಪನ ಮಗ
ಅಪ್ರತಿಮ ದೇಶಭಕ್ತ / ಅಪ್ರತಿಹತ ತತ್ವನಿಷ್ಠ / ಇಂಥ ನಾನು ದಾರಿಯಲ್ಲಿ
ಏಕನಾಗರ ಹೆಡೆಬಿಚ್ಚಿ / ನರ್ತಿಸಿದಾಗ ಅಗಲೇ– / ಬೇಕಾಯಿತಲ್ಲ ಪಥಭ್ರಷ್ಟ!

೨. ನನ್ನಪ್ಪ ಸತ್ತಾಗ / ನಸುಕು ಹರಿದಿತ್ತು / ಎಳೆಯ ನೇಸರು ಇಣುಕಿ ನಗುತಲಿದ್ದ
ಬೆಳಲಿದ ಬತ್ತಿದ ಕಂಗಳ ಅಮ್ಮ / ನುಡಿದಳು ಮೌನದಲಿ. 'ಅಪ್ಪನು ಇನ್ನಿಲ್ಲ'
ಅಪ್ಪನ ನಿಶ್ಚಲ ಮುಖವನು ನೋಡಿದೆ / ಚೈತನ್ಯ ಆವಾಹಿಸಿದೆ. ***
ನನ್ನಪ್ಪ ಸತ್ತಾಗ ಹೆಪ್ಪುಗಟ್ಟಿತು ಅಳಲು / ಹೆಣ ಹೊರುವ ಬ್ರಾಹ್ಮಣರು ಮೂರು ಮಂದಿ
ಸಾಲ ನೆನಪಿಸುವವರು ನೂರುಮಂದಿ / ಮನೆಯವರಿಗೇ ಚಕ್ರಬಡ್ಡಿ ಭಟ್ಟರ ಧರ್ಮ ***
ಅಪ್ಪನ ಸಿದಿಗೆಗೆ ಹೆಗಲನು ಕೊಟ್ಟೆ / ಹೆತ್ತವನಿಗೆ ನಾ ಬೆಂಕಿಯನಿಟ್ಟೆ,
ಬೆಂಕಿಯ ನಗುವಿಗೆ ನಾನೂ ನಕ್ಕೆ!

■ **ಮೋಹನ ಹಬ್ಬು :**

ಸೌಜನ್ಯ, ವಂದಿಗೆ-೫೮೧ ೩೫೭, ಅಂಕೋಲಾ (ಉ.ಕ.) ■

ಶಾಸನೋಕ್ತ ತುಳಿಲಸಂದಕುಲದವರು[*]

ಎಸ್. ಬಿ. ಹಿರೇಮಠ

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ತ್ಯಾಗ-ವೀರ-ಬಲಿದಾನಗಳಿಗೆ ಅತ್ಯಂತ ಮಹತ್ವದ ಸ್ಥಾನವಿದೆ. ಇವು ಜನಾದರಣೀಯ ಮೌಲ್ಯಗಳಾಗಿ ವ್ಯಾಪಕವಾಗಿ ಆಚರಣೆಯಲ್ಲಿದ್ದವು. ಧರ್ಮಮೂಲವಾದ ತ್ಯಾಗ-ಬಲಿದಾನಗಳ ಮೂಲಕ ಮೋಕ್ಷಸಾಧನೆ ಸಾಧ್ಯವೆಂಬ ಭಾವನೆ ವಿಸ್ತಾರಗೊಂಡು ಹಲವು ಕಾರಣಗಳಿಗಾಗಿ ನಡೆಯುತ್ತಿದ್ದ ಯುದ್ಧ ಪ್ರಸಂಗಗಳಲ್ಲಿ ಭಾಗವಹಿಸಿ ಕಾದುತ್ತ ಪ್ರಾಣಾರ್ಪಣೆ ಮಾಡಿಕೊಳ್ಳುವ ವೀರರೂ ಸಹ ಸ್ವರ್ಗವನ್ನು ಸಾಧಿಸಬಹುದು ಎಂಬ ಹಂತವನ್ನು ತಲುಪಿತು. ಈ ಮೌಲ್ಯಾನುಸಂಧಾನಗಳ ಗುರಿ ಸದ್ಗತಿ ಸಂಪಾದನೆಯಾಗಿದ್ದರೂ ತ್ಯಾಗ-ಬಲಿದಾನಗಳು ವೈಯಕ್ತಿಕ ಮಟ್ಟಕ್ಕೆ ನೆಲೆನಿಂತವುಗಳು. ಆದರೆ 'ವೀರ' ಮೌಲ್ಯ ವೈಯಕ್ತಿಕ ನೆಲೆಯನ್ನು ಮೀರಿ ಸಾಮಾಜಿಕ ಹಿತ-ಜನಹಿತವನ್ನು ಗುರಿಯಾಗಿಟ್ಟುಕೊಂಡು ಸಮಾಜಮುಖಿಯಾಗಿ ಬೆಳೆದು ಬಂದದ್ದರಿಂದ ವ್ಯಾಪಕ ಜನಮನ್ನಣೆ ಗಳಿಸಿಕೊಂಡಿತು. ಹೀಗಾಗಿ ಸಮಾಜ ಈ ಮೌಲ್ಯ ಪ್ರತಿಪಾದಕರನ್ನು ದೈವತ್ವಕ್ಕೇರಿಸಿತು. ಅವರಿಗಾಗಿ ಸ್ಮಾರಕಗಳು, ಶಾಸನಗಳು, ಸಾಹಿತ್ಯಕೃತಿಗಳು ನಿರ್ಮಾಣಗೊಂಡವು. ಅವುಗಳ ಕುರಿತು ಸಾಕಷ್ಟು ಅಧ್ಯಯನ ಆಗಿದೆ.

ಪ್ರಾಚೀನ ಕರ್ನಾಟಕದ ಈ ವೀರ ಸಮೂಹವನ್ನು ಡಾ. ಎಂ. ಎಂ. ಕಲಬುರ್ಗಿಯವರು ಮೂರು ವಿಧವಾಗಿ ವಿಂಗಡಿಸುತ್ತಾರೆ[೧] : ೧. ಗ್ರಾಮದ ಪ್ರಜಾಸಮೂಹ, ೨. ಗ್ರಾಮದ ಕಾಯ್ದಿಟ್ಟ ಪಡೆ, ೩. ರಾಜನ ಸೈನ್ಯಪಡೆ.

ಗ್ರಾಮದ ಪ್ರಜಾಸಮೂಹ ಸ್ವಯಂವೀರರು. ಗ್ರಾಮದ ಕಾಯ್ದಿಟ್ಟ ಪಡೆ ಅರಸನಿಂದ ಅಣುಗ ಜೀವಿತವನ್ನು ಪಡೆಯುತ್ತ ತಮ್ಮ ಗ್ರಾಮದಲ್ಲೇ ಇದ್ದು, ಯುದ್ಧ ಪ್ರಸಂಗಗಳಲ್ಲಿ ಮಾತ್ರ ರಾಜಾದೇಶ ಪಡೆದು ಭಾಗವಹಿಸುವವರು. ರಾಜನ ಸೈನ್ಯಪಡೆಯವರು ರಾಜನಿಂದ ಸಂಬಳ ಪಡೆಯುತ್ತ ನಿತ್ಯ ಸೇವೆಯಲ್ಲಿರುವವರು. ಮೂಲತಃ ಈ ಸಂಬಳ ಜೋಳದ ರೂಪದಲ್ಲಿ ಸಂದಾಯವಾಗುತ್ತಿದ್ದುದರಿಂದ ಇವರನ್ನು ಜೋಳವಾಳಿಗಳೆಂದು ಕರೆಯತೊಡಗಿ ಮುಂದೆ ಯಾವುದೇ ರೂಪದಲ್ಲಿ ಸಂಬಳ ಪಡೆಯುತ್ತಿದ್ದರೂ ಈ ಹೆಸರೇ ಮುಂದುವರಿದುಕೊಂಡು ಬಂದಿತು.

ಹಲವು ಕಾರಣಗಳಿಗಾಗಿ ನಡೆಯುತ್ತಿದ್ದ ಯುದ್ಧಗಳಲ್ಲಿ[೨] ಭಾಗವಹಿಸುತ್ತಿದ್ದ ಈ ಜೋಳವಾಳಿಗಳು ಸಾಮಾಜಿಕ ಜವಾಬ್ದಾರಿಯ ಜೊತೆಗೆ ತಮ್ಮ ಅನ್ನದ ಋಣವನ್ನೂ ಸಮರ್ಥವಾಗಿ ನಿಭಾಯಿಸುತ್ತ ಬಂದಿರುವುದನ್ನು ಕಾಣುತ್ತೇವೆ. ಇದೇ ವರ್ಗಕ್ಕೆ ಸೇರುವ ಆದರೆ ತಮ್ಮ ಗುಣವಿಶೇಷಗಳಿಂದ ವಿಶಿಷ್ಟತೆಯನ್ನು ಗಳಿಸಿದ ವರ್ಗ ತುಳಿಲಸಂದಕುಲದವರದು.

ಶಾಸನಗಳಲ್ಲಿ ಅಪರೂಪವಾದ ಈ ವಿಶಿಷ್ಟ ವರ್ಗದ ಕುರಿತು ಕನ್ನಡ ಕಾವ್ಯಗಳಲ್ಲಿ ಸಾಕಷ್ಟು ವಿವರ ದೊರೆಯುತ್ತವೆ. 'ವೀರಸಿದ್ಧಾಂತ' ಎಂಬ ಲೇಖನದ[೩] ಮೂಲಕ ಬಂಧುವರ್ಮ ಕವಿಯ ಹರಿವಂಶಾಭ್ಯುದಯ ಕಾವ್ಯವನ್ನು ಆಧಾರವಾಗಿಟ್ಟುಕೊಂಡು ತುಳಿಲಸಂದರನ್ನು ಮೊದಲ ಬಾರಿ ಪರಿಚಯಿಸಿದವರು ಡಾ. ಎಂ. ಎಂ. ಕಲಬುರ್ಗಿಯವರು. ಈ ಲೇಖನದಿಂದ

ಕುತೂಹಲಗೊಂಡು, ಕವಿರಾಜಮಾರ್ಗ ಮೊದಲ್ಗೊಂಡು ೧೫ನೆಯ ಶತಮಾನದ ಬಾಹುಬಲಿ ಪಂಡಿತನ ಧರ್ಮನಾಥಪುರಾಣದ ವರೆಗಿನ ಪ್ರಮುಖ ಕಾವ್ಯಗಳನ್ನೆಲ್ಲ ಅಭ್ಯಾಸಕ್ಕೊಳಗು ಮಾಡಿ ತುಳಿಲಸಂದರನ್ನು, ಅವರ ಗುಣವಿಶೇಷಗಳನ್ನು ತೌಲನಿಕವಾಗಿ ವಿವೇಚಿಸಿದವರು ಪ್ರೊ. ಷ. ಶೆಟ್ಟರ್ ಅವರು.[೪] ಈ ಪದ ಕನ್ನಡ ನಾಡಿನ ಶಾಸನಗಳಲ್ಲಿ ಅಪರೂಪ ಎಂಬ ಇವರ ಅಭಿಪ್ರಾಯಕ್ಕೆ ಪ್ರತಿಯಾಗಿ ಶ್ರೀ. ರಾ. ಮಿತ್ರ ಹಾಗೂ ಡಾ. ಬಿ. ಆರ್. ಹಿರೇಮಠ ಅವರು ತಮ್ಮ ಗಮನಕ್ಕೆ ಬಂದ ಒಂದೆರಡು ಶಾಸನೋಲ್ಲೇಖಗಳನ್ನು ದಾಖಲಿಸಿದ್ದಾರೆ.[೫] ಇವೆಲ್ಲವನ್ನು ಹಿನ್ನೆಲೆಯಾಗಿಟ್ಟುಕೊಂಡು ನನ್ನ ಗಮನಕ್ಕೆ ಬಂದ ಶಾಸನೋಕ್ತ ತುಳಿಲಸಂದ ಕುಲದವರನ್ನು ಪರಿಚಯಿಸುವುದು ಪ್ರಸ್ತುತ ಲೇಖನದ ಉದ್ದೇಶ.

ಕನ್ನಡ ಕಾವ್ಯಗಳಲ್ಲಿ ವ್ಯಾಪಕವಾಗಿ, ಶಾಸನಗಳಲ್ಲಿ ವಿರಳವಾಗಿ ತುಳಿಲ್, ತುಳಿಲಾಳ್, ತುಳಿಲಾಳಾಯ್ತು, ತುಳಿಲ್‌ಗೆಯ್, ತುಳಿಲ್ಗೊಳು, ತುಳಿಲ್ಪಾಡು, ತುಳಿಲಸಂದ ಮೊದಲಾದ ರೂಪಗಳಲ್ಲಿ ಕಾಣಿಸಿಕೊಳ್ಳುವ ಈ ಪದವು ನಮಸ್ಕಾರ ಮತ್ತು ಪರಾಕ್ರಮ ಎಂಬ ಮೂಲಾರ್ಥವನ್ನು ಹೊಂದಿದೆ.[೬] ತಮಿಳಿನಲ್ಲಿ ತೊಳಿಲ್-ಸಂದೋನ್ ಎಂಬ ಪದವಿದ್ದು ಅದಕ್ಕೆ ಸೇವೆಯಲ್ಲೂ, ಪೌರುಷದಲ್ಲೂ ಕೀರ್ತಿಯನ್ನು ಸಂಪಾದಿಸಿದವನು ಎಂಬ ಅರ್ಥವಿದೆ[೭] ತೊಳಿಲ್ ವಯವರ್ ಎಂಬ ಪ್ರಯೋಗ 'ಪದಿರ್ಪಾಟ್ಟು' ಎಂಬ ಗ್ರಂಥದಲ್ಲಿ ಪ್ರಯೋಗಗೊಂಡಿದ್ದು, ಯುದ್ಧತಂತ್ರಗಳನ್ನು ಬಲ್ಲ ಯೋಧರು ಎಂಬ ಅರ್ಥವನ್ನು ಹೊಂದಿದೆ.[೮] "ತುಳಿಲಸಂದನೆಂದು ವೀರನುಂ ಪಂಚಮನುಂ ಅಕ್ಕುಂ",[೯] "ತುಳಿಲೆನಲ್ ಪಡಪಡಿಕೆಗಂ ವೀರಕಂ ಪೆಸರ್"[೧೦] ಮೊದಲಾದ ಪ್ರಯೋಗಗಳು. ತುಳಿಲಸಂದರು ಸೇವೆ, ಕರ್ತವ್ಯ, ಪೌರುಷಗಳಲ್ಲಿ ಕೀರ್ತಿಯನ್ನು ಸಂಪಾದಿಸಿಕೊಂಡಿದ್ದ ಒಂದು ವಿಶಿಷ್ಟ ವೀರವರ್ಗ ಎಂದು ಪರಿಭಾವಿಸಿಕೊಳ್ಳಲು ಪ್ರೇರಣೆ ನೀಡುತ್ತವೆ.

ವೀರತ್ವವನ್ನು ಒಂದು ಸೈದ್ಧಾಂತಿಕ ನೆಲೆಗಟ್ಟಿನ ಮೇಲೆ ಪ್ರದರ್ಶಿಸುತ್ತಿದ್ದ ವೀರಪಡೆಯ ಸಮಗ್ರ ಚಿತ್ರಣ ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ ದೊರೆಯುತ್ತದೆ. ಈ ವೀರರನ್ನು ತುಳಿಲಸಂದರು ಎಂದು ಅಲ್ಲಿ ಕರೆಯಲಾಗಿದೆ. ಶಾಸನೋಕ್ತ ತುಳಿಲಸಂದರನ್ನು ಪರಿಚಯಿಸುವ ಈ ಸಂದರ್ಭದಲ್ಲಿ ಕಾವ್ಯ ವಿವರಗಳನ್ನು ಅವರ ವೃತ್ತಿ ಮತ್ತು ಕಾರ್ಯಗೌರವಗಳ ಹಿನ್ನೆಲೆಯಲ್ಲಿ ಸಂಗ್ರಹಿಸಿ ನೋಡುವುದು ಅವಶ್ಯವಾಗಿದೆ.

ತುಳಿಲಸಂದರು ರಾಜಸೇವೆಯಲ್ಲಿದ್ದು ಅವರ ಪ್ರಮುಖ ವೃತ್ತಿ ಯುದ್ಧವಾಗಿದ್ದರೂ, ಅವರ ಯುದ್ಧ ಸೈದ್ಧಾಂತಿಕ ತಳಹದಿಯ ಮೇಲೆ ನಿಂತಿತ್ತು. ಧ್ಯೇಯವಾಕ್ಯದ[೧೧] ಅಡಿಯಲ್ಲಿ ಯುದ್ಧ ಮಾಡುವುದು ಇವರ ಗುರಿಯಾಗಿರಲಿಲ್ಲ. ತುಳಿಲಸಂದ ಯುದ್ಧ ಸಂದರ್ಭದಲ್ಲಿ ವ್ರತಧಾರಿಯ ಪಾತ್ರವನ್ನು ವಹಿಸುತ್ತಿದ್ದ. ಕತ್ತಲಾದ ಮೇಲೆ ವ್ರತಧಾರಿಗೆ ಹೇಗೆ ಆಹಾರ ಸೇವನೆ ನಿಷಿದ್ಧವೋ ಅಂತೆಯೇ ರಾತ್ರಿಯುದ್ಧ ತುಳಿಲಸಂದನಿಗೆ ನಿಷಿದ್ಧವಾಗಿತ್ತು. ಇಬ್ಬರ ಗುರಿಯೂ ಸತ್ಪಾತ್ರಶೋಧನೆ. ಗಟ್ಟಿ ನಿಲುವು ತುಳಿಲಸಂದನ ಪ್ರಮುಖ ಗುಣ. ಪಾಪಕ್ಕಂಜುವ ತಪಸ್ವಿಯಂತೆ ತುಳಿಲಸಂದ ದೋಷಕ್ಕಂಜಿ ನಡೆಯಬೇಕು ಎನ್ನುತ್ತವೆ ಕಾವ್ಯಗಳು.

ಯುದ್ಧ ತುಳಿಲಸಂದನ ವೃತ್ತಿಯಾಗಿದ್ದರೂ ಯಾರನ್ನು ಬೇಕಾದರೂ ಯಾವಾಗ ಬೇಕಾದರೂ ಕೊಲ್ಲುವುದು ಅವನಿಗೆ ಭೂಷಣವಾಗಿರಲಿಲ್ಲ. ತನ್ನ ಮೇಲೇರಿ ಬಂದವನನ್ನಲ್ಲದೇ

ನಿರ್ಲಿಪ್ತನಾಗಿರುವವನನ್ನು ಕೊಲ್ಲುವುದು ತುಳಿಲಸಂದನಿಗೆ ತಕ್ಕುದಾಗಿರಲಿಲ್ಲ. ಅಂತೆಯೇ ದೀನಸ್ಥಿತಿಯಲ್ಲಿರುವವನನ್ನು, ಅಪಮಾನದಿಂದ ತಲೆ ತಗ್ಗಿಸಿ ನಿಂತವನನ್ನು, ಅತ್ಯಂತ ಆಶೆಬುರುಕನನ್ನು, ಶರಣಾಗತನಾದವನನ್ನು ಕೊಲ್ಲಬಾರದೆನ್ನುವುದು ಅವನು ಪಾಲಿಸಿಕೊಂಡು ಬಂದ ನಿಯಮವಾಗಿತ್ತು. "ಇರುಳು ಇರಿಯಲಾಗದು", ಮೋಸದಿಂದ ಸಾಧಿಸುವ ಗೆಲುವು ಗೆಲುವಲ್ಲ ಎಂಬುದು ತುಳಿಲಸಂದನ ಗಟ್ಟಿ ನಿಲುವಾಗಿತ್ತು. ಗುಂಪುಗಟ್ಟಿ ಒಬ್ಬನ ಮೇಲೇರಿ ಕೊಲ್ಲುವುದು ವೀರಧರ್ಮವಲ್ಲ ಎಂಬುದು ತುಳಿಲಸಂದನ ಭಾವನೆಯಾಗಿತ್ತು.

ತುಳಿಲಸಂದನು ತತ್ವ-ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಗಳಿಸಿಕೊಂಡ ತನ್ನ ವ್ಯಕ್ತಿತ್ವ ವಿಶೇಷದಿಂದ ಸಮಾಜದಲ್ಲಿ ಗೌರವಕ್ಕೆ ಪಾತ್ರನಾಗಿರುತ್ತಿದ್ದ ಎಂಬ ಸೂಚನೆ ಕಾವ್ಯಗಳಲ್ಲಿ ದೊರೆಯುತ್ತದೆ. ವೀರನೊಬ್ಬ ತುಳಿಲಸಂದನ ಗುಣಗಳನ್ನು ಅಳವಡಿಸಿಕೊಂಡಿದ್ದರೆ ಅವನು ಕೆಳಸ್ತರದಲ್ಲಿ ಜನಿಸಿದವನಾಗಿದ್ದರೂ ಆತನಲ್ಲಿರುವ ತುಳಿಲಾಳ್ತನದಿಂದಾಗಿ ಗೌರವ ಪ್ರಾಪ್ತವಾಗುತ್ತಿತ್ತು.

ಯುದ್ಧನಿಯಮ ಕಾರಣವಾಗಿ ಪ್ರತ್ಯೇಕವಾಗಿ ಗುರುತಿಸಲ್ಪಡುತ್ತಿದ್ದ ತುಳಿಲಸಂದರು, ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳುವುದಕ್ಕಾಗಲೀ ಇಲ್ಲವೆ ಜಯ ಸಂಪಾದಿಸುವುದಕ್ಕಾಗಲೀ ಕೆಳಮಟ್ಟಕ್ಕಿಳಿದು ಯುದ್ಧ ಮಾಡುವುದನ್ನು ಒಪ್ಪುತ್ತಿರಲಿಲ್ಲ.

ಕೇವಲ ಶೌರ್ಯ ಪ್ರದರ್ಶನದಿಂದ ಮಾತ್ರ ಒಬ್ಬ ಯೋಧ ತುಳಿಲಸಂದನಾಗಲಾರ. ಶೌರ್ಯದ ಜೊತೆಗೆ ಅಭಿಮಾನ, ಧರ್ಮ, ತ್ಯಾಗ, ಸತ್ಯ ಹಾಗೂ ಶೌಚ ಗುಣಗಳು ಸಮ್ಮಿಳಿತಗೊಂಡಾಗ ಮಾತ್ರ ಅವನು ತುಳಿಲಸಂದನಾಗುತ್ತಾನೆ ಎಂದು ಕಾವ್ಯಗಳು ಸ್ಪಷ್ಟಪಡಿಸುತ್ತವೆ. ಈ ಆರು ಗುಣಗಳನ್ನೊಳಗೊಂಡುದು 'ವೀರಸಿದ್ಧಾಂತ'ವೆನಿಸಿಕೊಳ್ಳುತ್ತದೆ. ತುಳಿಲಸಂದ ಈ ವೀರಸಿದ್ಧಾಂತದ ಪ್ರತಿಪಾದಕನಾಗಿರುತ್ತಾನೆ.

ಪಂಪ ಮಹಾಕವಿಯ ವಿಕ್ರಮಾರ್ಜುನವಿಜಯದಲ್ಲಿ ಶರಪಂಜರದ ಮೇಲೆ ಒರಗಿರುವ ಭೀಷ್ಮನನ್ನು ಕುರಿತು ಹೇಳಲಾದ "ವೀರಸಿದ್ಧಾಂತದ ಶಾಸನಂ ಬರೆದ ಪೊತ್ತಿಗೆ"ಯಂತೆ ಕಾಣುತ್ತಿದ್ದ ಎಂಬ ಮಾತು ಭೀಷ್ಮ ತುಳಿಲಸಂದನ ಆರೂ ಗುಣಗಳನ್ನು ಹೊಂದಿದ್ದ ಎಂಬುದನ್ನು ಸೂಚಿಸುತ್ತದೆ.

ಹೀಗೆ ಕನ್ನಡ ಕಾವ್ಯಗಳಲ್ಲಿ ವ್ಯಾಪಕವಾಗಿ ಪ್ರಸ್ತಾಪಗೊಂಡಿರುವ ತುಳಿಲಸಂದರು ಶಾಸನಗಳಲ್ಲಿ ಅಪರೂಪವಾಗಿ ಪ್ರಸ್ತಾಪಗೊಂಡಿದ್ದಾರೆ. ಈ ವಿವರಗಳನ್ನು ಮೊದಲು ಸಂಗ್ರಹಿಸಿ, ನಂತರ ಅವರ ಅಪರೂಪದ ಪ್ರಸ್ತಾಪಕ್ಕೆ ಇರಬಹುದಾದ ಕಾರಣಗಳನ್ನು ಕುರಿತು ಚರ್ಚಿಸಬಹುದು.

"ತುಳಿಲ್" ಪದ ಕ್ರಿ. ಶ. ೭೮೦ ರ ಕೋಲಾರ ಜಿಲ್ಲೆಯ. ಶ್ರೀನಿವಾಸಪುರದ ಗ್ರಾಮವೊಂದರ ಶಾಸನವೊಂದರಲ್ಲಿ ಮೊದಲ ಬಾರಿ ಕಾಣಸಿಕೊಳ್ಳುತ್ತದೆ. ವ್ಯಕ್ತಿಯೊಬ್ಬನ ಬಿರುದಿನಲ್ಲಿ ಅದು ಎಡೆಪಡೆದಿದೆ. ೧೦ನೆಯ ಶತಮಾನದ ಶ್ರವಣಬೆಳ್ಗೊಳ ಶಾಸನದಲ್ಲಿ ಜೋಳಿಗನೆಂಬ ವೀರನೊಬ್ಬ ಯುದ್ಧವೊಂದರಲ್ಲಿ 'ಪಲರುಂ ತುಳಿಲಾಳ್ಗಳ'ನ್ನು ಕೊಂದ ವಿಷಯ ಬಂದಿದೆ. ತುಳಿಲಾಳ್ಗಳು ಮೂಲತಃ ಯುದ್ಧವೀರರಾಗಿದ್ದುದನ್ನು ಮತ್ತು ರಾಜನ ಪರವಾಗಿ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದುದನ್ನು ಇದು ದಾಖಲಿಸುತ್ತದೆ. ಶಿಕಾರಿಪುರ ತಾಲೂಕಿನ ಬಂದಳಿಕೆ ಗ್ರಾಮದ

ಶಾಸನವೊಂದರಲ್ಲಿ[೨೩] ತನ್ನನ್ನು ತುಳಿಲಾಳು ಎಂದು ಗುರುತಿಸಿಕೊಂಡಿದ್ದ ಪೆರ್ಗಡೆ ಮಾಚನೆಂಬವನು ಯುದ್ಧದಲ್ಲಿ ಕಾದಿ ಮಡಿದ ಸಂಗತಿ ಇದೆ. ಬಂದಳಿಕೆಯ ಮಹಾಮಂಡಳೇಶ್ವರ ಬಮ್ಮಿದೇವರಸನ ತುಳಿಲಾಳಾಗಿದ್ದ ಪೆರ್ಗಡೆ ಮಾಚನು ಉದ್ಧರೆ ಗ್ರಾಮದ ಮೇಲೆ ನಡೆದ ಯುದ್ಧದಲ್ಲಿ ಭಾಗವಹಿಸಿ, ಕೆಚ್ಚೆದೆಯಿಂದ ಕಾದಿ ಸ್ವಾಮಿಕಾರ್ಯವನ್ನು ಪೂರೈಸಿ, ಮಹಾಸ್ವರ್ಗವನ್ನು ಪಡೆದಂತೆ ಶಾಸನ ಹೇಳುತ್ತದೆ. ಇದೊಂದು ವೀರಗಲ್ಲು ಶಾಸನವಾಗಿರುವುದು ಗಮನಾರ್ಹವಾಗಿದೆ.

"ತಳರಿಂ ಪೆರ್ಗಡೆ ತಾನೆನಿಪ್ಪ ಬಗೆಯಿಂ(ಯಿಂ) ಕಾಯುವ ನಿಜಸ್ವಾಮಿಯಂ
ತುಳಿಲಾಳು ಪೆರ್ಮೆಯನಾಗಳಂತೆ ಮೆರೆವಂ ಕಟ್ಟಾಳು ತಾಂ ತೋ(ಸೊ)ರ್ಕಿನಂ
ಪಳಿಯಂ ಪಾಪಮನಗ್ನಿಯಂತೆ(ತಿ) ತುಳಿವಂ ವಿಶ್ವಾಸಿ ತನ್ನಾಳ್ದನೊಳ್
ತಳೆದಂ ಹೆರ್ಗಡೆ ಸೋಮನಾತ್ಮತನೆಯಂ ಮಾಚಂ ಮಹಾಸ್ವರ್ಗ್ಗಮಂ"

ಎಂದು ಪೆರ್ಗಡೆ ಮಾಚನ ಶೌರ್ಯವನ್ನು, ಸ್ವಾಮಿನಿಷ್ಠ ಗುಣವನ್ನು ಪ್ರಶಂಸಿಸಿರುವುದು ವಿಶೇಷವಾಗಿದೆ. ಅವನೊಬ್ಬ ಸಾಮಾನ್ಯ ಯೋಧನಾಗಿರದೆ ಹೆಗ್ಗಡೆಯಾಗಿದ್ದು, ನಿಜಸ್ವಾಮಿಯನ್ನು ಕಾಯುವ ತುಳಿಲಾಳು ಎಂದು ಹೆಮ್ಮೆಯಿಂದ ಹೇಳಿಕೊಂಡಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಇದೇ ಬಗೆಯ ಉಲ್ಲೇಖಗಳು ಬಳ್ಳಿಗಾವೆ ಮತ್ತು ಗಾವರವಾಡ ಗ್ರಾಮಗಳ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ.[೨೪] ಚಾಳುಕ್ಯರಾಜ ಭುವನೈಕಮಲ್ಲ(ಎರಡನೆಯ ಸೋಮೇಶ್ವರ)ನ ಪಸಾಯಿತ ಲಕ್ಷ್ಮರಸನು ತುಳಿಲಾಳ್ತನವನ್ನು ಮೈಗೂಡಿಸಿಕೊಂಡಿದ್ದನಲ್ಲದೆ ಅದಕ್ಕೆ ಪೂರಕವಾಗಿ ಇತರ ಗುಣಗಳೂ ಮೇಳವಿಸಿಕೊಂಡಿದ್ದವು ಎಂದು ಶಾಸನಗಳು ಬಣ್ಣಿಸುತ್ತವೆ.

ಅಣುಗಾಳ್ ಕಾರ್ಯದ ಶೌರ್ಯವಾಳ್ ವಿಜಯದಾಳ್ ಚಾಳುಕ್ಯರಾಜ್ಯಕ್ಕೆ ಕಾ
ರಣಮಾದಾಳ್ ತುಳಿಲಾಳ್ತನಕ್ಕೆ ನೆಲೆದಾಳ್ ಕಟ್ಟಾಯದಾಳ್ ಮಿಕ್ಕಮ
ನ್ನಣೆಯಾಳ್ ಮಾಂತನದಾಳ್ ನೆಗಳ್ತೆವಡೆದಾಳ್ ವಿಕ್ರಾಂತದಾಳ್ ಮೇಳದಾಳ್
ರಣದಾಳಾಳ್ದನ ನಚ್ಚುವಾದೆಡೆಯೊಳಂ ವಿಶ್ವಾಸದಾಳ್ ಲಕ್ಷ್ಮಣಂ ||

ಕಲಿತನಮಿಲ್ಲ ಚಾಗಿಗೆ ಮದಾನ್ವಿತಮುಯ್ಯಲಿಗಿಲ್ಲ ಚಾಗಿ ಮೆ
ಯ್ಯಲಿಯೆನಿರುವಂಗೆ ಶೌಚಗುಣಮಿಲ್ಲ ಕರಂ ಕಲಿ ಚಾಗಿ ಶೌಚಿಗಂ
ನಿಲೆ ನುಡಿಪ್ರೋಜೆಯಿಲ್ಲ ಕಲಿ ಚಾಗಿ ಮಹಾಶುಚಿ ಸತ್ಯವಾದಿಮಂ
ಡಲಿಕರೊಳೀತನೆಂದು ಪೊಗಳ್ಗುಂ ಬುಧಮಂಡಲಿ ಲಕ್ಷ್ಮಭೂಪನಂ ||

ಕಾವ್ಯಗಳು ಗುರುತಿಸಿ ಹೇಳುವ ತುಳಿಲಸಂದನ ಆರು ಗುಣಗಳಾದ ಕಲಿತನ, ಅಭಿಮಾನ, ಧರ್ಮ, ತ್ಯಾಗ, ಸತ್ಯ ಹಾಗೂ ಶೌಚ ಗುಣಗಳು, ಪಸಾಯಿತ ಲಕ್ಷ್ಮರಸನಲ್ಲಿ ಮೇಳವಿಸಿದ್ದವು ಎಂದು ಶಾಸನ ದಾಖಲಿಸುತ್ತಿರುವುದು ಮಹತ್ವದ ಅಂಶವಾಗಿದೆ. ತುಳಿಲಾಳ್ತನವೆನ್ನುವುದು ಕೇವಲ ಅಪೇಕ್ಷಿತ ಗುಣವಾಗಿ ಕಾವ್ಯಗಳಲ್ಲಿ ವರ್ಣಿತಗೊಂಡಿರದೆ ವಾಸ್ತವದಲ್ಲಿ ಆ ಗುಣಗಳನ್ನು ಅನುಷ್ಠಾನದಲ್ಲಿ ತಂದ ವ್ಯಕ್ತಿಗಳು ವಿರಳವಾಗಿಯಾದರೂ ಕಾಣಸಿಗುತ್ತಿದ್ದರೆಂಬುದನ್ನು ಈ ಉಲ್ಲೇಖ ಸಾಬೀತುಪಡಿಸುತ್ತದೆ.

ಪ್ರಾಚೀನ ಕರ್ನಾಟಕದ ವೀರಸ್ತೋಮವು ಲೆಂಕಸಾಸಿರ್ವರು, ಬಂಟಸಾಸಿರ್ವರು ಇತ್ಯಾದಿ ಸಂಘಟನೆಗಳಡಿಯಲ್ಲಿ ಗುರುತಿಸಿಕೊಂಡಿರುವಂತೆ[೧೫] ತುಳಿಲಸಂದರೂ ಕೂಡ "ತುಳಿಲಸಂದವರು" ಎಂದು ಸಂಘಟಿತರಾಗಿ ತಮ್ಮನ್ನು ಗುರುತಿಸಿಕೊಂಡಿದ್ದರು. ರಾಜನ ವಿವಿಧ ಪಾದಪದ್ಮೋಪಜೀವಿಗಳಲ್ಲಿ ಒಬ್ಬರಾಗಿ ಸಂಯುಕ್ತದಾನ ಪ್ರಸಂಗದಲ್ಲಿ ತುಳಿಲಸಂದವರು ಭಾಗಿಯಾಗಿದ್ದರೆಂದು ಹೇಳುವ ಶಾಸನೋಲ್ಲೇಖ ಈ ನಿಟ್ಟಿನಲ್ಲಿ ಮಹತ್ವದ ದಾಖಲೆಯಾಗಿದೆ. "ಕಲ್ಯಾಣ ಚಾಲುಕ್ಯ ಅರಸನೆಯ ವಿಕ್ರಮಾದಿತ್ಯ ಲಿಂಗವಹು(ಹ)ಳ್ಳಿಯ ನೆಲೆವೀಡಿನಲ್ಲಿದ್ದಾಗ ಈತನ ಪಾದಪದ್ಮೋಪಜೀವಿಗಳಾದ ಗಂಗರ ಮೂವತ್ತಾರು ಬೀಡುಗಳವರು, ಹಟಾರಹರು, ಹದಿನೆಂಟು ಬೀಡುಗಳವರು, ತುಳಿಲಸಂದವರು, ಆಳವಜ್ಜೆಯವರು, ಬಳಂಜಿಗರು, ಳೂಮಡುವರು, ನಲ್ಲಳಿಮಡುವರು, ಶಂಕರಪಾಡಿಯವರು ಮೊದಲಾದ ಸಮಸ್ತ ಪ್ರಜೆಗಳು ಕೂಡಿ ಪೇರೂರ ಸ್ವಯಂಭೂ ಸೋಮನಾಥ ದೇವರ ಅಂಗಭೋಗ, ಪಾತ್ರಪೌಳ, ಧೂಪ-ದೀಪ-ನೈವೇದ್ಯಗಳಿಗಾಗಿ ಪ್ರತಿ ನೂರು ಹೇರಿನ ಸರಕಿಗೆ ೨ ಹಾಗದ ಲೆಕ್ಕದಿಂದ ನೀಡಿದ ದೇವಮಾನದ ವಿಷಯ" ಆಂಧ್ರಪ್ರದೇಶದ ನಲಗೊಂಡ ಜಿಲ್ಲೆಯ ಪೇರೂರು ಗ್ರಾಮದ ಶಾಸನದಲ್ಲಿದೆ.[೧೬] ಈ ಶಾಸನದ ಕಾಲ ಕ್ರಿ. ಶ. ೧೧೧೯. ಇಲ್ಲಿ ಹೆಸರಿಸಿದ ಸಂಘಟನೆಗಳು ಬೇರೆ ಬೇರೆ ವೃತ್ತಿಗೆ ಸೇರಿದವುಗಳಾಗಿದ್ದವೆನ್ನುವುದು ಗಮನಾರ್ಹವಾಗಿದೆ.

ತುಳಿಲಸಂದವರು ಸಂಘಟಿತರಾಗಿ ಸಮಾಜದಲ್ಲಿ ಪ್ರತಿಷ್ಠಿತ ವರ್ಗಕ್ಕೆ ಸೇರಿದ್ದರು. ಈ ಬಗೆಯ ಉಲ್ಲೇಖ ಅರಸೀಕೆರೆ ತಾಲೂಕಿನ ಹೊಸಕಲ್ಯಾಡಿ ಗ್ರಾಮದ ಕಲ್ಲೇಶ್ವರ ದೇವಸ್ಥಾನದಲ್ಲಿ ದೊರೆತಿರುವ ಕ್ರಿ. ಶ. ೧೨೧೪ರ ಶಾಸನದಲ್ಲಿದೆ.[೧೭] ಪ್ರಸ್ತುತ ಶಾಸನ ಒಂದು ಗಾವುಂಡ ಮನೆತನದ ವ್ಯಕ್ತಿಗಳನ್ನು ತುಳಿಲಸಂದಕುಲೋದ್ಭವರು ಎಂದು ಪರಿಚಯಿಸುವುದರ ಜೊತೆಗೆ ಮೂರು ತಲೆಮಾರುಗಳ ವಂಶಚಿತ್ರವನ್ನು ಕೊಡುತ್ತಿರುವುದು ಮಹತ್ವದ್ದಾಗಿದೆ. ಅಂದರೆ ಆ ಮನೆತನ ಪರಂಪರಾಗತವಾಗಿ ತುಳಿಲಸಂದಿಕೆಯನ್ನು ಪಾಲಿಸಿಕೊಂಡು ಬಂದಿತ್ತು. ಹಾಗಾಗಿ ಆ ಮನೆತನದ ವ್ಯಕ್ತಿಗಳನ್ನು ತುಳಿಲಸಂದಕುಲದವರು ಎಂದು ಅಧಿಕೃತವಾಗಿ ಕರೆದುಕೊಂಡು ಬರಲಾಗಿತ್ತು ಎನ್ನುವುದು ಇದರಿಂದ ಸುವ್ಯಕ್ತವಾಗುತ್ತದೆ.

ಇದೊಂದು ದಾನಶಾಸನ. ದುರದೃಷ್ಟಕ್ಕೆ ಈ ಶಾಸನ ಅಲ್ಲಲ್ಲಿ ಒಡೆದು ಹೋಗಿರುವುದರಿಂದ ಈ ಮನೆತನದ ವಂಶವೃಕ್ಷವನ್ನು ಸ್ಪಷ್ಟವಾಗಿ ಗುರುತಿಸುವುದಕ್ಕೆ ತೊಡಕಾಗಿದೆ. ಹಾಗೆಯೇ ಈ ಮನೆತನದ ವ್ಯಕ್ತಿಗಳು ಕೈಕೊಂಡಿದ್ದ ಕಾರ್ಯಚಟುವಟಿಕೆಗಳನ್ನು ಪೂರ್ಣವಾಗಿ ಚಿತ್ರಿಸುವುದಕ್ಕೂ ತಡೆಯುಂಟಾಗಿದೆ.

ಹೊಯ್ಸಳ ಎರಡನೆಯ ವೀರಬಲ್ಲಾಳನ ಮಹಾಪಸಾಯಿತ ಮುಚ್ಚಿಯ ಸಿಂಗಣ ಅಮಾತ್ಯ ಕಲಿಲವಾಡಿಯನ್ನು ಆಳುತ್ತಿದ್ದ. ಇವನ ಪಾದಪದ್ಮೋಪಜೀವಿಗಳು ತುಳಿಲಸಂದಕುಲೋದ್ಭವರಾದ ಕಾಳಗೌಡ ಮತ್ತು ಬೊಪ್ಪಗೌಡ ಎಂಬ ಸಹೋದರರು. ಇವರಲ್ಲಿ ಬೊಪ್ಪಗೌಡ ಮತ್ತು ಅವನ ಪತ್ನಿ ಚೆಟ್ಟಗೌಡಿಗೆ ದುಗ್ಗಗೌಡ, ಬೀರಗವುಡು, ಜಕ್ಕಗವುಡ ಮತ್ತು ಚೆಟ್ಟಿಗೌಡರೆಂಬ ನಾಲ್ಕು ಮಕ್ಕಳು. ಇವರಲ್ಲಿ ಬೀರಗವುಡ ಮತ್ತು ಜಕ್ಕಗವುಡರು ತಮ್ಮ ಕಾರ್ಯಚಟುವಟಿಕೆಗಳಿಂದ ಜನಾನುರಾಗ ಗಳಿಸಿಕೊಂಡಿದ್ದರು. ಕಾಳಗೌಡ-ಬೊಪ್ಪಗೌಡರ ಮೈದುನ ಬಮ್ಮಗವುಡ ಪ್ರಭುಶಕ್ತಿಯಿಂದ ಅಲಂಕೃತಗೊಂಡಿದ್ದ. ಈತನ ಹೆಂಡತಿ ಮಾಳಗವುಡಿ. ಇವರ ದಾಂಪತ್ಯಜೀವನ

ಅನ್ಯೋನ್ಯವಾಗಿ ಬೆಸೆಮಕೊಂಡಿತ್ತು. ಅವರಿಗೆ ಪಾರಿಜಾತ ಮತ್ತು ಕಲ್ಪವೃಕ್ಷಗಳು ಹುಟ್ಟಿದ ಹಾಗೆ ಹೊಳಲಗವುಡ ಮತ್ತು--- ಹುಟ್ಟಿದರು. ಹೊಳಲಗವುಡ ಅತ್ಯಂತ ಉದಾರಿ, ಕರುಣಾಮಯಿ, ಗೌರವಾನ್ವಿತ, ಸಾಹಸಿಗ, ವಿದ್ವಾಂಸರಿಗೆ ಕಾಮಧೇನು. ಮತ್ತು ತನ್ನ ಭುಜಬಲದಿಂದ ಸದಾ ಜಯಶಾಲಿಯಾಗಿದ್ದವನು. ಆಯುಷ್ಯ, ಸಂಪತ್ತು ಮತ್ತು ಶೌಚ ಗುಣಗಳನ್ನು ಹೊಂದಿದವನಾಗಿದ್ದ. ಆತನ ಪತ್ನಿಯರು ಕೇತಗವುಡಿ ಮತ್ತು ಬೂಮಗವುಡಿಯರು. ಆತನಿಗೆ ಐದು ಜನ ಮಕ್ಕಳು.

ಹೀಗೆ ತನ್ನ ಪರಿವಾರದೊಂದಿಗೆ ಪಿತ್ರಾರ್ಜಿತ ಗ್ರಾಮವಾದ ಸೀಗುರ್ಣಿದ ನಾಡಿನ ಕಲಿಲವಾಡಿಯಲ್ಲಿರುತ್ತ ಆ ಗ್ರಾಮದ ದಕ್ಷಿಣಕ್ಕೆ ಕನ್ನೆಗೆರೆ(virgin tank)ಯನ್ನು ನಿರ್ಮಿಸಿ ಅದರ ಕೆಳಗೆ ಶಿವಾಲಯವೊಂದನ್ನು ಕಟ್ಟಿಸಿ ಅದರ ನಿರ್ವಹಣೆಗೆ ಭೂದಾನ ಮಾಡಿದುದನ್ನು ಶಾಸನ ವಿವರಿಸುತ್ತದೆ.

ಹೀಗೆ ಶಾಸನೋಕ್ತ ತುಳಿಲಸಂದರು ವೀರಯೋಧರಾಗಿ ಸಮಾಜದ ಪ್ರತಿಷ್ಠಿತ ವರ್ಗಗಳಲ್ಲಿ ಒಬ್ಬರಾಗಿ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಕೈಕೊಳ್ಳುತ್ತಿದ್ದರು ಎನ್ನುವುದಕ್ಕೆ ಪ್ರಸ್ತುತ ಶಾಸನ ಮಹತ್ವದ ದಾಖಲೆಯಾಗಿದೆ. ತುಳಿಲಸಂದರು ಸಾಮಾನ್ಯ ಯೋಧರಾಗಿರುವುದರ ಜೊತೆಗೆ ಪಸಾಯಿತ, ಹೆಗ್ಗಡೆ, ಗಾವುಂಡ ಮೊದಲಾದ ಅಧಿಕಾರಗಳನ್ನು ಹೊಂದಿ ರಾಜಸೇವಾಸಕ್ತರಾಗಿ ಕರ್ತವ್ಯದಲ್ಲಿ ತೊಡಗಿಕೊಂಡಿದ್ದರೆಂಬುದು ಶಾಸನೋಲ್ಲೇಖಗಳಿಂದ ತಿಳಿದುಬರುತ್ತದೆ. ತುಳಿಲಸಂದರು ರಾಜಸೇವೆಯಲ್ಲಿದ್ದು, ಜೋಳವಾಳಿಗಳಾಗಿಯೂ ತಮ್ಮತನವನ್ನು ಕಾಪಾಡಿಕೊಂಡು ಬಂದ ಸಮಾಜದ ವಿಶಿಷ್ಟ ವರ್ಗಕ್ಕೆ ಸೇರಿದವರಾಗಿದ್ದರೆಂದು ಇದರಿಂದ ವ್ಯಕ್ತವಾಗುವುದು.

ಜೋಳವಾಳಿಗಳು ಮತ್ತು ತುಳಿಲಸಂದರು ಒಂದೇ ವರ್ಗಕ್ಕೆ ಸೇರಿದ ಯುದ್ಧವೀರರಾಗಿದ್ದರೂ ಜೋಳವಾಳಿಗಳಿಗೆ ಸಿಕ್ಕ ಪ್ರಚಾರ, ಸಂದ ಗೌರವಗಳು ತುಳಿಲಸಂದರಿಗೆ ದೊರೆತಿಲ್ಲದುದು ಶಾಸನಾಭ್ಯಾಸದಿಂದ ತಿಳಿದುಬರುತ್ತದೆ. ಈಗ ಉಪಲಬ್ಧವಿರುವ ಶಾಸನಗಳಲ್ಲಿ ದಾನ ಶಾಸನಗಳನ್ನು ಹೊರತುಪಡಿಸಿದರೆ ವೀರಶಾಸನಗಳ ಸಂಖ್ಯೆಯೇ ಅಧಿಕವಾಗಿದೆ. ಹೀಗಿದ್ದೂ ತುಳಿಲಾಳ್ಗಳ ತುಳಿಲಸಂದರ ಉಲ್ಲೇಖ ಕೈಬೆರಳ ಎಣಿಕೆಯಷ್ಟು ಮಾತ್ರ. ಇದಕ್ಕೆ ಕಾರಣಗಳನ್ನು ಹೀಗೆ ಹೇಳಬಹುದು : ಯುದ್ಧಗಳು ರಾಜರ ಮಹತ್ವಾಕಾಂಕ್ಷೆ ಮತ್ತು ಅಸೂಯೆ ಕಾರಣವಾಗಿ ನಡೆಯುತ್ತಿದ್ದವು. ಇವು ಒಬ್ಬರು ಮತ್ತೊಬ್ಬರ ಭೂಮಿಯನ್ನೋ, ಸಂಪತ್ತನ್ನೋ ಅಪಹರಿಸಲು ನಡೆಸುವ ಹೋರಾಟಗಳಾಗಿದ್ದವು. ವ್ಯಕ್ತಿ, ಸಮಾಜ, ದೇಶಗಳಿಗೆ ಅಪಾಯ ಒದಗಿ ಬಂದ ಸಂದರ್ಭಗಳಲ್ಲಿ ವೀರಪ್ರಜೆಗಳ ಆವಶ್ಯಕತೆ ಅಧಿಕಗೊಂಡಿರುವುದು ಸಾಮಾನ್ಯವೆ. ಅಂಥ ಸಂದರ್ಭದಲ್ಲಿ ಅನ್ನದ ಋಣ, ಸಮಾಜದ ಋಣ ಹಾಗೂ ಅಲೌಕಿಕ ವಿಚಾರ ಕುರಿತು ನಂಬುಗೆಯನ್ನು ಜನಮನದಲ್ಲಿ ಹುಟ್ಟುಹಾಕಿ ಅವರಲ್ಲಿ ಯುದ್ಧೋತ್ಸಾಹವನ್ನು ತುಂಬುವ ಕಾರ್ಯವನ್ನು ಧರ್ಮಶಾಸ್ತ್ರಗಳು, ಶಾಸನಗಳು, ಸಾಹಿತ್ಯಕೃತಿಗಳು ಕೈಕೊಂಡವು. ಇದರ ಪರಿಣಾಮವಾಗಿ "ಜೀವಮುಳ್ಳಿನಂ ಇರಿವುದು, ಅರ್ಥಮುಳ್ಳಿನಂ ಈವುದು" ಎಂಬ ಮಾತು ಪ್ರಜಾಸಮೂಹದಲ್ಲಿ, ಮುಖ್ಯವಾಗಿ ಯೋಧರಲ್ಲಿ ಮಂತ್ರವಾಗಿ ಪರಿಣಮಿಸಿತು. ಸ್ತ್ರೀಯರು ವೀರಮಾತೆ, ವೀರಪತ್ನಿಯರೆನಿಸಿಕೊಳ್ಳಲು ತವಕಿಸಿದರು. ಜೊತೆಗೆ ಸಾಮಾಜಿಕ ಬದ್ಧತೆ ಮತ್ತು

ಧರ್ಮದೃಷ್ಟಿಯ ಹಿನ್ನೆಲೆಯಲ್ಲಿ ದೇಹ ಅಶಾಶ್ವತ, ಕೀರ್ತಿ ಶಾಶ್ವತ ಎನ್ನುವ ಭಾವ ಬಲಿತು ಕೀರ್ತಿಯನ್ನು ಸಂಪಾದಿಸುವ ಉತ್ಕಟ ಬಯಕೆ ವೀರರಲ್ಲಿ ತೀವ್ರವಾಯಿತು. ಅಲ್ಲದೇ,

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ

ಮತ್ತು,

ದ್ವಾವಿಮೌ ಪುರುಷೌಲೋಕೇ ಸೂರ್ಯೋಮಣ್ಡಲಭೇದಿನೌ
ಪರಿವ್ರಾಡ್ಯೋಗಯುಕ್ತಾಶ್ಚ ರಣೇಚಾಭಿಮುಖೇಹತಃ [೨೮]

ಎಂಬ ಧ್ಯೇಯ ವಾಕ್ಯಗಳು ಹುಟ್ಟಿಕೊಂಡು ವೀರರ ಮನದಲ್ಲಿ ಅಲೌಕಿಕ ಭಾವನೆಯನ್ನು ಹಾಗೂ ಯುದ್ಧೋತ್ಸಾಹವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವು.

ಯುದ್ಧಗಳನ್ನು ಹುಟ್ಟುಹಾಕುತ್ತಿದ್ದವರಿಗೆ ಜಯ ಸಂಪಾದನೆ ಮುಖ್ಯವಾಗಿತ್ತು. ಜನರಿಗೆ ಯುದ್ಧಗಳಿಂದಾಗುವ ತೊಂದರೆಗಳಿಂದ ಮುಕ್ತರಾಗುವುದು ಬೇಕಿತ್ತು. ಇವೆರಡನ್ನು ಪೂರೈಸುವವರು ಯೋಧರು. ಇಂಥ ಪರಿಸ್ಥಿತಿಯಲ್ಲಿ ಯುದ್ಧದಲ್ಲಿ ನೀತಿಯನ್ನು ಹುಡುಕುವುದು ಕಷ್ಟದ ಕೆಲಸವೇ. ಯುದ್ಧನೀತಿಯನ್ನುಸರಿಸಿ ಯುದ್ಧ ಮಾಡುವ ಯೋಧರಿಂದ ರಾಜರಾಗಲೀ, ಜನಸಮೂಹವಾಗಲೀ ಹೆಚ್ಚಿನದನ್ನು ನಿರೀಕ್ಷಿಸುವುದು ಸಾಧ್ಯವಿರಲಿಲ್ಲ. ಹಾಗಾಗಿ ರಾಜರ ಇಷ್ಟಾರ್ಥ ಪೂರೈಕೆ ಮತ್ತು ಜನಸಮುದಾಯದ ತೊಂದರೆ ನಿವಾರಣೆಗೆ ತತ್‌ಕ್ಷಣದಲ್ಲಿ ಪ್ರತಿಕ್ರಿಯಿಸಿ ಮುನ್ನುಗ್ಗಿ ಹೋರಾಡುತ್ತ ಸಾವನ್ನಪ್ಪುತ್ತಿದ್ದವರನ್ನು ಜನ ಮೆಚ್ಚಿಕೊಂಡಿತು. ಅವರಿಗಾಗಿ ಹಾಡು ಕಟ್ಟಿ ಹಾಡಿದರು, ಗುಡಿ ಕಟ್ಟಿ ಪೂಜಿಸಿದರು. ಇಲ್ಲೆಲ್ಲಾ ಧರ್ಮಾಧರ್ಮದ ಪ್ರಶ್ನೆಯಾಗಲೀ, ಯುದ್ಧನಿಯಮಗಳನ್ನು ಅನುಸರಿಸುವ ಆವಶ್ಯಕತೆಯಾಗಲೀ ಉದ್ಭವಿಸಲೇ ಇಲ್ಲ. ಆದರೂ ರಣರಂಗದಲ್ಲಿ ಹುಲ್ಲುಕಚ್ಚಿದವರನ್ನು,[೨೯] ಭೀತರನ್ನು,[೩೦] ನೀರನ್ನು ಹೊಕ್ಕವರನ್ನು-ಶಿವಲಿಂಗವನ್ನಪ್ಪಿದವರನ್ನು,[೩೧] ಹುತ್ತವನ್ನೇರಿದವರನ್ನು[೩೨] ಕೊಲ್ಲಕೂಡದೆಂಬ ಯುದ್ಧನೀತಿಯ ನಿಯಮಗಳನ್ನು ಬಿಡಿಬಿಡಿಯಾಗಿ ಶಾಸನಗಳು ಉಲ್ಲೇಖಿಸುತ್ತವೆ. ಹಾಗೆಯೇ ಅನೇಕರು ಧರ್ಮಯುದ್ಧದ ಹರಿಕಾರರೆಂಬ ಬಿರುದನ್ನು ಹೊಂದಿದ್ದರೆಂಬುದನ್ನೂ ಹೇಳುತ್ತವೆ. "ಸತ್ಯಸಮರ ಸಂಘಟ್ಟನೋಪಲಬ್ಧ ವಿಜಯಲಕ್ಷ್ಮೀ ನಿವಾಸಿತ ಚೆಲ್ಲಕೇತನ",[೩೩] "ಎತ್ತಿದ ಮೊನೆಗೆ ಮುಂತು, ಕೆಟ್ಟಕಾಳೆಗಕೆಪಿಂತು"[೩೪] ಮೊದಲಾದವನ್ನು ಇಲ್ಲಿ ಉಲ್ಲೇಖಿಸಬಹುದು. ಆದರೆ ಈ ನಿಯಮಗಳನ್ನು ಪಾಲಿಸಿದವರು ಬಿರುದುಗಳನ್ನು ಹೊಂದಿದವರು ತುಳಿಲಸಂದ ರಾಗಿದ್ದರೊ ಹೇಗೆ ಎನ್ನುವುದು ತಿಳಿದುಬರುವುದಿಲ್ಲ. ಅಲ್ಲದೆ ತುಳಿಲಸಂದರೆಂದು ಉಲ್ಲೇಖಗೊಂಡವರೂ ಯುದ್ಧನಿಯಮಗಳನ್ನು ಪಾಲಿಸಿದ್ದರೆಂದು ಹೇಳುವುದಕ್ಕೆ ತಕ್ಕ ಆಧಾರಗಳಿಲ್ಲ. ತುಳಿಲಸಂದನಲ್ಲಿರಬೇಕಾದ ಕಾವ್ಯೋಕ್ತ ಗುಣಗಳಾದ ಕಲಿತನ, ಅಭಿಮಾನ, ಧರ್ಮ, ತ್ಯಾಗ, ಸತ್ಯ ಮತ್ತು ಶೌಚಗುಣಗಳು ಚಾಳುಕ್ಯ ಲಕ್ಕರಸ ವಸಾಯಿತನಲ್ಲಿದ್ದವು ಎಂಬ ಶಾಸನದ ಹೇಳಿಕೆಯಿಂದ ಅವನು ತುಳಿಲಾಳ್ತನವನ್ನು ಮೈಗೂಡಿಸಿಕೊಂಡಿದ್ದ ಎಂದು ಸ್ಥೂಲವಾಗಿ ಮಾತ್ರ ಹೇಳಬಹುದು. ರಾಜಕೀಯ-ಸಾಮಾಜಿಕ ಕಾರಣಗಳಿಂದಾಗಿ ತುಳಿಸಂದರದು ಜನಪ್ರಿಯ ವರ್ಗವಾಗಿ ಬೆಳೆದುಬರಲಿಲ್ಲ. ಆದರೆ ಕಾವ್ಯಗಳಲ್ಲಿ ತುಳಿಲಸಂದರೆಂದು ಹೆಸರಿಸಿ

ಅವರನ್ನು ಉದ್ದೇಶಿಸಿ ಹೇಳಿದ ಗುಣಪೌಲ್ಯಗಳು ಕೇವಲ ಅಪೇಕ್ಷಿತ ಗುಣಗಳಾಗಿ ವರ್ಣಿತವಾಗಿರದೆ ಅವನ್ನು ತಾತ್ವಿಕವಾಗಿಯಾದರೂ ಒಪ್ಪಿಕೊಂಡ ಒಂದು ವೀರವರ್ಗ ವಾಸ್ತವವಾಗಿ ಅಸ್ತಿತ್ವದಲ್ಲಿತ್ತು ಎಂದು ಮೇಲಿನ ಶಾಸನೋಲ್ಲೇಖಗಳು ಸ್ಪಷ್ಟಪಡಿಸುತ್ತಿರುವುದು ವಿಶೇಷವಾಗಿದೆ.

ಅಡಿಟಿಪ್ಪಣಿಗಳು :

೧. ಕಲಬುರ್ಗಿ ಎಂ. ಎಂ., ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಪು-೭೨

೨. ರನ್ನ ಮಹಾಕವಿ ತನ್ನ ಸಾಹಸಭೀಮ ವಿಜಯ ಕಾವ್ಯದಲ್ಲಿ ಆ ಯುದ್ಧ ಪ್ರಸಂಗಗಳನ್ನು ಹೆಸರಿಸಿದ್ದಾನೆ : ತುಱಗೋಳೋಳ್ ಪೆಣ್ಣುಯ್ಯಲೋ
ಳೆಱವೆಸದೊಳ್ ನೆಣ್ಬನೆಡರೋಳೂರಳವಿನೊಳಂ
ತಱಿಸಂದು ಗಂಡುತನಮನೆ
ನೆಱಪದವಂ ಗಂಡನಲ್ಲನೆಂತುಂ ಷಂಡಂ (ಆ.೩, ಪ.೧೦)

೩. ಕಲಬುರ್ಗಿ ಎಂ. ಎಂ., ವೀರಸಿದ್ಧಾಂತ, ಸಾಧನೆ, ಸಂ. ೬-೧, ಪು. ೧೪೮-೧೫೫.

೪. ಶೆಟ್ಟರ್, ಷ., ತುಳಿಲಾಳ್ಗಲ್, ಸಾಧನೆ, ಸಂ. ೯-೩, ಪು. ೩೯-೬೮

೫. ಸಾಧನೆ, ಸಂ. ೧೦-೧, ಪು. ೧೫೫-೬೦

೬. ವಿವಿಧ ಅರ್ಥಗಳಿಗೆ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟುವಿನ ಪುಟ, ೩೫೭೫-೭೬ನ್ನು ನೋಡಬಹುದು.

೭. ಅ. ರಾ. ಮಿತ್ರ, ತುಳಿಲಾಳ್ಗಳ್– ಒಂದು ಮಂಥನ, ಸಾಧನೆ. ಸಂ. ೧೦-೧, ಪು. ೧೫೫

೮. ಅದೇ, ಅದೇ. ೯. ಕೇಶಿರಾಜ, ಶಬ್ದಮಣಿದರ್ಪಣ, ಸಂಜ್ಞಾ ಪ್ರಕರಣ, ಸೂ. ೨೬

೧೦. ಕನ್ನಡ-ಕನ್ನಡ ನಿಘಂಟು (ಕಸಾಪ), ಪು. ೩೫೭೫

* ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ ॥

೧೧. EC. X, Sp. 5. 780 A.D. ಮನಸೂರಳಿಕಯ್ದು ಮಗನ್ನ ಬುಕಯ್ದು **ತುಳಿಲ್ಗೆ ಪಸನ್ತನ್ ಗಣ್ಡಪರುದಿಚನ್ದನ್.** ಕುದುರೆಯಿನ್ದಿರಿದು ನಡದಿರಿದ್ದೊಟ್ಟಿಕೆಯ್ದು ಬಿಳ್ದನ್.

೧೨. EC. II, (1972), SB. 171, 10th, C.A.D.

೧೩. EC. VII, (old), Sk. 243, (ಬಂದಳಿಕೆ) 1214 A.D.

೧೪. EC.VII.(old). Sk.136(ಬಳ್ಳಿಗಾವೆ), 1068A.D.. EI XV. NO.337(ಗಾವರವಾಡ), 1071 A.D.

೧೫. "ಆಯುಧ ಜೀವಿಗಳ ಸಂಘಗಳು" **ಕರ್ನಾಟಕ ಭಾರತಿ** ೧೦-೧

೧೬. The Corpus of Telengana Inscriptions (Pt. IV). No. 12. ಪೇರೂರು, ತಾ. ರಾಮನ್ನಪೇಟ, ಜಿ. ನಲಗೊಂಡ

೧೭. EC. X (1997), Ak. 245, (ಹೊಸಕಲ್ಯಾಡಿ) 1245 A.D.

೧೮. EC. VII, Sk. 307.

೧೯. SII XI, i, 69, 1033 A.D.

೨೦. EC XII, Tp. 101

೨೦. EC VI. Kd. 35, 1136 A.D.

೨೨. EC VIII, Sa. 58, 1143 A.D.

೨೩. EI VII, P. 212, 875-6 A.D.

೨೪. EC XII, Tp. 101. 1078 A.D.

ಆಕರ ಗ್ರಂಥಗಳು :

೧. ೧೦ನೆಯ ಶತಮಾನದಿಂದ ೧೪ನೆಯ ಶತಮಾನಗಳ ವರೆಗೆ ರಚಿತಗೊಂಡ ಜೈನ ಹಳೆಗನ್ನಡ ಕಾವ್ಯಗಳು.

೨. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೬೬

೩. ಎಂ. ಎಂ. ಕಲಬುರ್ಗಿ, ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಬೆಂಗಳೂರು, ೧೯೮೦
೪. ಆರ್. ಶೇಷಶಾಸ್ತ್ರಿ, ಕರ್ನಾಟಕದ ವೀರಗಲ್ಲುಗಳು, ಬೆಂಗಳೂರು, ೧೯೮೦
೫. ಬಿ. ಆರ್. ಹಿರೇಮಠ, ವೀರಗಲ್ಲುಗಳು, ಪ್ರಸಾರಾಂಗ, ಕ.ವಿ.ವಿ., ಧಾರವಾಡ
೬. ಎಸ್. ಶೆಟ್ಟರ್, 'ತುಳಿಲಾಳ್ಗಳ್', ಸಾಧನೆ, ಸಂ. ೯-೩. ಬೆಂ.ವಿ., ಬೆಂಗಳೂರು, ೧೯೮೦
೭. ಕಲಬುರ್ಗಿ ಎಂ. ಎಂ., 'ವೀರಸಿದ್ಧಾಂತ', ಸಾಧನೆ, ಸಂ. ೬-೧
೮. ಕೇಶಿರಾಜ, ಶಬ್ದಮಣಿದರ್ಪಣಂ
೯. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು
೧೦. ಎಪಿಗ್ರಫಿಯಾ ಕರ್ನಾಟಕದ ಸಂಪುಟಗಳು II(೧೯೭೨), VIII(ಹಳೆಯ), X(ಹಳೆಯ), XII(ಹಳೆಯ), X(೧೯೯೭)
೧೧. ಎಪಿಗ್ರಫಿಯಾ ಇಂಡಿಕಾ, ಸಂ. XV
೧೨. ದಕ್ಷಿಣ ಭಾರತದ ಶಾಸನಗಳು, ಸಂ.XI-i
೧೩. The Corpus of Telangana Inscriptions (Pt–IV)

- ಕೇಂಬ್ರಿಜ್-ಕರ್ನಾಟಕ ಸಮನ್ವಯ ರೀಸರ್ಚ್ ಇನ್‌ಸ್ಟಿಟ್ಯೂಟ್, ಮೈಸೂರು ೭-೯ ಜನವರಿ ೨೦೦೫ರ ಮೂರು ದಿನಗಳ ಕಾಲ ಮೈಸೂರಿನಲ್ಲಿ ಸಂಘಟಿಸಿದ್ದ ಪ್ರಥಮ ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ಮಂಡಿಸಿದ ಲೇಖನ.

■ ಎಸ್. ಬಿ. ಹಿರೇಮಠ : ಶಾಸನಶಾಸ್ತ್ರ ಅಧ್ಯಾಪಕರು, ಕನ್ನಡ ಸಂಶೋಧನ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ■

ಒಂದು ಭ್ರೂಣದ ಆತ್ಮ ಕತೆಯ ಮೊದಲ ಕೆಲವು ಸಾಲುಗಳು

ಸಂಕುಲಜೀವ

ನಿಗೂಢ ನಿಸ್ಸೀಮ ವಿನ್ಯಾಸದ
ಲಕ್ಷ ಲಕ್ಷ ವರ್ಷಗಳ
ನಿರಂತರ ಪ್ರವಾಹದ ಜೀವನದಿಯಲ್ಲಿ
ಮತ್ತೊಂದು ಹೊಚ್ಚ ಹೊಸ ತೆರೆಯಾಗಿ
ನಿನ್ನೆ ನಾನು ಸಂಭವಿಸಿಬಿಟ್ಟೆ.

ಇದು ಹೀಗೆ ಆಗಬಹುದಿತ್ತು
ಅಥವಾ ಆಗದೆಯೂ ಇರಬಹುದಿತ್ತು
ತುಟಿಯಷ್ಟು ಸನಿಹ ಆದರೂ ಬಾನಿನಷ್ಟು ದೂರ
ಅನ್ನುವ ಹಾಗೆ
ಆದರೂ ನಾನು ನಿನ್ನೆ ಸಂಭವಿಸಿಬಿಟ್ಟೆ.

ಯಾವದೋ ಒಂದು ರಾತ್ರಿ
ಯಾವದೋ ಒಂದು ಗಳಿಗೆ
ಅವ್ವ ಅಪ್ಪ ಎಂಬ ಎರಡು
ತುಡಿಯುವ ದೇಹಗಳ ಪ್ರಣಯದ ಫಲವಾಗಿ
ಮಿಡಿಯುವ ಜೀವಗಳ ಪ್ರೇಮದ ಕುಡಿಯಾಗಿ
ನಿನ್ನೆ ನಾನು ಸಂಭವಿಸಿಬಿಟ್ಟೆ.

ಋತುಚಕ್ರದ ನಡುಮಧ್ಯದಲಿ
ಇಲ್ಲಿ ಅಂಡಾಶಯದಿಂದ ಬಿಡುಗಡೆಗೊಂಡು
ಅಂಡನಾಳದೊಳಗೆ ಬಂದು
ಇನಿಯನಿಗಾಗಿ ಕಾದು ನಿಂತಿರುವ ಅಂಡಾಣು
ಅಲ್ಲಿ ಸಂಭೋಗದ ಶಿಖರಸುಖದಲ್ಲಿ .
ಸ್ಖಲನಗೊಂಡ ವೀರ್ಯಾಣುಗಳ ಕೋಟಿಕೋಟಿ ದಂಡು.
ವಿಚಿತ್ರ ಹುರುಪು ವಿಲಕ್ಷಣ ಚೈತನ್ಯ
ಲಕ್ಷಾಂತರ ಸಂಖ್ಯೆಯಲ್ಲಿ ಗರ್ಭಾಶಯ ಪ್ರವೇಶ
ಅಂಡಾಣುವಿನತ್ತ ಅವಿರತ ದೌಡು ಧಾವಂತ.

ಆದರೆ ಈಸಿ ಇದ್ದು ಜೈಸಿ
ಚುರುಕಿನಿಂದ ಅಂಡನಾಳದೊಳಗೆ ತೂರಿ
ರೋಮಾರಣ್ಯದೊಳಗೆ ಹಾದು
ಓಡಿ ಅಂಡಾಣುವನು ತಲುಪಿ
ಸುತ್ತುವರಿದು ಮುತ್ತಿಕೊಂಡಿದ್ದು
ಕೇವಲ ಹತ್ತೊ ನೂರೊ ಮಾತ್ರ.

ಕೊನೆಗೊಂದು ಶುಭ ಮುಹೂರ್ತದಲಿ
ಮುತ್ತಿಕೊಂಡ ಹತ್ತಾರರಲಿ
ಒಂದು ಸದೃಢ ವೀರ್ಯಾಣು ಮಾತ್ರ
ಸ್ಪರ್ಧೆಯಲ್ಲಿ ಗದ್ದು ಜಯಶಾಲಿಯಾಗಿ
ಜೀವರಾಗವ ಮೀಟಿ

ಇನಿಯಳ ಒಲವು ಗಳಿಸಿ
ಬಾಲವನು ಕಳಚಿ ತಲೆ ಮಾತ್ರ ಉಳಿಸಿಕೊಂಡು
ಇಮ್ಮಡಿ ಪ್ರೀತಿಯಿಂದ ಮುತ್ತು ಕೊಟ್ಟು
ಕೋಶ ಕವಚವ ತೂರಿ
ಕೋಟೆ ಬಾಗಿಲ ತೆರೆದು
ಕೇಂದ್ರವನು ಸೇರಿ
ಒಂದರೊಳಗೊಂದು ಕರಗಿ ಹೋಗಿ
ಎರಡು ಒಂದಾಗಿ
ಓಹ್ ಎಂಥ ಸುಂದರ ಮಿಲನ!
ಏನು ರೋಮಾಂಚನ!!

ಅಂಡಾಣು ವೀರ್ಯಾಣು ಎರಡೂ ಸೇರಿ
ತಮ್ಮತನವನು ಪೂರ ಕಳಕೊಂಡು
ಆದರೂ ಜನ್ಮಜನ್ಮಾಂತರಗಳ
ಸಾರವೆಲ್ಲವನೂ ಉಳಿಸಿಕೊಂಡು

ತಾವು ಇರುವುದೂ ಹೌದು
ಈ ಕ್ಷಣ ಇಲ್ಲವಾಗಿರುವದೂ ಹೌದು
ಹಳೆಯದೆಲ್ಲವೂ ಇದೆ ಇಲ್ಲಿ
ಆದರೂ ಎಲ್ಲವೂ ಹೊಸದು

ಅನಾಹತನಾದದ ನಿನಾದದ ನಡುವೆ
ಇಡೀ ಬ್ರಹ್ಮಾಂಡವೇ ಸಾಕ್ಷಿಯಾಗಿ
ನಾನು ಸಂಭವಿಸಿಬಿಟ್ಟೆ.

ನಾನು ಈ ಮೊದಲು ಇರಲಿಲ್ಲವೆ?
ಇದ್ದೆ, ಹೌದು ದಿಟವಾಗಿಯೂ!
ಇದ್ದೆನೆ? ಇಲ್ಲ ಇಲ್ಲ
ಇದೀಗ ಆಗಿದ್ದೇನೆ, ಇನ್ನೂ ಆಗುತ್ತಿದ್ದೇನೆ!!

ಇನ್ನು ಕೆಲವು ತಿಂಗಳು
ತಾಯ ಗರ್ಭವಾಸ ನನಗೆ
ಕೈ ಕಾಲು ಕಣ್ಣು ಮೂಡಿಸಿಕೊಳ್ಳುತ್ತ
ಮೆದುಳು ಮನಸು ಭಾವನೆ ರಚಿಸಿಕೊಳ್ಳುತ್ತ
ಅವ್ಯಕ್ತ ರೂಹು ಜೀವಂತ ರೂಪವಾಗುತ್ತ
ನಾಳೆಯ ಚಂದದ ಬದುಕಿಗಾಗಿ
ನೂರು ಬಣ್ಣದ ಕನಸು ಕಾಣುತ
ನಾನು ನಾನಾಗುತ್ತ ಜೀವನದಿಯಲ್ಲಿ
ನಿಮ್ಮಂತೆಯೇ ಮತ್ತೊಂದು ಸುಂದರ ತರಂಗವಾಗಿ
ಬರಲು ಅಣಿಯಾಗುತಿರುವೆ ನಿಮ್ಮ ನಡುವೆ

ಇದೊ ಬರುತಿರುವೆ ನಾನು
ಬನ್ನಿ ನೀವೆಲ್ಲ ನನ್ನ ಸ್ವಾಗತಕ್ಕೆ!

■ ಡಾ. ಸಂಜೀವ ಕುಲಕರ್ಣಿ : ನಗೆಮಲ್ಲಿಗೆ, ೧೯/೨, ಮಹಿಷಿ ರಸ್ತೆ, ಮಾಳಮಡ್ಡಿ, ಧಾರವಾಡ - ೭ ■

ಮೂರು ಕವಿತೆಗಳು

ಎಲ್. ವಿ. ಶಾಂತಕುಮಾರಿ

೧. ಅಮ್ಮ, ಸಾವು, ನಾನು

ನಿನ್ನುಸಿರ ತಿದಿಯೊತ್ತಿಯೊತ್ತಿ
ನಿನ್ನೊಡಲ ರಕ್ತಮಾಂಸಗಳ ಮೆತ್ತಿ ಮೆತ್ತಿ
ನನ್ನ ರೂಪಿಸಿದ ಬ್ರಹ್ಮ
ನೀ ನನ್ನ ಅಮ್ಮ.
ಹಿಗ್ಗಿ ಹಿಗ್ಗಿ ಹಿಗ್ಗಿಸಲೂ ನೀ ನೊಂದೆ.
ರಕ್ತ ಬಸಿಯುತ್ತ ನೋವಿನಲು ನೀ ನಲಿದೆ.
ಬಳ್ಳಿ-ಬಂಧನ ಹರಿದು ನಾ ಜಿಗಿದೆ
ನಿನ್ನೊಡಲೊಳಗಿಂದ ಮಡಿಲಿಗೆ.
ನಿನ್ನ ಬೆಚ್ಚನ್ನ ಎದೆಯೊಳಗೆ
ಛಳಿ ಬಿಸಿಲಿಗೊಮ್ಮೆಯೂ ನಲುಗದೆ
ಉಂಡುಂಡು. ಎದೆಹಾಲ ಪಕ್ವಾನ್ನ, ದಣಿಯದೆ,
ಮೂಲೋಕದೊಡೆಯನಿಗು ಮಿಗಿಲಾಗಿ
ಮೆರೆದೆ ನಾ ನಿನ್ನ ಕಣ್ಣ ಮಣಿಯಾಗಿ.

ನಾ ನಕ್ಕಾಗ ನೀ ನಕ್ಕೆ, ನಾನತ್ತಾಗ ನೀನೂ ಅತ್ತೆ
ನಾ ಎಡವಿ ಬಿದ್ದಾಗ, ಮೇಲೆತ್ತಿ
ಮೈದಡವಿ, ಧೂಳೊರಸಿ, ಏಳು ಎದ್ದೇಳು
ಮುಂದೆ ನಡೆ ಎಂದೆ.
ಮರೆಯಬಹುದೇ ನಿನ್ನ ಆ ರೂಪ?
ಬಿಳಿಯ ದಂತದಲಿ ಕೊರೆದಂಥ ಮತ್ತೆ ಮತ್ತೆ ನೋಡಬೇಕೆನಿಪ
ನೋಡಿ ನಮಿಸಬೇಕೆನಿಪ
ಅನ್ನಪೂರ್ಣೆಯ ಸಿರಿರೂಪ?
ಆ ಸೌಮ್ಯ ಮೊಗದಾ ಬೆಳಗು
ತೊಟ್ಟ ವಜ್ರ ಕಾಂತಿಗು ಮಿಗಿಲು.
ಉಟ್ಟ ನೂಲೆಳೆಗೆ ಪಟ್ಟೆಪೀತಾಂಬರದ ಮೆರುಗು
ಬೆಳ್ಳಿತಲೆ, ಗೆರೆ ಗೆರೆಯ ಚರ್ಮಕೂ ಹಿಮಗಿರಿಯ ಸೊಬಗು
ಬೆದರಿಸಲಿಲ್ಲ, ಬೆತ್ತ ಹಿಡಿಯಲಿಲ್ಲ
ಹೊತ್ತಿಗೆಯ ಕುರಿತೋದಿಸಲಿಲ್ಲ
ಆದರೂ ನೀ ಕಲಿಸಿದ್ದಕ್ಕೆ ಲೆಕ್ಕವೇ ಇಲ್ಲ.
ಕಣ್ಣ ಕೊನೆ ಅಲುಗಿನಲಿ ಕಲಿಸಿದ್ದೆ
ಯುಗಯುಗಗಳಲಿ ಬರೆದಿದ್ದ
ತಪ್ಪು ಒಪ್ಪುಗಳ ನೀತಿಸಂಹಿತೆಯ.
ಜೇನು ದನಿಯಲ್ಲಿ ಹರಿಸಿದ್ದೆ
ತಲೆತಲೆಮಾರುಗಳ ಅನುಭವದ ಜ್ಞಾನಸಿರಿಯ.
ಮರೆಯಬಹುದೇ. ಮರೆತು ಜೀವಿಸಬಹುದೇ
ವರದೆ ಶಾರದೆಯಂಥ ನಿನ್ನ ಸಿರಿಮೊಗವ?
ನೋವುಗಳ ನುಂಗಿ ನುಂಗಿ ನೀ ಬರಿ ನೋವಾಗಿದ್ದೆ
ಆದರೂ ಮೊಗತುಂಬ ಮಂದಹಾಸವನೆ ಬೆಳಗಿಸಿದ್ದೆ.
ನೀ ನಮಗದೆಷ್ಟೊಂದು ಬೇಕಾಗಿದ್ದೆ.
ಕಾಲನಾ ಕೈಯ ಕುಡುಗೋಲು ಹೊಳೆದಿತ್ತು
ಜೀವಜೀವಾಳದ ಮೂಲ ಬೇರನಲ್ಲೆ ಕಡಿದಿತ್ತು.
ನಿದ್ರೆಯಿರಬಹುದೆಂದೆ,
'ಅಮ್ಮ ಅಮ್ಮ' ಎಂದೆ.
ಕಣ್ಣು ಬಿಡಬಹುದೆಂಬ ಭ್ರಮೆಯಿಂದ ಕಾದೆ.
ಹಾಲುಬಿಳುಪಿನ ಹಣೆ ಮೇಲೆ ಹಿಮಗಿರಿಯ ಮಂಜು ಇಳಿದಿತ್ತು.
ತುಡಿತುಡಿದು ಓಗೊಡುತ್ತಿದ್ದ ಎದೆಯ ಗೂಡನು ಸ್ತಬ್ಧ ಮಾಡಿತ್ತು.
ನುಂಗಲಾರದ, ನುಂಗಲೇಬೇಕಾದ ಒಣ ತುತ್ತು
ಹುಟ್ಟಿದೆಲ್ಲವನೂ ಬೆಂಬತ್ತುವಾ ಈ ಮೃತ್ಯು.
ಇದೆ ಜೀವನದ ಪರಮ ಸತ್ಯ
ಇದೆ ಬದಲಾಗದಂತಹ ನಿತ್ಯ.
ನಿಜ, ಸಾವು ಜೀವನದ ಸಹಜ ಧರ್ಮ
ಸಾವಿಗಳುವುದೂ ಮಾನವನ ಸಹಜ ಧರ್ಮ.

'ಅಮ್ಮ' ಇನ್ನು ಬರಿಯ ಎರಡಕ್ಷರ.
ನಿನ್ನೊಡಲಿನೊಂದಂಶ ನಾನು.
ನಿನ್ನೊಡನೆಯೇ ಅಳಿದೆನೇ ನಾನು?
ಅಥವಾ ನನ್ನೊಳಗೆ ಉಳಿದಿಹೆಯೋ ನೀನು?
ಗೊಂದಲದ ಮನದೊಳಗೆ ಏಳುತಿರೆ ಪ್ರಶ್ನೆ
ಉತ್ತರ ಬರಿ ಪ್ರಶ್ನೆ.
ದೊಡ್ಡಾಲ ಬುಡ ಕಡಿದು, ಬಿಳಲು ನಿರಾಧಾರ.
ಅನಾಥಪ್ರಜ್ಞೆಯ ಸಾಕಾರ.

ಇನ್ನು, ನನಗೆ ನಾನೇ ಅಮ್ಮನಾಗಬೇಕು.
ಏಳು, ಎದ್ದೇಳು, ಮುಂದೆ ನಡೆ ಎನಬೇಕು
ಅವಳ ತಂಪು ನೆಳಲಿನ ನೆನಪಿರಲಿ,
ಬೇರಿಳಿಸಿ ನೆಲದಾಳದಲಿ,
ಹಸಿರ ಹರಡುತ್ತ ನಿಲಬೇಕು,
ಹಸಿರ ಹರಡುತ್ತ ನಿಲಬೇಕು.

೨. ಕತ್ತಲು

ಕತ್ತಲೆಂದರೆ ಏನೋ ಅಸಹನೆ
ಜೊತೆಗೆ ಎಂಥದೋ ಅದಮ್ಯ ಆಕರ್ಷಣೆ,
ಕತ್ತಲೆಂದರೆ ಅದೇನೋ ಮುಜುಗರ
ಬಿಡದೆ ಕಾಡುವ ಭಯ– ಸಂಶಯ, ಜೋಡಿನಾಗರ.

ಹಾವನು ಹಗ್ಗ ಮಾಡುವ, ಹಗ್ಗವನು ಹಾವು ಮಾಡುವ
ಇದರ ಮೋಡಿ ಕಂಡಾಗ, ಬುದ್ಧಿಭಾವ
ಗಳ ಬಗೆಗೆ ತಾತ್ಸಾರ, ಹೆಡೆಯೆತ್ತಿದ್ದ ಗರ್ವ
ನಿರಸನ. ಕಂಡಾಗ ಮನದಾಳದಲಿ ಇದರ ಸಾಮ್ಯ
ಥಟ್ಟನೆ ಮೂಡಿಬಿಡುವುದು ಇದರೊಡನೆಯೂ ತಾದಾತ್ಮ್ಯ.

ಕತ್ತಲೆಂದರೆ? ಬೆಳಕಿನ ಹುಡುಕು ಕಣ್ಣ
ತಪ್ಪಿಸಿ ಅಡಗಿಕೊಳ್ಳುವ ತಾಣ.
ಚತುರಿಂದ್ರಿಯ ಪ್ರಪಂಚದನುಭವವ
ದೃಢಪಡಿಸಲಾರದ ವಿಕ್ಷೋಭ ಭಾವ
ಸ-ಶಬ್ದವಾದಲ್ಲಿ ಕತ್ತಲೂ ಒಂದಿಷ್ಟು ಆಗುವುದು ಸಹ್ಯ.
ಶಬ್ದವೇ ಇರದಲ್ಲಿ ಕತ್ತಲು ಅ-ಸಹ್ಯ.
ಆದರೂ, ಬೆಳಕಿನಿಂದ್ರಿಯಕೆ ಕತ್ತಲೇ ಗಮ್ಯ.

ಬೆಳಕ ಇಡಿಇಡಿಯಾಗಿ ನುಂಗಿಬಿಡುವ ಕತ್ತ
ಲೆಂದರೆ. ಅಯಸ್ಕಾಂತ ಸೆಳೆತ.
ಇದರ ತಣ್ಣನೆಯ ಕಪ್ಪು ಕಂಬಳಿಯಲಿ, ಪಾನಮತ್ತನೊಲು
ಅಸ್ತಿತ್ವವನೇ ಬಿಸುಟುಬಿಡುವ ಬಯಕೆಯಲ್ಲಿ,
ಕಣ್ಣುಗಳೇ ಇರದ, ಇದರ ಗುಮ್ಮತನಕೆ, ಅಂಜಿ ಮುಚ್ಚುವುವು ರೆಪ್ಪೆಗಳು.

ಇರುವುದನೆಲ್ಲ, ಅರೆಕ್ಷಣದಿ ಇಲ್ಲವಾಗಿಸಿಬಿಡುವ
ಸ್ಪರ್ಶ ಮಾತ್ರದಿ, ಯುಗಯುಗದ ಅನುಭವವ
ಅಳಿಸಿ ಬಿಡುವ
ಈ ಬೃಹತ್ ಕಗ್ಗತ್ತಲ ಪ್ರಗಾಢತೆ
ಹೆಬ್ಬಂಡೆಯಂತೆ
ಕಾಡುತಿದೆ, ಕೆಣಕುತಿದೆ
ಏಕಮಾತ್ರ ಸಂಪೂರ್ಣ ಸತ್ಯದಂತೆ.
ಕಪ್ಪು ಕತ್ತಲಿನ ಹೊಳೆಹೊಳೆವ ಮಿಂಚಿನಂತೆ
ಫಳಕ್ಕನೆ, ಎಲ್ಲವನೂ ನಿಚ್ಚಳ ಮಾಡುತಿದೆ.

೩. ಮಾಳ ಬೆಕ್ಕು

ಕತ್ತಲೆಯ ಸ್ಪರ್ಧೆಯಲಿ ಕಪ್ಪು ಗೆದ್ದಂಥ ಕಪ್ಪು.
ಹಗಲ ಬೆಳಕನು ತಿನಬಂದ ಕರಿ ಧೂಮಕೇತು.
ಹೊಳೆವ ಹಸಿರು ನಕ್ಷತ್ರಗಳ ಸ್ಥಿರ ಚಕ್ಷುಗಳು.
ಯುಗಯುಗಗಳಿಂದ ಮಡುಗಟ್ಟಿ ನಿಂತು
ಪಳಗಿಸಿದಷ್ಟು ಮತ್ತೆ ಮತ್ತೆ ಪುಟಿವ ಆನುವಂಶೀಯ ಸೆಳಕುಗಳು.
ಮೀಸೆ ಹುರಿಮಾಡುತ್ತ
ಮೈಯೆಲ್ಲ ನಿಮಿರಿಸುತ್ತ
ಪೊದೆ ಬಾಲವನು ಸಮರಕಣಿಮಾಡುತ್ತ
ಒಮ್ಮೆ ನಿಟ್ಟಿಸಿದರೆ ಸಾಕು ನಿಮ್ಮತ್ತ
ಒಳಗೊಂದು ಛಳಕು ಹೊಡೆದಂತೆ
ಎದೆ ಝಲ್ಲೆಂದು ನಡುಗುವುದು.
ಹಿತ್ತಿಲ ಮೋಟು ಗೋಡೆಯಿಂದ
ನೆಟ್ಟಗೆ ಮಾಡಿನ ಮೇಲಕ್ಕೆ
ನೆಲದಿಂದ ಥಟ್ಟನೇ ಹಕ್ಕಿಗೂಡಿಗೆ
ಸಲೀಸು ಇದರ ಹಾರಾಟ.
ರೆಕ್ಕೆ ಏಕೆ ಇದಕೆ ಹಾರಲಿಕೆ?
ಸಾಕಿದ್ದರೆ, ಬೇಟೆಯಾ ಬಯಕೆ.
ನೀರ ಮೀನಂಥ ನಿಶ್ಶಬ್ದ ಚಲನೆ,
ತುಪ್ಪುಳ ಮೈನ ಗುರ್‌ಗುರ್ ಗರ್ಜನೆ,
ಪುಟ್ಟ ಹಕ್ಕಿ ಎದೆಯಲ್ಲಿ ಭಯದ ಬಾಣ ನಾಟುವುದು.
ಮತ್ತೆ ಸುತ್ತೆಲ್ಲವನೂ ಕತ್ತಲಾಗಿಸಿಬಿಡುವುದು.

■ ಎಲ್. ಪಿ. ಶಾಂತಕುಮಾರಿ :
೧೫೩, ರಾಮರಕ್ಷಾ, ೪ನೇ ಮೇನ್, ೫ನೇ ಕ್ರಾಸ್, ಪೂರ್ಣಪ್ರಜ್ಞ ಲೇಔಟ್
ಬನಶಂಕರಿ ೩ನೇ ಹಂತ, ಬೆಂಗಳೂರು - ೫೬೦ ೦೮೫ ■

ದ್ರಾವಿಡ ಸಂಬಂಧ - ೩ : ಕಡಲು ಕುಡಿದ ಭೂಮಿಯ ನಕಾಶೆ

ಒಂದು ಅನುಬಂಧ ಷ. ಶೆಟ್ಟರ್

ಕಳೆದುಹೋಗಿದ್ದ, ಕಳಚಿಕೊಂಡಿದ್ದ ಮತ್ತು ಕತ್ತಲಲ್ಲಿ ಅಡಗಿದ್ದ ಪರಂಪರೆಯ ಬಗ್ಗೆ ನಮ್ಮನ್ನು ಎಚ್ಚರಿಸಿ, ನಮ್ಮ ಸಂಸ್ಕೃತಿಯ ಸ್ವರೂಪವನ್ನು ಅರಿತುಕೊಳ್ಳುವಂತೆ ಮಾಡಿದ ಕಾಲ, ೧೯ ನೆಯ ಶತಮಾನದ ಉತ್ತರಾರ್ಧ. ಕನ್ನಡದ ಅತ್ಯಂತ ಪುರಾತನ ಕೃತಿ ಎನಿಸಿರುವ ಕವಿರಾಜಮಾರ್ಗ ಮತ್ತು ಕನಿಷ್ಠ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಕತ್ತಲು ಪಾಲಾಗಿದ್ದ ತಮಿಳಿನ 'ಶಂಗಂ' ಸಾಹಿತ್ಯವು ಪುನಃ ಬೆಳಕು ಕಂಡದ್ದು ಈ ಕಾಲದಲ್ಲಿ; ಕಾರಣ, ೧೯ ನೆಯ ಶತಮಾನದ ಉತ್ತರಾರ್ಧವನ್ನು ನಮ್ಮ ಪುನರುತ್ಥಾನ ಕಾಲವೆಂದು ಭಾವಿಸಿದರೆ ಅದು ೧೬ ನೆಯ ಶತಮಾನದಲ್ಲಿ ಯುರೋಪಿನಲ್ಲಿ ಘಟಿಸಿದ 'ರಿನಯಜ್ಞಾ'ಕ್ಕಿಂತ ಹೆಚ್ಚು ಪ್ರಸ್ತುತವೆನಿಸಬಹುದು. ಯುರೋಪಿನಲ್ಲಿ ಗ್ರೀಕ್-ಲ್ಯಾಟಿನ್ ಪುನರುತ್ಥಾನಕ್ಕಿಂತ ಹೆಚ್ಚು ಆದದ್ದು ನವಸಾಹಿತ್ಯ-ಸಂಸ್ಕತಿಯ ನಿರ್ಮಾಣ; ನಮ್ಮಲ್ಲಾದರೆ ಪಾರಂಪರಿಕ ಸಾಹಿತ್ಯ-ಸಂಸ್ಕೃತಿಯ ಪುನರುತ್ಥಾನ ಕಾರ್ಯವು ದಶಕಗಳ ಕಾಲ ಮುಂದುವರಿಯಿತು ಮಾತ್ರವಲ್ಲ ಅದಿನ್ನೂ ಮುಂದುವರಿಯುತ್ತಲೇ ಇದೆ. ಇವರ ಸೆರಗನ್ನು ಹಿಡಿದು ನವಯುಗದ ಮೌಲ್ಯಗಳೂ ಗೋಚರಿಸಿಕೊಂಡದ್ದು ಮತ್ತೊಂದು ವಿಷಯ.

ವಿಜ್ಞಾನ ಮತ್ತು ಪರಂಪರೆ - ೧೯ ನೆಯ ಶತಮಾನದ ದೃಶ್ಯ :

'ಲೆಮೂರ್' ಎಂಬುದು ಆರಂಭಕಾಲದ ಒಂದು ಕಪಿತಳಿ. ಈ ಅಪೂರ್ವ ಪ್ರಾಣಿ ಹಿಂದೂಮಹಾಸಾಗರದಿಂದ ಪ್ಯಾಸಿಫಿಕ್ ಸಾಗರದ ವರೆಗೂ (ಇಂದಿನ ಮಡಗಾಸ್ಕರ್, ಇಂಡಿಯ ಮತ್ತು ಆಸ್ಟ್ರೇಲಿಯ ದೇಶಗಳನ್ನು ಒಳಗೊಂಡು) ವಿಸ್ತರಿಸಿದ್ದ ಅಪಾರ ಭೂಖಂಡದಲ್ಲಿ ಹಿಂದೊಮ್ಮೆ ವಾಸಿಸುತ್ತಿತ್ತೆಂದು ಬ್ರಿಟನ್ನಿನ ಪ್ರಾಣಿಶಾಸ್ತ್ರಜ್ಞ ಫಿಲಿಪ್ ಲುಟ್ಲಿ ಸ್ಕ್ಯಾಲ್ಟರ್ ೧೮೬೪ರಲ್ಲಿ ಒಂದು ಸಿದ್ಧಾಂತವನ್ನು ಮಂಡಿಸಿ, ಆ ಭೂಖಂಡವನ್ನು 'ಲೆಮೂರಿಯಾ' ಎಂಬ ಹೆಸರಿನಿಂದ ಗುರುತಿಸಿದನು. ಇದಾದ ಸುಮಾರು ಎರಡು ದಶಕಗಳ ನಂತರ ಆಸ್ಟ್ರಿಯಾದ ಸಸ್ಯಶಾಸ್ತ್ರಿ ಎಡುಆರ್ಡ್ ಸುಯಸ್ಸ್ ಇದೇ ಪ್ರದೇಶದಲ್ಲಿ 'ಗೊಂಡ್ವಾನ' ಸಸ್ಯದ ಪಳೆಯುಳಿಕೆಯನ್ನು ಶೋಧಿಸಿ, ಇದಕ್ಕೆ 'ಗೊಂಡ್ವಾನ ಭೂಖಂಡ'ವೆಂಬ ಹೆಸರಿತ್ತನು. ೧೮೭೦-೯೦ರ ಕಾಲಾವಧಿಯ ವಿಜ್ಞಾನಿಗಳ ಗಮನವನ್ನು ವಿಶೇಷವಾಗಿ ಸೆಳೆದ ಈ ಭೂಖಂಡವು ಇನ್ನೂ ಹಲವಾರು ಹೆಸರುಗಳಿಂದ ಗುರುತಿಸಿಕೊಂಡಿತು. ಅವುಗಳಲ್ಲಿ 'ಆಫ್ರಿಕಾನೋ-ಇಂಡಿಯಾನ ಕಾಂಟಿನೆಂಟ್', 'ಇಂಡಿಯಾನ-ಓಸಿಯಾನಿಯಾ', 'ಇಂಡೋ-ಮಡಗಾಸ್ಕರ್ ಪೆನಿನ್ಸುಲ' ಎಂಬವು ಕೆಲವು. ಈ ಭೂಖಂಡದ ಮಹತ್ವವನ್ನು ಪ್ರಾಣಿ ಮತ್ತು ಸಸ್ಯಗಳಿಗೆ ಸೀಮಿತಗೊಳಿಸದೆ, ಇದು ಮಾನವ ಕುಲದ ಉಗಮ ಸ್ಥಾನವೇ ಆಗಿತ್ತೆಂದು ಕೆಲವು ವಿಜ್ಞಾನಿಗಳು ಪ್ರತಿಪಾದಿಸಿದರು. ಅಂಥವರಲ್ಲಿ ಜರ್ಮನಿಯ ಎರ್ನೆಸ್ಟ್-ಹ್ಯೆಕಲ್ ಪ್ರಮುಖ.[೧]

ಈ ಭೂಖಂಡದ ಬಗ್ಗೆ ವಿಜ್ಞಾನಿಗಳು ಕೊಟ್ಟ ವಿವರಗಳಲ್ಲಿ ಗಮನಾರ್ಹವಾದವುಗಳು ಇಂತಿವೆ :

೧. 'ಲೆಮೂರ್' ಪ್ರಾಣಿ ಮತ್ತು 'ಗೊಂಡ್ವಾನ' ಸಸ್ಯ ಅತ್ಯಂತ ಪುರಾತನ (ವಿಜ್ಞಾನಿಗಳ ಪರಿಭಾಷೆಯಲ್ಲಿ 'ಮೆಸೊಜೋಯಿಕ್') ಯುಗದಲ್ಲಿ ಭಾರತದ ದಕ್ಷಿಣಕ್ಕಿದ್ದ ಅಪಾರ ಭೂಖಂಡವನ್ನೆಲ್ಲಾ ವ್ಯಾಪಿಸಿದ್ದವು. ಆಗ ಈ ಭೂಖಂಡವು ದಕ್ಷಿಣ ಆಫ್ರಿಕೆಯಿಂದ ಆಸ್ಟ್ರೇಲಿಯ ವರೆಗೂ ಅಲ್ಲಿಂದ ದಕ್ಷಿಣ ಅಮೆರಿಕೆಯ ವರೆಗೂ ಹಬ್ಬಿತ್ತು.

೨. ಮುಂದೊಂದು ಕಾಲಘಟಕದಲ್ಲಿ (ಅವರ ಪರಿಭಾಷೆಯಲ್ಲಿ 'ಕ್ರೀಟೇಸಿಯಸ್' ಯುಗದ ಹೊರ ಅಂಚು ಮತ್ತು 'ಯೋಸೆನ್' ಯುಗದ ಆರಂಭದಂಚು) ಸಂಭವಿಸಿದ ಮಹಾಪ್ರಳಯ ಅಥವಾ ಅಘೋರ ಸುನಾಮಿಯಲ್ಲಿ ಈ ಭೂಖಂಡವು ಭಗ್ನಗೊಂಡು, (ಈಗ ಹಿಂದೂಮಹಾಸಾಗರದಲ್ಲಿ ಕಾಣುವ ಚಿಕ್ಕಪುಟ್ಟ ದ್ವೀಪಗಳನ್ನು ಮತ್ತು ಹೊರ ಅಂಚಿನಲ್ಲಿರುವ ಮಡಗಾಸ್ಕರ್, ಆಸ್ಟ್ರೇಲಿಯ ಮುಂತಾದ ಬೃಹತ್ ಘಟಕಗಳನ್ನು ಹೊರತುಪಡಿಸಿ) ಇದರ ಬಹುತೇಕ ಭಾಗವು ಕಡಲಡಿ ಸೇರಿತು.

೧೮೭೦ರಲ್ಲಿ ಆರಂಭಗೊಂಡ ಈ ಚರ್ಚೆಯು ೧೯೩೦ರಲ್ಲಿ ದಿಕ್ಕನ್ನು ಬದಲಿಸಿಕೊಂಡು, ೧೯೯೦ರ ವರೆಗೂ ಮುಂದುವರಿಯಿತು. ಆದರೆ ಇದು ವಿಜ್ಞಾನಿಗಳಿಗೆ ಮಾತ್ರ ಸೀಮಿತಗೊಳ್ಳದೇ ಅತೀಂದ್ರಿಯ ಸಿದ್ಧಾಂತಿಗಳಾದ ತಿಯೋಸಾಫಿಸ್ಟರಿಗೂ ಭಾಷಾಭಕ್ತರಾದ ತಮಿಳರಿಗೂ ವಿಸ್ತರಿಸಿಕೊಂಡಿತು. ಈ ಮೂರು ಪ್ರಮುಖ ಪಂಗಡಗಳು ಹೇಗೆ ಈ ಪ್ರಶ್ನೆಯನ್ನು ಕೆಣಕಿದವು ಮತ್ತು ಅವರಿಂದಾಗಿ ಜನಾಂಗ, ಭಾಷೆ, ಪ್ರದೇಶಗಳ ಸಕಾಲೆಗಳು ಹೇಗೆ ರೂಪಗೊಳ್ಳತೊಡಗಿದವು ಎಂಬುದನ್ನು ಅರಿತುಕೊಳ್ಳುವುದೆ ಈ ಲೇಖನದ ಪ್ರಮುಖ ಉದ್ದೇಶ. ಇದು ಕವಿರಾಜಮಾರ್ಗ ಮತ್ತು ಕನ್ನಡಿಗರಿಗೆ ನೇರವಾಗಿ ಸಂಬಂಧಪಡದ ವಿಷಯವೆಂಬುದೇನೊ ನಿಜ; ಆದರೆ ದ್ರಾವಿಡ ಜನಾಂಗ, ಪ್ರದೇಶ ಮತ್ತು ಭಾಷೆಗೆ ಇದು ಒಂದಿಲ್ಲೊಂದು ಬಗೆಯಲ್ಲಿ ಸಂಬಂಧ ಪಟ್ಟಿರುವುದರಿಂದ ಪರೋಕ್ಷವಾಗಿ ಅದು ನಮಗೂ ಸಂಬಂಧಪಟ್ಟ ವಿಷಯವಾಗಿದೆ ಎಂಬುದು ನನ್ನ ಅನಿಸಿಕೆ.

ಅಖಂಡ ಭೂಖಂಡದ ಪುರಾತನತೆ-ಪ್ರಸ್ತುತತೆ :

ಲೆಮೂರಿಯಾ ಒಂದು ಅಪಾರ ಮತ್ತು ಅಖಂಡ ಭೂಭಾಗವಾಗಿತ್ತೆನ್ನುವುದರ ಬಗ್ಗೆ ೧೯ನೆಯ ಶತಮಾನದ ವಿಜ್ಞಾನಿಗಳಲ್ಲಿ ಸ್ಥೂಲ ಸಹಮತವಿದ್ದರೂ ಅದು ಕಡಲಡಿ ಸೇರಿತೆನ್ನುವುದರ ಬಗ್ಗೆ ಮತ್ತು ಅದು ಸೇರಿದ ಕಡಲಿನ ಬಗ್ಗೆ ಅವರಲ್ಲಿ ಒಮ್ಮತವಿರಲಿಲ್ಲ. 'ಭೂಖಂಡಗಳು ಅಚಲ, ಅವು ಕರಾವಳಿಯ ಕೊರೆತಕ್ಕೊಳಗಾಗಬಹುದೇ ಹೊರತು, ಕುಸಿದು, ಕಡಲಡಿ ಸೇರಲಾರವು' ಎಂಬ ಸಿದ್ಧಾಂತವನ್ನು ಪ್ರಕೃತಿ ವಿಜ್ಞಾನಿ ಎ. ಆರ್. ವ್ಯಾಲ್ಲೇಸ್ (೧೮೭೦) ಮತ್ತು 'ಭೂಖಂಡವು ಭಗ್ನಗೊಂಡಾಗ ಅದರ ಘಟಕಗಳು ದೂರದೂರ ಸರಿಯ(ಡ್ರಿಫ್ಟ್)ಬಲ್ಲವೇ ಹೊರತು, ಅವು ಸಮುದ್ರ ತಳಕ್ಕೆ ಇಳಿಯಲಾರವೆಂದು ಜರ್ಮನಿಯ ನೆಟಿಯೋ ಜೂಆಲಾಜಿಸ್ಟ್ (೨೦ನೆ ಶತಮಾನದ ಆರಂಭ) ಎ. ಎಲ್. ವೆಜ್‌ನರ್ ಮುಂತಾದವರು ವಾದಿಸಿ, ಭೂಖಂಡವು ಕಡಲಡಿ ಸೇರಿತೆಂಬ ಸಿದ್ಧಾಂತವನ್ನು ತಿರಸ್ಕರಿಸಿದರೂ ಲೆಮೂರಿಯಾವು ಕಡಲುಪಾಲಾಯಿತೆಂಬ ನಂಬಿಕೆಯು ಹೆಚ್ಚು ಹೆಚ್ಚು ಪ್ರಸಾರಗೊಳ್ಳುತ್ತಲೇ ಮುಂದೆ ಸಾಗಿತು.[೨]

೧೯೨೦ರ ಸುಮಾರಿಗೆ ಈ ವಾದದಲ್ಲೊಂದು ಬಗೆಯ ಸ್ಥೂಲ ಒಮ್ಮತವೇರ್ಪಟ್ಟು ಸಾಗರದಾಳದ ಅನ್ವೇಷಣೆ ಕೈಕೊಳ್ಳಲು ಕೆಲವು ವಿಜ್ಞಾನಿಗಳನ್ನು ಪ್ರೇರೇಪಿಸಿತು. ಈ ಬಗೆಯ ಅನ್ವೇಷಣೆಗಳಲ್ಲಿ ೧೮೭೨-೭೬ರ 'ಅಟ್ಲಾಂಟಿಕ್ ಸಾಗರದ ಛಾಲೆಂಜರ್', ೧೮೩೩-೩೪ರ 'ಆಂಗ್ಲೋ-ಈಜಿಪ್ಷಿಯನ್ ಜಾನ್‌ಮರ್ರೀ', ೧೯೦೪ರ 'ಬ್ರಿಟಿಷ್ ಅಡ್ಮಿರಾಲ್ಟಿ ಸೀಲಾರ್ಕ್', ೧೯೫೯-೬೫ರ 'ಬಹುರಾಷ್ಟ್ರೀಯ ಸಾಗರತಳಶೋಧ' ಮತ್ತು ೧೯೬೮-೬೯ರ 'ಕೆರ್ಗೋಲೀನ್ ಪ್ರಸ್ತಭೂಮಿ'ಯ ಅನ್ವೇಷಣೆಗಳು ಉಲ್ಲೇಖಾರ್ಹ. ಈ ಅನ್ವೇಷಣೆಗಳ ಮೂಲಕ ಕಂಡುಕೊಂಡ ಸಮುದ್ರ ತಳದ ಭೂ ಸೇತುವೆ(ರಿಡ್ಜಸ್)ಗಳು, ಭೂ ಶಿಖರ(ಪೀಕ್ಸ್)ಗಳು, ಮಡುಗಟ್ಟಿ ನಿಂತಿದ್ದ ಕಗ್ಗಲ್ಲ(ಗ್ರೆನೈಟ್ ಮಾಸ್)ದಿನ್ನೆಗಳು, ಕೆಲವರನ್ನು ರೋಮಾಂಚನಗೊಳಿಸಿ ಲೆಮೂರಿಯಾ ಭೂಖಂಡದ ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸಿದವು.[೩]

ವಾರಸುದಾರಿಕೆಯ ಪ್ರತಿಪಾದನೆ :

ಭೂಖಂಡವೊಂದು ಬಹುಕಾಲ ಅಸ್ತಿತ್ವದಲ್ಲಿದ್ದು, ಅಘೋರ ಸುನಾಮಿಯಲ್ಲಿ ಕಡಲಡಿ ಸೇರಿತೆಂಬ ವಾದವು ಪ್ರಸಾರಗೊಳ್ಳುತ್ತಿದ್ದ ಕಾಲದಲ್ಲಿ ಅದು ಹಿಂದೊಮ್ಮೆ ತಮ್ಮ ಮಾತೃಭೂಮಿಯಾಗಿತ್ತೆಂದು ಪ್ರತಿಪಾದಿಸಿಕೊಳ್ಳುವ ವರ್ಗಗಳೂ ಹುಟ್ಟಿಕೊಳ್ಳತೊಡಗಿದವು. ಈ ಬಗೆಯ ವಾರಸುದಾರಿಕೆಯನ್ನು ಪ್ರತಿಪಾದಿಸಿಕೊಂಡ ಎರಡು ಪಂಗಡಗಳನ್ನು ಸುಲಭವಾಗಿ ಗುರುತಿಸಬಹುದು : ಒಂದು, ಪ್ಯಾಸಿಫಿಕ್-ಅಟ್ಲಾಂಟಿಕ್ ಪರದ್ದು; ಮತ್ತೊಂದು, ಹಿಂದೂಮಹಾಸಾಗರ ಪರದ್ದು. ಇವುಗಳಲ್ಲಿ ಮೊದಲನೆಯದು ಲೆಮೂರಿಯಾ-ಅಟ್ಲಾಂಟಿಸ್ ಭೂಖಂಡವು ಜಲಾಂತರ್ಗತವಾದದ್ದು ಪ್ಯಾಸಿಫಿಕ್ ಸಾಗರದಲ್ಲಿ ಮತ್ತು ಅದರಲ್ಲಿ ಹೇಗೋ ಪಾರಾದದ್ದು ಇಂದಿನ ಕ್ಯಾಲಿಫೋರ್ನಿಯಾ ಕರಾವಳಿ ಎಂದು ವಾದಿಸಿತು; ಎರಡನೆಯದು ಲೆಮೂರಿಯಾವು ಹಿಂದೂಮಹಾಸಾಗರದಡಿ ಸೇರಿ, ಆ ಅವಘಡದಿಂದ ಹೇಗೋ ಪಾರಾದದ್ದು ಇಂದಿಗೂ ಕಾಣುವ ಚಿಕ್ಕಪುಟ್ಟ ದ್ವೀಪಗಳು ಮತ್ತು ಮಡಗಾಸ್ಕರ್-ಆಸ್ಟ್ರೇಲಿಯಾದಂತಹ ಬೃಹತ್ ಭೂ ತುಣುಕುಗಳು, ಎಂದು ವಾದಿಸಿತು.

ಪ್ಯಾಸಿಫಿಕ್-ಅಟ್ಲಾಂಟಿಸ್ ವಾರಸುದಾರರು : ಗ್ರೀಕ್ ತತ್ವಜ್ಞಾನಿ ಪ್ಲೇಟೋ ಎರಡು ಪ್ರಬಂಧ ('ಡಯಲಾಗ್ಸ್-ಟಿಮೂಸ್' ಮತ್ತು 'ಕ್ರಿಟಿಯಾಸ್')ಗಳಲ್ಲಿ, ಜಿಬ್ರಾಲ್ಟರ್‌ನಿಂದಾಚೆ ಇದ್ದ ಅಟ್ಲಾಂಟಿಸ್ ಮಹಾದ್ವೀಪವನ್ನು ಪ್ರಸ್ತಾಪಿಸುತ್ತಾ ಅದು ಏಸ್ಯಿಯಾ ಮೈನರ್ ಮತ್ತು ಲಿಬಿಯಾ ಒಟ್ಟು ಕೂಡಿದರೆಷ್ಟಾಗುವುದೋ ಅಷ್ಟು ದೊಡ್ಡ ಭೂಖಂಡವಾಗಿತ್ತು; ಬಹುಕಾಲ ಉಚ್ಛ್ರಾಯ ಸಂಸ್ಕೃತಿಯನ್ನು ಅನುಭವಿಸಿದ ನಂತರ ಇದು ಸ್ಫೋಟಕ್ಕೊಳಗಾಗಿ ಒಂದು ಕಾಲದಲ್ಲಿ ಕಡಲಡಿ ಸೇರಿತು ಎಂದು ಪ್ರತಿಪಾದಿಸಿದ್ದನು.[೪] ಇವನಿಗಿಂತ ಮೊದಲು, ಅಂದರೆ ಸು.ಕ್ರಿ.ಪೂ. ೧೫೦೦ರಲ್ಲಿ, ಈಜಿಪ್ಟಿನ ಮೂಲಗಳೂ ಥೇರಾ ದ್ವೀಪದಲ್ಲಿ ಸಂಭವಿಸಿದ ಜ್ವಾಲಾಮುಖಿಯು ಕ್ರೀಟ್ ನಾಗರಿಕತೆಯನ್ನು ಸಾಗರಪಾಲು ಮಾಡಿದ್ದನ್ನು ತಿಳಿಸಿದ್ದವು.[೫] ಇವು –ಪ್ರಮುಖವಾಗಿ ಪ್ಲೇಟೋನ ಸಿದ್ಧಾಂತವು– ಮಧ್ಯಕಾಲೀನ ಯುರೋಪಿಯನ್ನರ ಹೃದಯದಾಳಕ್ಕಿಳಿದವು ಮಾತ್ರವಲ್ಲ, 'ರಿನಯಜ್ಞಾ'ನಂತರ ಅವರನ್ನು ಅಮೆರಿಕಾ, ಸ್ಕ್ಯಾಂಡಿನೇವಿಯಾ ಮತ್ತು ಕನರೀ ದ್ವೀಪ ಪರಿಸರದಲ್ಲಿಯ ಸಾಗರ ಶೋಧ ಕೈಕೊಳ್ಳಲು ಪ್ರಚೋದಿಸಿದ್ದವು. ಈ ಸಿದ್ಧಾಂತಕ್ಕೆ ಸ್ಪಷ್ಟ ಚಾಲನೆ ಕೊಟ್ಟವರಲ್ಲಿ ಮೊದಲಿಗನು ಇಗ್ನೇಷಿಯಸ್ ಡೊನ್ನೆಲ್ಲಿ.[೬] ೧೮೮೨ರಲ್ಲಿ ಇವನು

ಮಂಡಿಸಿದ ಪ್ರಮುಖ ವಿಷಯಗಳೆಂದರೆ : (೧) ಕಡಲಡಿ ಸೇರಿದ ಭೂಖಂಡವು ಲೆಮೂರಿಯಾ ಅಲ್ಲ, ಅಟ್ಲಾಂಟಿಸ್; (೨) ಈ ಭೂಖಂಡವನ್ನು ಕಬಳಿಸಿದ್ದು ಹಿಂದೂಮಹಾಸಾಗರವಲ್ಲ, ಪ್ಯಾಸಿಫಿಕ್.

೧೮೮೨ರಲ್ಲಿ ಪ್ರಾರಂಭಗೊಂಡ ಪ್ಯಾಸಿಫಿಕ್ ಪರ ವಾದವು ೧೯೩೦ ವರೆಗೂ ಮುಂದುವರಿಯಿತು. ಆದರೆ ಅದರ ಪ್ರತಿಪಾದಕರಲ್ಲಿ ವಿಜ್ಞಾನಿಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿದ್ದವರು ಅತೀಂದ್ರಿಯ ಸಿದ್ಧಾಂತಿಗಳಾದ ತಿಯಾಸಾಫಿಸ್ಟರು ಮತ್ತು ಇವರ ವಾದವನ್ನೂ ಭಾಗಶಃ ಮಾತ್ರ ಒಪ್ಪಿದ ಕೆಲವು ಸ್ವತಂತ್ರವಾದಿಗಳು. ಈ ವಾದಕ್ಕೆ ಜೀವ ತುಂಬಿದ ಆರಂಭಕಾಲದ ತಿಯಾಸಾಫಿಸ್ಟರಲ್ಲಿ ಹೆಲೆನ್ ಬ್ಲಾವಟಸ್ಕಿಗೆ ಅಗ್ರಸ್ಥಾನವಿದೆ; ಇವಳನ್ನು ಹಿಂಬಾಲಿಸಿ ಬಂದ ಹೆಸರಾಂತರಲ್ಲಿ ಅನ್ನಿಬೆಸೆಂಟ್, ಲೆಡ್‌ಬೀಟರ್, ಸ್ಕಾಟ್ ಇಲಿಯಟ್ ಮುಂತಾದವರು ಪ್ರಮುಖರು.[೭] ಇವರ ವಾದದ ತಿರುಳು ಹೀಗಿದೆ :

(ಅ) 'ಈಡನ್ ತೋಟ'ವೆಂಬುದು ಒಂದು ಭ್ರಮಿತ ಲೋಕವಲ್ಲ, ಅದು 'ಮೆಸೊಜೋಯಿಕ್' ಯುಗದಲ್ಲಿ ಲೆಮೂರಿಯಾ-ಅಟ್ಲಾಂಟಿಸ್ ಭೂಖಂಡದ ಅಂಗವಾಗಿತ್ತು, ಈ ಭೂಖಂಡವು 'ಪೆರಿಯನ್' ಯುಗಾಂತ್ಯದ ವರೆಗೂ ವಿಜೃಂಭಿಸಿ 'ಯೋಸೀನ್' ಯುಗದಲ್ಲಿ ನಶಿಸಿತು.

(ಆ) ಈ ಯುಗದಲ್ಲಿ ೧೨-೧೫ ಅಡಿಗಳೆತ್ತರದ, ಉನ್ನತ ಹಿಮ್ಮಡದ, ಕಪ್ಪುವರ್ಣದ, ಮೂರು ಕಣ್ಣುಗಳ, ಜೋಲು ತೊಗಲಿನ (ಇಂದಿನ ರ್ರಿನೋಜರಸ್ ಪ್ರಾಣಿಯಂತಹ) ಆದರೆ ಪರಿಪೂರ್ಣ ದೇಹವನ್ನು ಪಡೆದಿದ್ದ ಮಾನವನು, ಪಾದವೂರಿ ನಿಂತು, ನಡೆಯಬಲ್ಲವನಾಗಿದ್ದನು. ಅವನ ಭೀಮಾಕಾರದ ವ್ಯಕ್ತಿತ್ವ ಮತ್ತು ಅಪಾರ ಶಕ್ತಿ ವಿಶಿಷ್ಟ ತರದ್ದಾಗಿದ್ದವು.

(ಇ) ಈ ಭೂಖಂಡವು ಮಹಾಸುನಾಮಿಯ ಅವಘಡಕ್ಕೀಡಾಗಿ ಕಡಲಡಿ ಸೇರಿತಾದರೂ ಅಂದಿನವರಲ್ಲಿ ಕೆಲವರು ಹೇಗೋ ಉಳಿದು ಅಟ್ಲಾಂಟಿಕ್ ಸೇರಿದರು. ಸುಮಾರು ಇನ್ನೂರು ದಶಲಕ್ಷ ಕಾಲ ಅಸ್ತಿತ್ವದಲ್ಲಿದ್ದ ಈ ಭೂಖಂಡದಲ್ಲಿಯೇ ಮಾನವ ತಳಿ ವಿಕಾಸಗೊಂಡಿತು. ಆರಂಭ ಕಾಲದ ಈ ಮಾನವ ತಳಿಯನ್ನು 'ಶಾಲ್ಮಲೀ' ಎಂಬ ಪದದಿಂದ ಗುರುತಿಸಲಾಗಿತ್ತು.

(ಈ) ಡಾರ್ವಿನ್ ಪ್ರತಿಪಾದಿಸಿದಂತೆ ಕಪಿಯಿಂದ ಮಾನವನು ವಿಕಾಸ ಹೊಂದಲಿಲ್ಲ. ದೇವಾಂಶ ಸಂಭೂತನಾದ ಮಾನವನು ವಿಕಾಸಗೊಂಡ ಬಹುಕಾಲದ ನಂತರವೇ ಕಪಿತಳಿ ಫಲಿಸಿತು. ಬುದ್ಧಿ ಭ್ರಮಿತ ಮಾನವ ಸಮುದಾಯವೊಂದು ಪ್ರಾಣಿಕುಲದೊಡನೆ ಲೈಂಗಿಕ ಸಂಬಂಧ ಹೊಂದಿದುದರ ಪರಿಣಾಮವಾಗಿ ಈ ಪ್ರಮಾದ ಸಂಭವಿಸಿತು.

(ಉ) ಲೆಮೂರಿಯಾ ಮಾನವನು ದಟ್ಟಕಪ್ಪುವರ್ಣದವನಾಗಿದ್ದನು. ಅವನ ವಂಶೀಯರಿನ್ನೂ ಉಳಿದುಕೊಂಡು ಬಂದಿದ್ದು, ಅವರಲ್ಲಿ ಕೆಲವರನ್ನು ಇಂದಿನ ಆಸ್ಟ್ರೇಲಿಯಾದ ಮೂಲ ನಿವಾಸಿಗಳಲ್ಲಿ, ತಾಸ್ಮಾನಿಯಾ, ಮಲಯ, ಪಾಪುಯಾ, ಹೊಟೆಂಟೋ ಮತ್ತು ದಕ್ಷಿಣ ಭಾರತದ ದ್ರಾವಿಡರಲ್ಲಿ ಗುರುತಿಸಬಹುದು.

(ಊ) ಈ ಅವಘಡವಿನ್ನೂ ಮುಕ್ತಾಯಗೊಂಡಿಲ್ಲ. ಏಕೆಂದರೆ ೨೮ನೆಯ ಶತಮಾನದಲ್ಲಿ ಮತ್ತೊಂದು ಮಹಾದುರ್ಘಟನೆಯು ಸಂಭವಿಸಲಿದ್ದು ಅದರಲ್ಲಿ ಇಂದಿನ ಅಮೆರಿಕಾ ಖಂಡವು ಜ್ವಾಲಾಮುಖಿಯ ಮಹಾಸ್ಫೋಟದಲ್ಲಿ ನಾಶಗೊಳ್ಳುವುದು. ಆಗ ಮತ್ತೊಂದು ಭೂಖಂಡವು ನಿರ್ಮಾಣಗೊಂಡು ಈಗ ಸುಪ್ತಾವಸ್ಥೆಯಲ್ಲಿರುವ ಲೆಮೂರಿಯಾ ಮತ್ತೊಮ್ಮೆ ಚೇತನ ಪಡೆದುಕೊಳ್ಳುವುದು.[೮]

ಇವರು ಆ ಭೂಖಂಡಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ತಮ್ಮ ಅತೀಂದ್ರಿಯ ಮತ್ತು ಮನಃಸಂಪರ್ಕ ತಂತ್ರದಿಂದ ಪಡೆದುಕೊಂಡು, ವಿಜ್ಞಾನಿಗಳಿಗೂ ಇತಿಹಾಸಕಾರರಿಗೂ ನಿಲುಕದಂತಹ ಮಾಹಿತಿಯನ್ನು ಪಡೆದುಕೊಂಡದ್ದಾಗಿ ಘೋಷಿಸಿಕೊಂಡರು. ಈ ಸಾಹಿತ್ಯವನ್ನು ಅವರು 'ಸ್ಟ್ಯಾಂಜಾಸ್ ಆಫ್ ಡ್ಯಾನ್' (ಬ್ಲಾವಟಸ್ಕಿ), 'ಅಕಾಷಿಕ್ ರೆಕಾರ್ಡ್ಸ್' (ಸ್ಟೀನರ್), 'ನಾಕಲ ಟ್ಯಾಬ್ಲೆಟ್'(ಚರ್ಚ್‌ವಾರ್ಡ್). 'ಲೆಮೂರಿಯಾ ಸ್ಕ್ರಾಲ್'('ಶಿವಾಯ ಸುಬ್ರಮಣಿಸ್ವಾಮಿ')' ಎಂಬ ಹೆಸರುಗಳಿಂದ ಕರೆದರು.[೮] ಇವನ್ನು ಎಲ್ಲಿ ಮತ್ತು ಹೇಗೆ ಶೋಧಿಸಿದರೆಂಬುದರ ಬಗ್ಗೆಯೂ ಅವರು ಸ್ವಾರಸ್ಯಕರವಾದ ವಿವರಗಳನ್ನು ಕೊಟ್ಟಿರುವರು. ಒಬ್ಬನು ಇವನ್ನು ಬರ್ಮಾದ ದೇವಾಲಯವೊಂದರಲ್ಲಿ ಕಂಡದ್ದಾಗಿ ಹೇಳಿಕೊಂಡರೆ, ಇನ್ನು ಕೆಲವರು ಏಸ್ಯಿಯಾ ಮೈನರ್, ಟಿಬೆಟ್, ಹವಾಯಿ ದ್ವೀಪಗಳಲ್ಲಿಯ ರಹಸ್ಯ ಸ್ಥಳಗಳಲ್ಲಿ ಅವನ್ನು ಕಂಡದ್ದಾಗಿ ಹೇಳಿಕೊಂಡರು. ಈ ರಹಸ್ಯ ಸ್ಥಾನವನ್ನು ಲೆಮೂರಿಯಾದ ವಂಶಸ್ಥನಾದ 'ಫೈಲೋಸ್' ಎಂಬ ಟಿಬೆಟ್ ನಿವಾಸಿಯು ತನಗೆ ತಿಳಿಸಿದನೆಂದು ಎ ಡ್ವೆಲ್ಲರ್ ಆನ್ ದಿ ಟು ಪ್ಲ್ಯಾನೆಟ್ಸ್‌ದ ಕರ್ತೃವಾದ ಅಲಿವರ್ ೧೮೯೪ರಲ್ಲಿ ಹೇಳಿಕೆಯನ್ನಿತ್ತನು ಮಾತ್ರವಲ್ಲ, ಈ 'ಫೈಲೋಸ್' ಎಂಬ ಲೆಮೂರಿಯಾ ನಿವಾಸಿಯು ಜಲಾಂತರ್ಗತವಾದ ಭೂಖಂಡವನ್ನು ಬಿಟ್ಟು 'ಅಟ್ಲಾಂಟಿಸ್' ಸೇರಿ, ಅಲ್ಲಿಂದ ಕ್ಯಾಲಿಫೋರ್ನಿಯಾದ 'ಷಸ್ತಾ' ಬೆಟ್ಟ ತಲುಪಿ, ಈಗ ಆ ಗಿರಿಗರ್ಭದಲ್ಲಿ ನೆಲಸಿರುವುದಾಗಿ ಘೋಷಿಸಿದನು. ಇನ್ನೊಬ್ಬ ಅತೀಂದ್ರಿಯ ವಿಜ್ಞಾನಿಯಾದ ಜೆ. ಜಡ್. ನೈಟ್ ಎಂಬ ವಾಷಿಂಗ್ಟನ್ ನಿವಾಸಿಯು ಅದನ್ನು 'ರಮ್ತಾ' (ಭಾರತೀಯರ ಮಹಾಕಾವ್ಯ ಪುರುಷನಾದ ರಾಮ?) ಎಂಬವನಿಂದ ತಿಳಿದುಕೊಂಡದ್ದಾಗಿ ಸಾರಿಕೊಂಡರು. ಕಾಸ್ಮಿಕ್ ಪರದೆಯ ಮೇಲೆ ಕಾಣಸುತ್ತಿದ್ದುದನ್ನು ಸ್ವತಃ ಅಭ್ಯಸಿಸಿ ತಿಳಿದುಕೊಂಡದ್ದಾಗಿ ಗೈಲಾರ್ಡ್ ಎಂಬವನು ಸ್ಪಷ್ಟಪಡಿಸಿದನು. 'ಲೆಮೂರಿಯಾ-ಅಟ್ಲಾಂಟಿಸ್' ಎಂಬ ಚಕ್ರವನ್ನೇರಿ, ಆ ರಹಸ್ಯ ಪ್ರದೇಶಕ್ಕೆ ಪಯಣಿಸಿ, ಅಲ್ಲಿ ಅದನ್ನು ಕಂಡದ್ದಾಗಿ ಡೇವಿಡ್ ಯುಂಗ್ಲಾಸ್ ಹೇಳಿಕೊಂಡನು. 'ಗುರುದೇವ ಶಿವಾಯ ಸುಬ್ರಮಣಿಸ್ವಾಮಿ' ಎಂದು ಹೆಸರಿಟ್ಟುಕೊಂಡ ಅಮೆರಿಕಾ ದೇಶದ ಹವಾಯಿ ದ್ವೀಪನಿವಾಸಿಯೊಬ್ಬನು, ಈ ಸಾಹಿತ್ಯವು ಮೂಲದಲ್ಲಿ ಸಿದ್ಧಗೊಂಡದ್ದು ಲೆಮೂರಿಯಾದ ಒಂದು ಮಠ(ಮೊನಾಸ್ಟರಿ)ದಲ್ಲಿ; ಸುರುಳಿ-ದಾಖಲೆ(ಸ್ಕ್ರಾಲ್ಸ್)ಯನ್ನು ತನ್ನ ಅತೀಂದ್ರಿಯ ಜ್ಞಾನದಿಂದ ತಾನು ಅರಿತುಕೊಂಡದ್ದಾಗಿ ಆತನು ಇತ್ತೀಚೆಗೆ –ಅಂದರೆ ೧೯೯೮ರಲ್ಲಿ– ಹೇಳಿಕೆಯನ್ನಿತ್ತಿರುವನು. ತಾವು ಸಂಪಾದಿಸಿಕೊಂಡ ಜ್ಞಾನವನ್ನು ಪ್ರಚಾರಪಡಿಸಲು ಇವರಲ್ಲಿ ಕೆಲವರು ಸಂಘ-ಸಂಸ್ಥೆಗಳನ್ನೂ ಕಟ್ಟಿಕೊಂಡರು. ಅವುಗಳಲ್ಲಿ ಮ್ಯಾಕ್ಸ್ ಹ್ಯಾಂಡೆಲ್ಸ್ ಸ್ಥಾಪಿಸಿದ 'ರೋಜಿ ಕ್ರೂಶಿಯನ್ ಫೆಲೋಷಿಪ್' ಅಥವಾ 'ಏನ್ಸಿಯಂಟ್ ಅಂಡ್ ಮಿಸ್ಟಿಕಲ್ ಆರ್ಡರ್ ಆಫ್ ದಿ ರೋಜಿ ಕ್ರೂಶಿಯನ್'(೧೯೦೭), ಅಲಿಸ್ ಬೈಲೀಯ 'ಆರ್ಕೇನ್ ಸೊಸೈಟಿ'(೧೯೨೩), ಗೈ ಬಲ್ಲಾರ್ಡ್‌ನ 'ಮೈಟೀ ಐಯಾಮ್'(೧೯೩೧), ಶ್ರೀಮತಿ ಜೆ. ಜಡ್. ನೈಟ್‌ಳ 'ರಮ್ತಾ'(೧೯೭೮)ಗಳಲ್ಲದೆ ಸಿದ್ಧಯೋಗಿ ಗುರುದೇವ ಶಿವಾಯ ಸುಬ್ರಮಣಿಸ್ವಾಮಿಯ 'ಕಮ್ ಟು ಲೆಮೂರಿಯಾ' ಎಂಬ ಸಂಸ್ಥೆಯು ಇಂದಿಗೂ ವೆಬ್‌ಸೈಟ್‌ನಲ್ಲಿ ಪ್ರಚಲಿತವಿದೆ.[೧೧]

ಪ್ಯಾಸಿಫಿಕ್-ಅಟ್ಲಾಂಟಿಸ್ ವಾದಿಗಳು ಲೆಮೂರಿಯಾ ಮತ್ತು ಅಟ್ಲಾಂಟಿಸ್ ಕಡಲುಪಾಲಾದ ನಂತರ ಅಂದಿನ ನಿವಾಸಿಗಳಲ್ಲಿ ಕೆಲವರು ಹೇಗೋ ಬದುಕಿಕೊಂಡು ಇಂದಿನ ಕ್ಯಾಲಿಫೋರ್ನಿಯಾದಲ್ಲಿಯ 'ಷಸ್ತಾ' ಪರ್ವತ ತಲುಪಿದರು ಎಂದು ಪ್ರತಿಪಾದಿಸಿದರು. ಕಾರಣ, ಕ್ಯಾಲಿಫೋರ್ನಿಯಾವು ಅತ್ಯಂತ ಪುರಾತನವೂ ಪವಿತ್ರವೂ ಆದ ಭೂಖಂಡವಾಗಿದ್ದು, ಅದು ಈಡನ್ ತೋಟವನ್ನು ತನ್ನ ಮಡಿಲಿನಲ್ಲಿ ಅಡಗಿಸಿಟ್ಟುಕೊಂಡಿದೆ, ಎಂದೂ ಅವರು ನಂಬಿದರು. ಅಲ್ಲದೆ, ವಿಜ್ಞಾನಿಗಳು ಭಾವಿಸಿದಂತೆ, ಆದಿಮಾನವರು ಕಪ್ಪುವರ್ಣೀಯರಾಗಿರಲಿಲ್ಲ; ಅವರು ಸುಂದರ ಕೇಶದ ಬಿಳಿಯರಾಗಿದ್ದರು. ಮಾಯಾ ಜನಾಂಗದ ಸಂಪರ್ಕಕ್ಕೆ ಬಂದ ಇವರನ್ನು 'ಮು' ಎಂಬ ಪದದಿಂದ ಅಂದು ಗುರುತಿಸಲಾಗಿತ್ತು ಎಂಬು ವಾದಿಸಿದರು. ಈ ಎಲ್ಲ ವಾದಗಳ ಅರ್ಥವೇನೆಂದರೆ ಕ್ಯಾಲಿಫೋರ್ನಿಯಾ ಕರಾವಳಿಯ 'ಷಸ್ತಾ' ಪರ್ವತವು ಅತ್ಯಂತ ಪುರಾತನವೂ ಪವಿತ್ರವೂ ಆದ ಭೂಭಾಗವೆಂಬುದು.[೧೧]

ಹಿಂದೂಮಹಾಸಾಗರದ ವಾರಸುದಾರರು : ತಿಯಾಸಾಫಿಸ್ಟರಾದ ಬ್ಲವಟಸ್ಕಿ, ಅನ್ನಿಬೆಸೆಂಟ್ ಮುಂತಾದವರು ಚೆನ್ನೈನ ಅಡಿಯಾರ್‌ನಲ್ಲಿ ತಮ್ಮ ಸಂಸ್ಥೆಯನ್ನು ಸ್ಥಾಪಿಸುವುದಕ್ಕಿಂತ ನಾಲ್ಕಾರು ದಶಕಗಳ ಮುಂಚೆ 'ಹಿಂದೂಮಹಾಸಾಗರದಡಿ ಸೇರಿದ್ದ' ಭೂ ಖಂಡದ ಮೇಲೆ ತಮ್ಮ ಹಕ್ಕನ್ನು ತಮಿಳರು ಪ್ರತಿಪಾದಿಸಿಕೊಳ್ಳತೊಡಗಿದ್ದರು. ಇದಕ್ಕೆ ಚಾಲನೆ ಕೊಟ್ಟವರೂ ಪಾಶ್ಚಾತ್ಯ ಪಂಡಿತರು ಮತ್ತು ಕೆಲವು ವಿಜ್ಞಾನಿಗಳು. ಲೆಮೂರಿಯಾ ಸಿದ್ಧಾಂತವು ಹೊರಬಿದ್ದ ಎರಡು ಮೂರು ವರ್ಷಗಳಲ್ಲಿಯೇ (೧೮೭೩ ರಲ್ಲಿ) ಅತ್ಯಂತ ಪುರಾತನ ಯುಗದಲ್ಲಿ ಭಾರತ ಮತ್ತು ಆಫ್ರಿಕಾ ಒಂದೇ ಭೂ ಖಂಡದಲ್ಲಿದ್ದುವನ್ನು 'ಕ್ರೀಟೇಸಿಯಸ್' ಯುಗದಲ್ಲಿ ಸಂಭವಿಸಿದ ಬೃಹತ್ ಸ್ಫೋಟದಿಂದಾಗಿ ಅದು ಒಡೆದು ಬೇರ್ಪಟ್ಟಿದ್ದನ್ನು ಹೆನ್ರಿ ಎಫ್. ಬ್ಲಾನ್‌ಫೋರ್ಡ್ ಹೊರಗೆಡುವಿದ್ದನು. ಜಿಯಲಾಜಿಕಲ್ ಸರ್ವೇ ಆಫ್ ಇಂಡಿಯಾದ ವಿಜ್ಞಾನಿಗಳಾದ ಎಚ್. ವಿ. ಮೆಡ್ಲಿಕಾಟ್ ಮತ್ತು ಡಬ್ಲು. ಟಿ. ಬ್ಲಾನ್‌ಫೋರ್ಡ್ ೧೮೭೫ ರ ಸರ್ವೇಕ್ಷಣದ ಕೈಪಿಡಿ(ಮ್ಯಾನುವಲ್)ಯಲ್ಲಿ ಈ ಸಿದ್ಧಾಂತವನ್ನು ಪ್ರಕಟಿಸಿ, ಅದಕ್ಕೆ ಅಧಿಕೃತ ಮುದ್ರೆಯನ್ನೊತ್ತಿದ್ದರು. ನಂತರ ಇದೇ ಇಲಾಖೆಯ ಪ್ರೊಫೆಸರ್ ಡಿ. ಎ. ವಾಡಿಯಾ ಇದೊಂದು ಅನುಮಾನಕ್ಕೆಡೆಯಿಲ್ಲದ ನಿಖರವಾಗಿ ಇತ್ಯರ್ಥಗೊಂಡ ವಿಷಯವಾಗಿದ್ದು ಅದರ ಹೆಚ್ಚಿನ ಚರ್ಚೆ ಅನಾವಶ್ಯಕವೆಂದು ಘೋಷಿಸಿದ್ದನು. ೧೮೮೫ ರಲ್ಲಿ ಮದ್ರಾಸ್ ಸರಕಾರದ ಸೇವೆಯಲ್ಲಿ ಐಸಿಎಸ್ ಅಧಿಕಾರಿಯಾಗಿದ್ದ ಚಾರ್ಲ್ಸ್ ಡಿ. ಮಕ್ಲಿಯನ್ ಇದನ್ನು ಇನ್ನೂ ಮುಂದುವರಿಸಿ, ದಕ್ಷಿಣ ಭಾರತವೇ ಮಾನವ ಕುಲದ ಆದಿಭೂಮಿ; ದ್ರಾವಿಡರು ಈ ನೆಲದ ಮಕ್ಕಳಾಗಿದ್ದರಲ್ಲದೆ ಬೇರೆಲ್ಲಿಂದಲೋ ವಲಸೆ ಬಂದವರಾಗಿರಲಿಲ್ಲ; ಆದಿಮಾನವರೂ ಮೆಡಿಟರೇನಿಯನ್ ಜನಾಂಗಗಳೂ ಮಾನವ ರಹಿತ ಪ್ರದೇಶಗಳಿಗೆ ವಲಸೆ ಹೋಗುವಾಗ ಈ ಭೂಭಾಗದ ಮೂಲಕವೇ ಸಾಗಿವರೆಂದು ವಾದಿಸಿದನು.[೧೨] ಇಲ್ಲಿಂದ ಆರಂಭಗೊಂಡ ಆದಿ ದ್ರಾವಿಡ ಭೂಮಿಯ ಜಿಜ್ಞಾಸೆಯು ಪ್ರಸಿದ್ಧ ಪಂಡಿತರನ್ನು ಇದರಲ್ಲಿ ತೊಡಗಿಸಿಕೊಳ್ಳುತ್ತಾ ೨೦ನೆಯ ಶತಮಾನದುದ್ದಕ್ಕೂ ಮುಂದುವರಿಯಿತು. ಈ ವಾದದಲ್ಲಿ ಸೇರಿಕೊಂಡ ಪ್ರಮುಖರಲ್ಲಿ ಎಡ್ಗರ್ ಥರ್ಸ್ಟನ್, ಹರ್ಬರ್ಟ್ ರಿಸ್ಲಿ ಮತ್ತು ಇ. ಎಮ್. ಫಾರ್ಸ್ಟರ್ ಗಮನಾರ್ಹರು. ಎ ಪ್ಯಾಸ್ಸೇಜ್ ಟು ಇಂಡಿಯಾ ಕಾದಂಬರಿಯನ್ನು ೧೯೨೪ರಲ್ಲಿ ಪ್ರಕಟಿಸಿ ಭಾರತೀಯರ ಅಪಾರ ಪ್ರೀತ್ಯಾದರವನ್ನು

ಗಳಿಸಿಕೊಂಡ ಫಾರ್ಸ್ಟರ್ ಕೊಟ್ಟ 'ಮರಬಾರ್' ಗುಹೆಗಳ ವರ್ಣನೆಯ ಒಂದು ಭಾಗವು ಸಂಗ್ರಹ ರೂಪದಲ್ಲಿ ಹೀಗೆ ಓದಿಸಿಕೊಳ್ಳುವುದು :

ಗಂಗೆಯಾಗಲೀ ಹಿಮಾಲಯವಾಗಲೀ ಪುರಾತನತೆಯನ್ನೂ ಪಾವಿತ್ರ್ಯತೆಯನ್ನೂ ಪಡೆದು ಕೊಳ್ಳುವುದಕ್ಕಿಂತ ಮುಂಚೆ, ಭೂ ನಿರ್ಮಾಣ ಕಾಲದ ಒಂದು ಹಂತದಲ್ಲಿ, ಈ ಪ್ರದೇಶವೆಲ್ಲವೂ ಜಲಮಯವಾಗಿತ್ತು. ನಂತರ ಹಿಮಾಲಯಗಳೆದ್ದವು. ದೇವತೆಗಳು ಅಲ್ಲಿಗೆ ಬಂದು ನೆಲೆಸಿದರು. ಈ ಪರ್ವತಗಳೇಳುವಾಗ ಸ್ಫೋಟಿಸಿದ ಧೂಳೀಕಣಗಳು ಕ್ರಮೇಣ ಹೆಪ್ಪುಗಟ್ಟುತ್ತಾ ಇಂಡಿಯಾ ಭೂಖಂಡ ನಿರ್ಮಾಣಗೊಂಡಿತು. ವಾಸ್ತವವಾಗಿ ಇದು ಅತ್ಯಂತ ಪುರಾತನವಾದ ಭೂಪ್ರದೇಶ. ಇತಿಹಾಸ ಪೂರ್ವ ಯುಗದಲ್ಲಿ ಇದು ರೂಪಗೊಳ್ಳುತ್ತಿರುವಾಗಲೇ, ಅದರ ದಕ್ಷಿಣದ ಪರ್ಯಾಯದ್ವೀಪ (ಪೆನಿನ್ಸುಲರ್ ಇಂಡಿಯ)ವೂ ಅದರ ಬೃಹತ್ ಪ್ರಮಾಣದ ಬೆಟ್ಟಗಳೂ ನಿರ್ಮಾಣಗೊಂಡವು. ಆಗ, ಒಂದೆಡೆ, ಭಾರತ ಮತ್ತು ಆಫ್ರಿಕೆಯ ನಡುವೆ ಇದ್ದ ಭೂ ಖಂಡವು ಸಾಗರಪಾಲಾಗುವುದನ್ನು ಕಂಡರೆ ಇನ್ನೊಂದೆಡೆ ಸಾಗರದಾಳದಿಂದ ಮೇಲಕ್ಕೇಳುತ್ತಿದ್ದ ಹಿಮಾಲಯಗಳನ್ನು ಕಾಣಲಾಯಿತು. ವಿಶ್ವದಲ್ಲಿ ಕಾಣಸಿಗುವ (ಭೂಪ್ರದೇಶಗಳಲ್ಲಿಯೇ) ಇವು ಅತ್ಯಂತ ಪುರಾತನವಾದವುಗಳು.[೧೩]

ಶಂಗಂ ಸಾಹಿತ್ಯ ಮತ್ತು ಕುಮಾರಿಕ್ಕಂಟವ್ : ದಕ್ಷಿಣ ಭಾರತದಂಚಿನಾಚೆ ವ್ಯಾಪಿಸಿದ್ದ 'ಭೂಖಂಡವು' ಪೂರ್ವೇತಿಹಾಸ ಕಾಲಘಟ್ಟದಲ್ಲಿ ಕಡಲಡಿ ಸೇರಿತೆಂಬುದನ್ನು ವಿಜ್ಞಾನಿಗಳು ಪ್ರಕಟಿಸಿದಾಗ, ಕಡಲುಪಾಲಾದ ಆ ಭೂಮಿಯು ತಮ್ಮದಾಗದೆ ಮತ್ತಿನ್ನಾರದಾಗಿರಲು ಸಾಧ್ಯವೆಂಬ ವಾದವನ್ನು ತಮಿಳರು ಎತ್ತಿದರು. 'ಲೆಮೂರಿಯಾ' ಪದವನ್ನು ಅವರು ಆಗೊಮ್ಮೆ ಈಗೊಮ್ಮೆ ಬಳಸಿದರೂ ಕಾಲಕ್ರಮದಲ್ಲಿ ಅದನ್ನು ತಮಿಳು ಭಾಷಾಕುಲುಮೆಯಲ್ಲಿ ಬಡಿದು ತೆಗೆದು 'ಇಲೆಮೂರಿಯಾಕ್ಕಂಟಮ್' ಎಂದು ಮಾರ್ಪಡಿಸಿಕೊಂಡರು. ತಮಿಳ ಭಾಷಾಭಾವಕ್ಕೆ ಇನ್ನೂ ಹೆಚ್ಚು ಪ್ರಸ್ತುತಗೊಳಿಸಿಕೊಳ್ಳಲು 'ಕುಮಾರಿಕ್ಕಂಟಮ್' ಎಂಬ ದೇಸಿ ಪದವೊಂದನ್ನು ಟಂಕಿಸಿಕೊಂಡರು. ಕಾಕತಾಳೀಯವೆಂಬಂತೆ ಈ ಚರ್ಚೆ ಬಿಸಿಗೊಳ್ಳುತ್ತಿದ್ದ ಕಾಲದಲ್ಲಿಯೇ 'ಶಂಗಂ' ಸಾಹಿತ್ಯನಿಧಿಯೂ ನಕ್ಕೀರರ್ 'ಕಟಲ್ಕೋಳ್' ಪದವೂ ಅವರಿಗೆ ಲಭ್ಯವಾದವು. ಈ ಎಲ್ಲಾ ಕಾರಣಗಳಿಂದಾಗಿ ೧೯ನೆಯ ಶತಮಾನದ ಕೊನೆಯ ವರ್ಷಗಳು ಸಹಜವಾಗಿ ತಮಿಳರಿಗೆ ಸಂಭ್ರಮದ ದಶಕಗಳೆನಿಸಿದವು.[೧೪]

ಮೂರು ಶಂಗಂಗಳು : ೧೯ನೆಯ ಶತಮಾನದ ಕೊನೆಯ ಮೂರು ಮತ್ತು ೨೦ನೆಯ ಶತಮಾನದ ಮೊದಲೊಂದು ದಶಕಗಳಲ್ಲಿ, ಸಿ. ಡಬ್ಲು. ದಾಮೋದರ ಪಿಳ್ಳೈ ಮತ್ತು ಯು. ವಿ. ಸ್ವಾಮಿನಾಥ ಐಯರ್‌ರವರ ಅವಿರತ ಶ್ರಮದ ಫಲವಾಗಿ ಬೆಳಕು ಕಂಡ 'ಶಂಗಂ' ಸಾಹಿತ್ಯದಿಂದ ತಮ್ಮ ಅದ್ಭುತ ಮತ್ತು ಅನಾದಿ ಕಾಲದ ಸಂಪತ್ತನ್ನು ಅರಿತುಕೊಳ್ಳಲು ತಮಿಳರು ಪ್ರಾರಂಭಿಸಿದರು. ಈ ಕಾಲದಲ್ಲಿ ಅವರ ಹೃದಯವನ್ನು ವಿಶೇಷವಾಗಿ ಗೆದ್ದದ್ದು ಮೂರು ಶಂಗಂಗಳ ಇತಿಹಾಸ. ಅದು ಇಂತಿದೆ :

೧. ತನ್ನ ರಾಜಧಾನಿಯಾದ 'ತೆಣ್‌ಮತುರೈ'(ದಕ್ಷಿಣ ಮದುರೈ, ಶ್ರೀಲಂಕೆಯ ಆಚೆಗಿದ್ದ ಭೂಭಾಗದ ಪಟ್ಟಣ)ಯಲ್ಲಿ ಪಾಂಡ್ಯರಾಜನು 'ಮುತರ್ ಶಂಗಂ' ಅಥವಾ ಮೊದಲ ಶಂಗಂ ಸ್ಥಾಪಿಸಿದನು. ಇದು ೪,೪೪೦ ವರ್ಷ ಕಾಲ ಅಸ್ತಿತ್ವದಲ್ಲಿತ್ತು. ಎಂಭತ್ತೊಂಬತ್ತು ಪಾಂಡ್ಯರಾಜರಿಂದ ಪೋಷಿಸಲ್ಪಟ್ಟ ಈ ಶಂಗಂನ ೪,೪೪೯ ಕವಿಗಳಲ್ಲಿ ಏಳು ಜನ

ರಾಜಕವಿಗಳೂ ಅಗಸ್ತ್ಯನೂ ಸೇರಿದ್ದರು. ಬೃಹತ್ ಪ್ರಮಾಣದ 'ಕಟಲ್ಕೋಳ್'ನಲ್ಲಿ ಮದುರೈ ಪಟ್ಟಣವು ನಾಶಗೊಂಡಾಗ ಅದರಲ್ಲಿ 'ಮುತುನಾರೈ', 'ಮುತುಕುರುಕು' ಮತ್ತು 'ಕಳರಿಯಾವಿರೈ' ಮುಂತಾದ ಅಮೂಲ್ಯ ಗ್ರಂಥಗಳನ್ನೊಳಗೊಂಡ ಮೊದಲ ಶಂಗಂ ಸಾಹಿತ್ಯವೆಲ್ಲವೂ ನೀರುಪಾಲಾಯಿತು. ಇಷ್ಟೊಂದು ಪ್ರಮಾಣದ ಸಾಹಿತ್ಯವನ್ನು ಕಳೆದುಕೊಂಡಿದ್ದುದರಿಂದ ಕಂಗೆಟ್ಟಿದ್ದ ೨೦ನೆಯ ಶತಮಾನದ ತಮಿಳರಿಗೆ ೧೯೦೨ನೆಯ ವರ್ಷವು ಒಂದು ರೋಮಾಂಚಕರ ಸುದ್ದಿಯನ್ನು ತಂದಿತು. 'ಶಂಕೋಣಕ್ಕೈಚಲುವು' ಎಂಬ ಒಂದು ಪುಸ್ತಿಕೆಯನ್ನು ಹೊರತಂದ ಒಬ್ಬ ತಮಿಳು ಆರಾಧಕನು ಅದು ಮೊದಲ ಶಂಗಂ ಕಾಲದ ಕೃತಿಯೆಂದೂ ಅದರ ವಸ್ತು ಕಾವೇರಿ-ಪಹಟೊಟು ನದಿ ಮಧ್ಯದ ಫಲವತ್ತಾದ 'ಪೆರುವಳನಾಟ'ನ ಅಧಿಪತಿಯಾದ ಶಂಗೊನ್‌ಪಾಂಟಿಯನ್ ಎಂದೂ ಹೇಳಿಕೊಂಡನು. ಈ ವಾರ್ತೆಯಿಂದ ಕೆಲವು ತಮಿಳರು ಎಷ್ಟೊಂದು ಪುಳಕಿತಗೊಂಡರೆಂದರೆ, ಅವರಾರೂ ಈ ಗ್ರಂಥದ ಪ್ರಾಮಾಣಿಕತೆಯ ಬಗ್ಗೆ ಯೋಚಿಸಲೇ ಇಲ್ಲ. ಮುಂದೆ ಅದೊಂದು ಖೊಟ್ಟಿ ಕೃತಿ ಎಂಬ ಸಂಶಯವು ದಟ್ಟಗೊಂಡಾಗಲೂ ತಮ್ಮ ಅಂತರಾಳಕ್ಕಿಳಿದಿದ್ದ ನಂಬಿಕೆಯನ್ನು ಬದಲಿಸಿಕೊಳ್ಳಲು ಅವರು ಇಷ್ಟಪಡಲಿಲ್ಲ. ಈಗ ಅಪರೂಪವಾಗಿ ಲಭ್ಯವಿರುವ ಈ ಕೃತಿಯ ನೆನಪು ಮಾತ್ರ ಕೆಲವು ಹಳೆಯ ತಲೆಮಾರಿನ ತಮಿಳರಲ್ಲಿ ಇನ್ನೂ ಹಸಿರಾಗಿಯೇ ಉಳಿದಿದೆ.

೨. 'ಇಟೈಚ್ಚಂಗಂ' ಅಥವಾ ಎರಡನೆಯ ಶಂಗಂ ಅಸ್ತಿತ್ವಕ್ಕೆ ಬಂದುದು ಕಪಾಟಪುರಂನಲ್ಲಿ. 'ತೆಣ್‌ಮತುರೈ' ಕಡಲುಪಾಲಾದ ಮೇಲೆ ಇದನ್ನು ಸ್ಥಾಪಿಸಿ ತನ್ನ ರಾಜಧಾನಿಯನ್ನಾಗಿ ಪಾಂಡ್ಯರಾಜನು ಮಾಡಿಕೊಂಡನು. ಅಕತ್ತಿಯರ್, ತೊಲ್ಕಾಪ್ಪಿಯಾಣಾರ್ ಮುಂತಾದ ಪ್ರಸಿದ್ಧ ಪಂಡಿತರನ್ನೊಳಗೊಂಡ ೩,೨೦೦ ಕವಿಗಳ ಎರಡನೆಯ ಶಂಗಂ, ೩,೨೦೦ ವರ್ಷಕಾಲ, ೫೯ ಪಾಂಡ್ಯರಾಜರ ಪೋಷಣೆಯಡಿ ಬೆಳೆದು ಮದುತಿರುಮಾರನ್ ಎಂಬ ಪಾಂಡ್ಯರಾಜನ ಕಾಲದಲ್ಲಿ ಅಂತ್ಯಗೊಂಡಿತು. ಆಗ ಸಂಭವಿಸಿದ ಕಡಲ ವಿಕೋಪದಲ್ಲಿ ರಾಜಧಾನಿ ಪಟ್ಟಣದೊಡನೆ ಅಲ್ಲಿಯ ವರೆಗೂ ಸಿದ್ಧಗೊಂಡಿದ್ದ ತಮಿಳು ಸಾಹಿತ್ಯವೆಲ್ಲವೂ ಕೊಚ್ಚಿಹೋಯಿತು. ಹೀಗೆ ಕಣ್ಮರೆಯಾದ ಸಾಹಿತ್ಯದಲ್ಲಿ 'ಅಕತ್ತಿಯಾರ್ ವ್ಯಾಕರಣ', 'ಮಾಯಾಪುರಾಣಂ', 'ಭೂತಪುರಾಣಂ', 'ಇಶೈನುಣುಕ್ಕಮ್' ಮೊದಲಾದ ಅಪೂರ್ವ ಕೃತಿಗಳು ಸೇರಿದ್ದವೆಂಬುದು ಮಧ್ಯಕಾಲೀನ ವ್ಯಾಖ್ಯಾನಕಾರರ ಅಭಿಮತ.

೩. 'ಕಡೈಶಂಕಂ' ಅಥವಾ ಕೊನೆಯ ಶಂಗಂ ಪಾಂಡ್ಯರಾಜ್ಯದ ಮೂರನೆಯ ರಾಜಧಾನಿಯಾದ ವೈಗೈ ನದೀ ದಡದ ಮೇಲೆ ಬೆಳೆದ ಮದುರೈ ಪಟ್ಟಣದಲ್ಲಿ ಅಸ್ತಿತ್ವಕ್ಕೆ ಬಂತು. ಇದಿಲ್ಲಿ ಸ್ಥಾಪನೆಗೊಳ್ಳುವುದಕ್ಕಿಂತ ಮುಂಚೆ ಕೆಲಕಾಲ 'ಮಣಲೂರಿ'ನಲ್ಲಿ ಕಾರ್ಯ ನಿರ್ವಹಿಸುತ್ತಿತ್ತೆಂದೂ ಆ ನಗರವೂ ಕಡಲಪಾಲಾದುದರಿಂದ ಅದನ್ನು ಮದುರೈಗೆ ವರ್ಗಾಯಿಸಲಾಯಿತೆಂಬ ಅಭಿಮತವೂ ಇದೆ. ೧,೮೫೦ ವರ್ಷಕಾಲ ಅಸ್ತಿತ್ವದಲ್ಲಿದ್ದ ಈ ಶಂಗಂನ ೪೨೩ ಕವಿ-ಕವಯಿತ್ರಿಯರು

ರಚಿಸಿದ ೨,೩೮೧ ಕವನಗಳು ಇಂದಿಗೂ ಉಳಿದುಕೊಂಡಿರುವುದು ಗಮನಾರ್ಹ. ಈ ಶಂಗಂದ ಒಂದು ವೈಶಿಷ್ಟ್ಯವೆಂದರೆ, ಅದು ಪಾಂಡ್ಯರಾಜಧಾನಿಯಾದ ಮದುರೈಗೆ ಮಾತ್ರ ಸೀಮಿತಗೊಳ್ಳದೆ ತಮಿಳುನಾಡು ಮತ್ತು ಅದರ ವಾಯವ್ಯ ಗಡಿಯ ಸ್ವತಂತ್ರ (ಇಂದಿನ ಕನ್ನಡ ಭಾಷಿಕರ) ರಾಜ್ಯಗಳಿಗೂ ಪಸರಿಸಿ, ಚೋಳ, ಚೇರರ ಪೋಷಣೆಯನ್ನೂ, ಅವರ ಸಾಮಂತ ರಾಜರ ಪೋಷಣೆಯನ್ನೂ ಪಡೆದುಕೊಂಡದ್ದು. ಇದರ ಮತ್ತೊಂದು ವಿಶೇಷತೆಯೆಂದರೆ, ಅದರ ಅಂತ್ಯಕ್ಕೆ ಕಡಲು ಕಾರಣವಾಗದೆ ಒಂದು ಪಿಡುಗು ಕಾರಣವಾದದ್ದು. ಹನ್ನೆರಡು ವರ್ಷಕಾಲ ತನ್ನ ರಾಜ್ಯವು ಘೋರ ಕ್ಷಾಮಕ್ಕೊಳಗಾಗುವುದೆಂಬುದನ್ನು ತಿಳಿದ ಪಾಂಡ್ಯರಾಜನು, ತನ್ನ ಆಸ್ಥಾನ ಕವಿಗಳನ್ನು ಕರೆದು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ರಾಜಧಾನಿಯಿಂದ ದೂರ ಹೋಗಬೇಕೆಂದು ತಿಳಿಸಿ, ಮೂರನೆಯ ಶಂಗಂ ಕೇಂದ್ರ ಸಂಘಟನೆಯನ್ನು ವಿಸರ್ಜಿಸಿದನೆಂದು ಒಂದು ಐತಿಹ್ಯ ತಿಳಿಸುವುದು. ಬಹುಶಃ ತಮಿಳಹಂಗೆಲ್ಲಾ ಹಬ್ಬಿದ ಈ ಕ್ಷಾಮದ ಪರಿಣಾಮದಿಂದಾಗಿ ಉಳಿದ ರಾಜ್ಯಗಳಲ್ಲಿದ್ದ ಶಂಗಂ ಕವಿಗಳೂ ಪೋಷಣೆಯನ್ನು ಕಳೆದುಕೊಂಡರೆಂದು ಭಾವಿಸಬಹುದು.

ಮುಶಿರಿ ನೀಲಕಂಟನ್ ಲೇಖನಕ್ಕಿಳಿಸಿದ ಪಾಠದಲ್ಲಿ ಬರುವ ಒಂದು ಸ್ವಾರಸ್ಯಕರವಾದ ವಿಷಯವನ್ನು ಇಲ್ಲಿ ಪ್ರಸ್ತಾಪಿಸುವುದವಶ್ಯ. ಕ್ಷಾಮ ಕಳೆದ ನಂತರ ಪಾಂಡ್ಯರಾಜನ ಆಸ್ಥಾನಕ್ಕೆ ಮರಳಿಬಂದ ಶಂಗಂ ಕವಿಗಳೆಲ್ಲರೂ **'ಪೊರುಳ್'** (ಅಹಂ ಮತ್ತು ಪುರಂ ಕಾವ್ಯ) ಜ್ಞಾನವನ್ನು ಕಳೆದುಕೊಂಡಿದ್ದನ್ನು ತಿಳಿದ ಪಾಂಡ್ಯರಾಜನು ಅತೀವ ದುಃಖಕ್ಕೀಡಾಗುವನು; ಅದನ್ನು ನಿವಾರಿಸಲು ನಲ್ವತ್ತೊಂಬತ್ತು ಕವಿಗಳು ಶ್ರಮಿಸಿದರೂ ಪೊರುಳ್ ಬಗ್ಗೆ ಅವರಲ್ಲಿ ಒಮ್ಮತ ಮೂಡದಿದ್ದುದರಿಂದ, ಕೊನೆಗೆ ಮೂಕಮಗುವಿನ ರೂಪದಲ್ಲಿದ್ದ ಕಾರ್ತಿಕೇಯನ ಮೂಲಕ ನಿಲಕಂಟನ್ ರಚಿಸಿದ ವ್ಯಾಖ್ಯಾನವು ಸರಿಯಾದುದೆಂಬುದನ್ನು ಅರಿತುಕೊಳ್ಳಲಾಗುವುದು.[೧೫]

(ಸಂಕಲನ-೨೩ ರಲ್ಲಿ ಮುಂದುವರಿಯುವುದು)

ಆಕರ ಟಿಪ್ಪಣಿ :

೧. ಸ್ಕ್ಲಾಟರ್, ಪಿ. ಎಲ್., "ದಿ ಮಾಮ್ಮಲ್ಸ್ ಆಫ್ ಮಡಗಾಸ್ಕರ್", ಕ್ವಾರ್ಟರ್ಲೀ ಜರ್ನಲ್ ಆಫ್ ಸೈನ್ಸ್ I-೭, ಪು. ೨೧೩-೧೯, ಎಡುಆರ್ಡ್ ಸುಯಸ್, ದಿ ಫೇಸ್ ಆಫ್ ದಿ ಅರ್ತ್ (ಇಂಗ್ಲಿಷ್ ಭಾಷಾಂತರ, ಎಚ್. ಬಿ. ಪಿ. ಸೊಲ್ಲಸ್ (ಒಯುಪಿ, ೧೯೦೪), ಹೆಕಲ್, ಎ., ಹಿಸ್ಟರಿ ಆಫ್ ಕ್ರಿಯೇಷನ್... (ನ್ಯೂಯಾರ್ಕ್, ೧೮೭೬). ಈ ಗ್ರಂಥಗಳಲ್ಲಿ ಸುದೀರ್ಘವಾಗಿ ಚರ್ಚಿಸಲಾದ ಸಿದ್ಧಾಂತಗಳ ಸಂಗ್ರಹಕ್ಕೆ ನೋ. ರಾಮಸ್ವಾಮಿ, ಸು., ಫ್ಯಾಬುಲೆಸ್ ಜಿಯೋಗ್ರಫೀಸ್ ಕೆಟಾಸ್ಟ್ರೋಫಿಕ್ ಹಿಸ್ಟರೀಸ್ : ದಿ ಲಾಸ್ಟ್ ಲ್ಯಾಂಡ್ ಆಫ್ ಲೆಮೂರಿಯಾ (ದೆಹಲಿ, ೨೦೦೪), ಪು. ೨೧-೫೨, ೨೫೨ ಅ.ಟಿ. ೫೧-೫೩. ಇತ್ತೀಚೆಗೆ ಪ್ರಕಟಗೊಂಡ ಸುಮತಿ ರಾಮಸ್ವಾಮಿಯ ಈ ಗ್ರಂಥವು ಹೆಚ್ಚು ಮಾಹಿತಿಯನ್ನು ಒದಗಿಸಿ ಈ ಲೇಖನದ ಒಂದು ಭಾಗವನ್ನು ರೂಪಿಸಿದೆ. ಇದಲ್ಲದೆ, ಎನ್‌ಸೈಕ್ಲೋಪಿಡಿಯಾ ಬ್ರಿಟನ್ನಿಕಾ ಸಂಪುಟಗಳನ್ನೂ ನಾನಿಲ್ಲಿ ಧಾರಾಳವಾಗಿ ಬಳಸಿಕೊಂಡಿರುವೆ. ಆಕರಗ್ರಂಥಗಳಲ್ಲಿ ಬರುವ ಉಲ್ಲೇಖಗಳನ್ನು ಆದಷ್ಟು ಮೂಲ ಪಾಠಗಳೊಂದಿಗೆ ಹೋಲಿಸಿನೋಡಲು ಪ್ರಯತ್ನಿಸಿರುವೆ. ಎಲ್ಲಿ ಅದು ಸಾಧ್ಯವಾಗದಾಯಿತೋ ಅಲ್ಲಿ, ಆ ಮುಂಚೆ ಅಧ್ಯಯನ ಮಾಡಿದವರ ಲೇಖನಗಳಿಂದ ಅವನ್ನು ಆಯ್ದುಕೊಂಡು, ಪುನಃಪ್ರಸ್ತಾಪ ಮಾಡಿರುವುದನ್ನು ಸೂಚಿಸಿರುವೆ.

೨. ವ್ಯಾಲ್ಲೇಸ್, ಎ. ಆರ್., 'ಆನ್ ದಿ ಜೂಆಲಾಜಿಕಲ್ ಜಿಯೋಗ್ರಫಿ ಆಫ್ ದಿ ಮಲಯ ಆರ್ಕಿಪೆಲೆಗೋ' ಜರ್ನಲ್ ಆಫ್ ದಿ ಪ್ರೊಸೀಡಿಂಗ್ಸ್ ಆಫ್ ದಿ ಲಿನ್ನೆಯಿನ್ ಸೊಸೈಟಿ ಆಫ್ ಲಂಡನ್, (ಜೂಆಲಜಿ), ೧೮೬೦. ೪ :

ಪು. ೧೭೨-೭೪; ದಿ ಜಿಯೋಗ್ರಫಿಕಲ್ ಡಿಸ್ಟ್ರಿಬ್ಯೂಷನ್ ಆಫ್ ಅನಿಮಲ್ಸ್, ಸಂ. ೧-೨ (ಲಂಡನ್, ೧೮೭೬); "ಕಂಪ್ಯಾರೇಟಿವ್ ಅಂಟಿಕ್ವಿಟಿ ಆಫ್ ಕಾಂಟಿನೆಂಟ್ಸ್...", ಪ್ರೊಸೀಡಿಂಗ್ಸ್ ಆಫ್ ದಿ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿ, ೨೧, ಸಂ. ೬, ಪು. ೫೦೫-೩೫ ಮುಂ. ಹೋಲಿಸಿ ನೋ. ರಾಮಸ್ವಾಮಿ, ಆದೇ ಪು. ೨೨, ೩೩, ೪೮, ೫೧, ೫೭, ೨೪೦-೨೪೬ ಮುಂ. ಅಲ್ಲದೆ ನೋ. ವೆಜೆನರ್, ಎ. ಎಲ್., ದಿ ಓರಿಜನ್ಸ್ ಆಫ್ ಕಾಂಟಿನೆಂಟ್ಸ್ ಅಂಡ್ ಓಷನ್ಸ್ (ಇಂಗ್ಲಿಷ್ ಅನು. ಸ್ಕೆರ್ಲ್, ಜೆ. ಜಿ. ಎ., (ನ್ಯೂಯಾರ್ಕ್, ೧೯೨೪, ೩ನೆಯ ಪ್ರ. ಮು.).

೩. ಹೆಸರಾಂತ ಸಂಸ್ಥೆಗಳೂ ಪ್ರಸಿದ್ಧ ತಜ್ಞರೂ ಇದರಲ್ಲಿ ಪಾಲ್ಗೊಂಡಿರುವುದರಿಂದ ಅವರು ಮಾಡಿದ ನಿರ್ಣಯಗಳ ಮಹತ್ವವನ್ನು ಅರಿತುಕೊಳ್ಳಬಹುದಾಗಿದೆ. ಕೇಂಬ್ರಿಜ್‌ನ ಜೀವಶಾಸ್ತ್ರಜ್ಞ ಸ್ಟ್ಯಾನ್ಲಿ ಗಾರ್ಡಿನರ್ ಇದರಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದ; ಲಂಡನ್ನಿನ ಟೈಮ್ಸ್ ದಿನಪತ್ರಿಕೆಯು ಈ ಚರ್ಚೆಗೆ ವೇದಿಕೆಯನ್ನು ಒದಗಿಸಿಕೊಟ್ಟಿತು; ಮಾರಿಷಿಯಸ್ ರಾಜ್ಯಪಾಲನಾಗಿದ್ದ ಸರ್ ಓಲರಿ ಬ್ಲಡ್ ಈ ಬಗ್ಗೆ ಕೊಟ್ಟ ಹೇಳಿಕೆಯನ್ನು ೧೯೫೭ರ ಜಿಯೋಗ್ರಾಫಿಕಲ್ ಮ್ಯಾಗಜೀನ್ ಪ್ರಕಟಿಸಿತು; ಲಿಮೂರಿಯಾ : ದಿ ಲೆಸ್ಸರ್ ಡಿಪೆಂಡೆನ್ಸೀಸ್ ಆಫ್ ಮಾರಿಷಿಯಸ್, ಎಂಬ ಗ್ರಂಥವನ್ನು ಆಕ್ಸ್‌ಫರ್ಡ್ ಯು.ಪ್ರೆ. ಪ್ರಕಟಿಸಿತು; ಪೀಕ್ಸ್ ಆಫ್ ಲಿಮೂರಿಯಾ : ದಿ ಸ್ಟೋರಿ ಆಫ್ ಡಿಯೇಗೋ ಗ್ರಾಸಿಯಾ ಎಂಬ ಗ್ರಂಥವನ್ನು ಬ್ರಿಟಿಷ್-ಇಂಡಿಯನ್ ಓಸಿಯಾನಾ ಟೆರ್ರಿಟೋರಿಯಾ ಕಮಿಷನರ್ ಆದ ರಿಚರ್ಡ್ ಆಡ್ಲಿಸ್ ಹೊರತಂದನು.

೪. ದಿ ಎನ್‌ಸೈಕ್ಲೋಪಯಿಡಿಯಾ ಬ್ರಿಟನ್ನಿಕಾ (ಚಿಕಾಗೋ, ೧೯೯೨ : ಹದಿನೈದನೆಯ ಪರಿಷ್ಕೃತ ಪ್ರಕಟನೆ) ಸಂ. ೧, ಪು. ೬೨೩-೭೪

೫. ಅಟ್ಲಾಂಟಿಸ್ ಮಹಾದ್ವೀಪವು ಏಸಿಯಾಮೈನರ್ ಮತ್ತು ಲಿಬಿಯ ಒಟ್ಟುಗೂಡಿದರೆ ಎಷ್ಟು ವಿಶಾಲವಾಗುವುದೋ ಅಷ್ಟು ವಿಶಾಲವಾಗಿತ್ತೆಂಬುದನ್ನು ಈಜಿಪ್ಟಿನ ಪುರೋಹಿತನೊಬ್ಬನು ಕಾನೂನು ನಿರ್ಮಾತೃವಾದ ಸೋಲೋಮನ್‌ಗೆ ತಿಳಿಸಿದನೆಂದ ಪ್ಲೇಟೋ ಹೇಳಿರುವನು. ನೋ. ಅದೇ. ಪು. ೬೭೪

೬. ಡೊನೆಲ್ಲಿ, ಇಗ್ನೇಷಿಯಸ್, ಅಟ್ಲಾಂಟಿಸ್ : ದಿ ಆಂಟಿಡೈಲೂವಿಯನ್ ವರ್ಲ್ಡ್, (ನ್ಯೂಯಾರ್ಕ್, ೧೮೮೨).

೭. ಸ್ಕಾಟ್, ಇಲಿಯಟ್, ದಿ ಲಾಸ್ಟ್ ಲೆಮೂರಿಯಾ (ಲಂಡನ್, ೧೯೦೪) ಮತ್ತು ದಿ ಸ್ಟೋರಿ ಆಫ್ ಅಟ್ಲಾಂಟಿಸ್ ಅಂಡ್ ದಿ ಲಾಸ್ಟ್ ಲೆಮೂರಿಯಾ (ಲಂಡನ್, ೧೯೫೪, ಪು. ಮು.); ಬ್ಲವಟಸ್ಕಿ, ಎಚ್. ಪಿ., "ದಿ ಲ್ಯಾಂಡ್ ಆಫ್ ಮಿಸ್ಟರಿ", ದಿ ತಿಯೋಸಾಫಿಸ್ಟ್ ೧, (೧೯೨೮, ಆಗಸ್ಟ್) ಪು. ೧೪೯-೭೩, ೨೨೪-೭, ೨೭೭-೭೯; ಲೆಡ್‌ಬೀಟರ್, ಡಿ. ಎಮ್., ದಿ ಬಿಗಿನ್ನಿಂಗ್ ಆಫ್ ದಿ ಸಿಕ್ಸ್ ರೂಟ್‌ರೇಸ್, (ಮದ್ರಾಸು, ೧೯೩೧, ಪು. ಮು.) ಮತ್ತು ದಿ ಹಿಡನ್ ಸೈಡ್ ಆಫ್ ತಿಂಗ್ಸ್ (ಮದ್ರಾಸು, ೧೯೩೧, ಪು. ಮು.) ಅಲ್ಲದೆ ನೋ. ರಾಮಸ್ವಾಮಿ, ಅದೇ., ಪು. ೨೧ ರಿಂದ.

೮. ರಾಮಸ್ವಾಮಿ, ಅದೇ., ಪು. ೬೩

೯. ಅದೇ., ಪು. ೮೫ ರಿಂದ. ವಿಶೇಷವಾಗಿ ನೋ. ಪು. ೮೭, ೯೧, ೯೬, ೨೯೨, ಅ. ಟಿ. ೧೧೮

೧೦. ಅದೇ., 'ರೋಜಿ ಕ್ರೂಶಿಯನ್' (ಪು. ೬೯, ೨೫೫ ಅ. ಟಿ. ೪೯), 'ಆರ್ಕೈನ್' (ಪು. ೭೦), 'ಮೈಟಿ ಐ ಯಾಮ್' (ಪು. ೭೭, ೮೯, ೨೪೯ ಅ. ಟಿ. ೧೩೫), ರಮ್ತಾ (ಪು. ೮೮, ೯೫), 'ಕಮ್ ಟು ಲೆಮೂರಿಯಾ' (ಪು. ೮೭, ೮೮, ೨೬೨ ಅ. ಟಿ. ೧೮೮)

೧೧. ಅದೇ., ಪು. ೭೯. ಅಲ್ಲದೆ ನೋ. ೭೫-೭೭, ೮೪, ೯೧, ೧೮೫-೧೮೬, ೨೫೭-೮ ಅ. ಟಿ. ೧೨೪, ೨೬೦ ಅ. ಟಿ. ೧೫೩

೧೨. ಬ್ಲಾನ್ ಫೋರ್ಡ್, ಎಚ್. ಎಸ್., ದಿ ರೂಡಿಮೆಂಟ್ಸ್ ಆಫ್ ಫಿಜಿಕಲ್ ಜಿಯೋಗ್ರಫಿ... (ಕಲ್ಕತ್ತ, ೧೮೭೩) ಪು. ೧೧೯-೨೦; "ಆನ್ನಿವರ್ಸರಿ ಆಡ್ರಸ್ ಆಫ್ ದಿ ಪ್ರೆಸಿಡೆಂಟ್ : ದಿ ಪರ್ಮನೆನ್ಸ್ ಆಫ್ ಓಷನ್ ಬೇಸಿನ್ಸ್", ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಜಿಯೊಲಾಜಿಕಲ್ ಸೊಸೈಟಿ, ೪೬. ಪು. ೧೧೯-೨೦; ಮ್ಯಾಕ್ಲಿನ್. ಸಿ. ಡಿ., ದಿ ಮ್ಯಾನುಅಲ್ ಆಫ್ ದಿ ಮದ್ರಾಸ್ ಪ್ರಸಿಡೆನ್ಸಿ, ಸಂ. ೧ (ನ್ಯೂ ದೆಹ್ಲಿ. ೧೯೮೭, ಪ್ರ. ಮು.), ಪು. ೩೩-೩೪; ವಾಡಿಯ, ಡಿ. ಎನ್., ಜಿಯಾಲಜಿ ಆಫ್ ಇಂಡಿಯಾ ಫಾರ್ ಸ್ಟೂಡೆಂಟ್ಸ್, (ಲಂಡನ್. ೧೯೧೯), ಪು. ೧೧೦

೧೩. ಎ ಪ್ಯಾಸ್ಸೇಜ್ ಟು ಇಂಡಿಯ (ನ್ಯೂಯಾರ್ಕ್, ೧೯೮೪. ಪ್ರ. ಮು.) ಪು. ೧೩೫-೩೬

೧೪. ೧೯೦೦ರ ಸುತ್ತಮುತ್ತಲಲ್ಲಿ 'ಲೆಮೂರಿಯಾ' ಪದವನ್ನು ಕೆಲವರು ಬಳಸಿದರು. ಆದರೆ ೧೯೦೩ ಮತ್ತು ಆನಂತರ 'ಇಲೆಮೂರಿಯಾ', 'ಕುಮಾರಿನಾಟು' ಮೊದಲಾದವು ಹೆಚ್ಚು ಬಳಕೆಗೆ ಬಂದವು. 'ಕುಮಾರಿನಾಟ'ನ್ನು ಮೊದಲು ೧೯೦೩ರಲ್ಲಿ ವಿ. ಜಿ. ಸೂರ್ಯನಾರಾಯಣಶಾಸ್ತ್ರಿ (ತಮಿಳ್‌ಮೊಳಿಯಿಣ್ ವರಲಾಟು (ತಮಿಳುಭಾಷಾ ಇತಿಹಾಸ),

ಮದ್ರಾಸು, ೧೯೦೩. ಪು. ೮) ಮತ್ತು `ಕುಮಾರಿಕುಂಟು` ಎಂಬ ಪದವನ್ನು ೧೯೨೬ ರಲ್ಲಿ ಮೊದಲು ಬಳಸಿದವನು ಎಂ. ಎಸ್. ಪಿಳ್ಳೈ. ರಾಮಸ್ವಾಮಿ, ಅದೇ., ಪು. ೨೬೮, ಅ. ಟಿ. ೩೬: ಮದ್ರಾಸು ವಿ. ವಿ. ಒಂದು ಬಹಿರಂಗ ಸಭೆಯಲ್ಲಿ ಕೊಟ್ಟ, ಈ ಉಪನ್ಯಾಸವನ್ನು ತಂಜಾವೂರಿನ ತಮಿಳ್ ವಿಶ್ವವಿದ್ಯಾಲಯವು ಪರಿಷ್ಕರಿಸಿ ೧೯೮೫ ರಲ್ಲಿ ಪ್ರಕಟಿಸಿದೆ –ನೋ. ತಮಿಳ್ ಲಿಟರೇಚರ್ (ರಿಷೆಜ್ಡ್ ಅಂಡ್ ಎನ್‌ಲಾರ್ಜ್ಡ್) ತಂಜಾವೂರು, ೧೯೮೫ ಪು. ಮು.

೧೫. ಇಜೈಯನಾರ್ ಅಹಪ್ಪೊರುಳ್ ಅಥವಾ ಇಜೈಯನಾರ್ ಕವಿವಿಯಲ್ (ಇಜೈಯನಾರ್ ಎಂದರೆ ಶಿವ) ಎಂಬ ವ್ಯಾಕರಣ ಸೂತ್ರಕ್ಕೆ ನಕ್ಕೀರರ್ ಕೊಟ್ಟ ವ್ಯಾಖ್ಯೆಯು ಮೌಖಿಕವಾಗಿ ಗುರುಶಿಷ್ಯ ಪರಂಪರೆಯಲ್ಲಿ ಮುಂದುವರಿಯಿತು. ಈ ಟೀಕೆಯನ್ನು ರಕ್ಷಿಸಿಕೊಂಡು ಬಂದ ಪಂಡಿತರಲ್ಲಿ ಮದುರೈಕ್ಕಣಕ್ಕಾಯನಾರ್ ಮಹನಾರ್, ಕೀರನ್ ಕೊಜ್ರನಾರ್, ತೇನೂರ್ ಕೀಜಾರ್, ಪಡಿಯನ್ ಕೊಜ್ರನಾರ್, ಶೆಲ್ವತ್ತಾ ಶಿರಿಯರ್‌ಪುರಂ ಶಿವನಾರ್, ಶಲ್ಲೂರ್ ಆಶಿರಿಯಾರ್ ಆಂಪ್ಪೈಪ್ಪೆರುಮ್ ಕುಮಾರನಾರ್ ಪ್ರಮುಖರು. ಕ್ರಿ.ಶ. ೭ನೆಯ ಶತಮಾನದ ಸುಮಾರಿಗೆ ಇಳನಾಗನಾರ್ ಇವನ್ನು ಮುಶಿರಿ ಅಶಿರಿಯಾರ್ ನೀಲಕಂಟನಾರ್‌ಗೆ ಬೋಧಿಸಿದಾಗ ಅವನು ಅದನ್ನು ಲಿಖಿತರೂಪಕ್ಕಿಳಿಸಿದನು. ನೀಲಕಂಟನ ಟೀಕಾಗ್ರಂಥದಲ್ಲಿ ಮೂರು ಶಂಗಂಗಳ, ಕವಿ-ಕಾವ್ಯಗಳ, ಹನ್ನೆರಡು ವರ್ಷ ಬಿದ್ದ ಕ್ಷಾಮದ, ಪುನರ್ ಸಂಘಟನೆಗೊಂಡಾಗ ಇದ್ದ ನಲ್ವತ್ತೊಂಬತ್ತು ಹಿರಿಯ ಕವಿಗಳ ಅವರೂ ಪೊರುಳ್ ಬಗೆಗಿನ ಜ್ಞಾನವನ್ನೆಲ್ಲ ಕಳೆದುಕೊಂಡ ವಿವರಗಳು ಬರುವುವು. ಇದರಿಂದ ಖಿನ್ನನಾದ ಪಾಂಡ್ಯರಾಜನು ಆ ಪಂಡಿತರು ಹೇಗಾದರೂ ಮಾಡಿ ಪೊರುಳ್ ಜ್ಞಾನವನ್ನು ಪುನಃ ಪಡೆದುಕೊಳ್ಳಬೇಕೆಂದು ಆಗ್ರಹಿಸುವನು. ಕೊನೆಗೆ ಐದು ವರ್ಷದ ಮೂಕ ಬಾಲಕನಾದ ಉರುತ್ತಿಶನ್ಮನ್ (ವಾಸ್ತವವಾಗಿ `ಕುಮಾರ' ಅಥವಾ `ಕಾರ್ತಿಕೇಯ`) ಅನುಜ್ಞೆಯ ಮೇರೆಗೆ ನೀಲಕಂಟನ ಪೊರುಳ್ ವ್ಯಾಖ್ಯೆಯು ಅಧಿಕೃತವಾದುದೆಂದು ಅಂಗೀಕೃತವಾಯಿತೆಂದು ಇಲ್ಲಿ ವಿವರಿಸಲಾಗಿದೆ. (ಸೂ. ೧, ೧೪-೨೦: ಸುಬ್ರಹ್ಮಣಿಯನ್, ಎನ್., ಒರಿಜಿನಲ್ ಸೋರ್ಸಸ್ ಫಾರ್ ದಿ ಹಿಸ್ಟರಿ **ಆಫ್ ತಮಿಳ್‌ನಾಡ್** (ಉದುಮಲ್‌ಪೇಟ್, ೧೯೯೪, ಪು. ೨೨೪-೨೯).

■ ಡಾ. ಷ. ಶೆಟ್ಟರ್ : ಡಾ. ಎಸ್. ರಾಧಾಕೃಷ್ಣನ್ ಸಂದರ್ಶಕ ಪ್ರಾಧ್ಯಾಪಕ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಐಐಎಸ್‌ಸಿ ಕ್ಯಾಂಪಸ್, ಬೆಂಗಳೂರು - ೫೬೦ ೦೧೨ ■

ಬಿಂದು ದಶಕ

ಸಿ. ಪಿ. ಕೆ.

೧.

ಕಾವಿಲ್ಲದೆ
ಮೊಟ್ಟೆ ಮರಿಯಾಗದು;
ಕಾವಿಲ್ಲದೆ
ಕಾಯಿ ಹಣ್ಣಾಗದು;
ಕಾವಿಲ್ಲದೆ ಕಾವ್ಯ ಹುಟ್ಟದು;
ಕಾವು ಬೇಕು!
(ಕಾವಿ ಬೇಕೆ?)

೨.

ಏಕ
ಕಾಲದಲ್ಲಿ ನಾನು
ಬಾಲಕ
ಯುವಕ
ಮತ್ತು ಮುದುಕ!

೩.

ಶಬ್ದ ಹೂವು;
ಅರ್ಥ ಹಣ್ಣು!
ಹಣ್ಣಾದ ಮೇಲೆ
ಹೂವಿಗೆ ಅಳಿವು!
(ಹೂವೆಲ್ಲ
ಹಣ್ಣಾಗುವುದಿಲ್ಲ.)

೪.

ಕೃತಿ ವಿಮರ್ಶೆಯಲ್ಲಿ
ವರ್ತಮಾನ ಕಾಲ
ವಕೀಲ;
ಭವಿಷ್ಯತ್ಕಾಲ
ನ್ಯಾಯಾಧೀಶ!

೫.

ಹೆಣ್ಣಿನ ಸೋಲು ಸೋಲಲ್ಲ;
ಗಂಡಿನ ಗೆಲುವು ಗೆಲುವಲ್ಲ;
ಅವನು ಗೆದ್ದೂ
ಅಧೋಮುಖಿಯಾಗುತ್ತಾನೆ;
ಅವಳು ಸೋತೂ
ಊರ್ಧ್ವಮುಖಿಯಾಗುತ್ತಾಳೆ!

೬.

ನಾವು
ಪಾರದರ್ಶಕರಲ್ಲ;
ಅ-ಪಾರದರ್ಶಕರು:
ತೀರವನ್ನು ಕಾಣದವರು!

೭.

ಸಂಸಾರವನ್ನು
ಅಂಟಿಸಿಕೊಳ್ಳಬೇಕು,
ಮರಳಂಟಿಸಿಕೊಂಡಂತೆ;
ಮಣ್ಣಂಟಿಸಿಕೊಂಡಂತಲ್ಲ!

೮.

ಯಾವುದು
ಸಂಸಾರದ ಸಾರ?
ಒಂದೇ ಮಾತಿನಲ್ಲಿ
ಹೇಳಬೇಕೆಂದರೆ,
ಅವ್ಯಭಿಚಾರ!

೯.

ಕಾವ್ಯ
ಭವದ ಭಾಗ್ಯ;
ಭವನದ ಭಾಗ್ಯ;
ಅಂತೆಯೆ,
'ಭುವನದ ಭಾಗ್ಯ'!

೧೦.

ಈ ನೆಲ,
ಸಾಯುವತನಕ
ಮಾತೃಭೂಮಿ;
ಸತ್ತಮೇಲೆ
ಪಿತೃವನ!

■ **ಡಾ. ಸಿ. ಪಿ. ಕೃಷ್ಣಕುಮಾರ್ :**
೨೨೬೫/೧೯, ಭಾರತ, ೬ನೇ ಕ್ರಾಸ್, ವಿನಾಯಕನಗರ, ಮೈಸೂರು - ೫೭೦ ೦೧೨ ■

ಎಚ್. ಎಸ್. ವೆಂಕಟೇಶಮೂರ್ತಿಯವರ 'ಮೂವತ್ತು ಮಳೆಗಾಲ'

ಸ. ರಘುನಾಥ

ಹೊಟ್ಟೆಯೊಳಗಿನ ಹಾಡ ಬಿಟ್ಟು, ಬಿಡದಲೆ ಹಾಡಿ
ಮುಟ್ಟಿಸಬೇಕ ಕಲಿತ ರುಣವ । ಇಲದಿರಕ
ಹಾಡ ಹಿಂಗ್ಯಾವ ಬಾಯಾಗ ॥ — ಜಾನಪದ

ಎಚ್. ಎಸ್. ವೆಂಕಟೇಶಮೂರ್ತಿಯವರ ಸಮಗ್ರಕಾವ್ಯ 'ಮೂವತ್ತು ಮಳೆಗಾಲ' ಕೃತಿಯನ್ನು ಓದಿದಾಗ ಈ ಕವಿಯ ಕಾವ್ಯವೂ ಹೀಗೆಯೆ ಬಂದುದು ಅನ್ನಿಸುತ್ತದೆ. ಈ ಜಾನಪದ ಕವಿಯ ಹೃದಯದಾಶಯವನ್ನು ಎಚ್.ಎಸ್.ವಿ. ನೆರವೇರಿಸುತ್ತಾರೆ.

ಕವಿತೆ ಒಂದು ಆನಂದ, ಬದುಕಿನೊಂದಿಗಿನ ಅನುಭವಗಳ ಬೆನ್ನು ಹತ್ತುವ ಕಸಬು. ಇದನ್ನು ಅಚ್ಚ ಸಹಜತೆಯಲ್ಲಿ ನಡೆಸಬೇಕೆಂಬ ಕವಿ ವಿಮರ್ಶನಬುದ್ಧಿಗೆ ಆಕರ್ಷಕವಾಗ ಬೇಕೆಂದು ಬರೆಯುವುದಿಲ್ಲ. ಬೇಂದ್ರೆ, ಕುವೆಂಪು, ನರಸಿಂಹಸ್ವಾಮಿಯವರಂಥ ಕವಿಗಳು ಬರೆದದ್ದು ಹೀಗೆಯೆ. ಇವರು ಅಚ್ಚ ಸಹಜ ಕವಿಕುಲದವರು. 'ಮೂವತ್ತು ಮಳೆಗಾಲ' ಓದಿದಾಗ ಎಚ್.ಎಸ್.ವಿ. ಈ ಕುಲಕ್ಕೆ ಸೇರಿದವರು ಅನ್ನಿಸುತ್ತದೆ.

ಕವಿಯ ಬಗ್ಗೆ ಎಲ್ಲರಲ್ಲೂ ಒಂದೇ ಬಗೆಯ ನಚ್ಚಿಕೆ, ವಿಶ್ವಾಸ ಇರಲೇಬೇಕೆಂದೇನಿಲ್ಲ. ಆದರೆ ಕಾವ್ಯದ ಬಗ್ಗೆ ಇವು ಮೂಡಿರಲೇಬೇಕಾಗುತ್ತದೆ. ಇಲ್ಲವೆಂದರೆ ಆ ಓದು, ವಿಮರ್ಶೆ ಸುಳ್ಳಾಗುತ್ತದೆ. ಅಥವಾ ಅದು ಸಾಹಿತ್ಯೇತರ ಕಾರಣಗಳಲ್ಲಿನ ಓದು, ವಿಮರ್ಶೆಯಾಗುತ್ತದೆ. ಅದಕ್ಕೆ ಸಾಹಿತ್ಯ ಸಂಸ್ಕೃತಿಯ ಪರಿಮಳ ಬರದೆ ಬೇರೇನಾದರೂ ಆಗಬಹುದು. ಇಲ್ಲಿ, ಇದಕ್ಕೆ ಕವಿಯಾಗಲಿ ಅವನ ಕೃತಿಯಾಗಲಿ ಹೊಣೆಯಾಗುವುದಿಲ್ಲ. ಕವಿ ಕೃತಿಯೊಂದಿಗೆ 'ಸಹೃದಯ' ಓದಿಗಾಗಿ ನಿರೀಕ್ಷೆಯಲ್ಲಿರುತ್ತಾನೆ. ಸಹೃದಯ ಓದು ತನ್ನ ಕೃತಿಗೆ ಸಿಕ್ಕಿದ್ದಾದರೆ ಅದರ ಪರಿಮಳ ಗೋಡೆಗಳನ್ನು ದಾಟುತ್ತದೆ. ಕವಿ ಆ ಪರಿಮಳವನ್ನು ನೋಡುತ್ತಾನೆ. ಇಂಥದೊಂದು ನೋಟ ಪಂಪಾದಿ ಅನೇಕ ಕವಿಗಳಿಗೆ ಸಿಕ್ಕಿದೆ. ವೆಂಕಟೇಶಮೂರ್ತಿ ಅವರ ನೋಟಕ್ಕೆ ಈ ಪರಿಮಳ ಕಂಡಿದೆ ಎಂಬುದು ಅವರ ಅಭಿನಂದನ ಗ್ರಂಥ 'ಗಂಧವೃತ'ದಿಂದ ತಿಳಿಯುತ್ತದೆ.

ಪ್ರತಿಯೊಬ್ಬ ವ್ಯಕ್ತಿಗೂ ಅವನವನದೇ ಆದ ಲೋಕವಿರುತ್ತದೆ. ಆದರೆ ಅದರ ಬಹುಪಾಲು ಮಂಜು ಮುಸುಕಿನಲ್ಲಿರುತ್ತದೆ. ಆ ಮುಸುಕಿನ ಸರಿಕೆಯಾಗದೆ ಆ ಮುಸುಕಿಗೆ ದೃಷ್ಟಿ ಹೊಂದಿಸಿಕೊಳ್ಳು ತ್ತಿರುತ್ತಾನೆ. ಅದಕ್ಕೆ ಬೇಕಾದ ಪ್ರಭೆಗೆ ತಕ್ಕ ಧ್ಯಾನಕ್ಕೆ ಹೋಗುವುದಿಲ್ಲ. ಕವಿ ಅದನ್ನು ಮಾಡುತ್ತಾನೆ. ಅವನು ಕಳೆದ ಆ ಮುಸುಕು ಕವಿತೆಯಲ್ಲಿ ವ್ಯಕ್ತಕ್ಕೆ ಬರುತ್ತದೆ. ಅದನ್ನು ಕಂಡವ ಹಾ, ಇದನ್ನ ಅಲ್ಲವೆ ನಾನು ಹಂಬಲಿಸುತ್ತಿದ್ದುದು ಎಂದು ಅಚ್ಚರಿಪಡೆಯುತ್ತಾನೆ. ಆಗ ಅವನಿಗೆ ಕಾವ್ಯ ತನ್ನದಾಗಿ ಎದೆಗೆ ತುಂಬಿಕೊಳ್ಳುತ್ತದೆ. ಹೀಗೆ ಎದೆಗೆ ತುಂಬಿಕೊಳ್ಳುವ ಕವಿತೆಗಳ ಒಂದು ತಿಳಿಗೊಳ 'ಮೂವತ್ತು ಮಳೆಗಾಲ'.

'ಕ್ರಮೇಣ ಹೊರಗಡೆಯ ಎಲ್ಲ ಪ್ರಭಾವಗಳಿಂದಲೂ ತಪ್ಪಿಸಿಕೊಂಡು, ಶುದ್ಧ, ಸ್ವತಂತ್ರ ಭಾರತೀಯತೆ ಕನ್ನಡದಲ್ಲಿ ಆಧುನಿಕವಾಗಿ ಮೈ ತಳೆಯಬೇಕು. ಇದು ನಾವು ನಮ್ಮ ಮುಂದೆ ಇಟ್ಟುಕೊಳ್ಳಬೇಕಾದ ಗುರಿ' (ಗೋಪಾಲಕೃಷ್ಣ ಅಡಿಗ, 'ಚಿಂತಾಮಣಿಯಲ್ಲಿ ಕಂಡ ಮುಖ'). ವೆಂಕಟೇಶಮೂರ್ತಿಯವರಿಗೆ ಈ ಗುರಿ ಇದೆ. ಇದನ್ನು ಇವರು ಸೃಜಿಸುವ ಪ್ರತಿಮೆ, ರೂಪಕಗಳನ್ನು ಹಿಡಿದು ಸಾಧಿಸಬಹುದೆಂದರೆ ಅದು ಪಾರ್ಶ್ವವಷ್ಟೆ ಆಗುವುದು. 'ಒಣಮರದ ಗಿಳಿಗಳು' ನಂತರದ ಸಂಕಲನಗಳಲ್ಲಿನ ಕವಿತೆಗಳು ಈ ನಿಟ್ಟಿನ ಅಧ್ಯಯನಕ್ಕೆ ಆಹ್ವಾನಿಸುತ್ತವೆ. ಇರುವ ಅನುಭವಗಳು 'ಅನ್ಯ' ವಿಮುಕ್ತಿಯ ಮಾರ್ಗದಲ್ಲಿವೆ.

ನವ್ಯೋತ್ತರ ಕಾವ್ಯವು ಅಡಿಗರು ಹಂಬಲಿಸಿದಂತೆ ಮೈವಳೆಯುವತ್ತ ಬೆಳೆಯತೊಡಗಿತು. ಸಾಹಿತ್ಯ ಚಳವಳಿಗಳ ವೈಚಾರಿಕತೆಗೇ ಮನಗೊಡದೆ, ಆದರೆ ಅದನ್ನು ನಿರ್ಲಕ್ಷಿಸದೆ ಪಡೆದ ಭಾವಶಕ್ತಿಯಿಂದ ತನ್ನ ಕಾವ್ಯವನ್ನು ಎತ್ತರಿಸುತ್ತ ಕಾವ್ಯದ ಉದ್ದೇಶ, ವಿಚಾರ, ಅನುಭವಗಳ ಸಂಯೋಜನೆಯಲ್ಲಿ ಕಾಲ ಮತ್ತು ಕಲೆಯ ಮನೋಭಾವಗಳನ್ನು ಅಂತರ್ಗತ ಮಾಡಿಕೊಂಡಿದ್ದೆ ಎಚ್.ಎಸ್.ವಿ. ಅವರ ಆದರ್ಶ. ಈ ಆದರ್ಶ ಕಾವ್ಯಸ್ಫೂರ್ತಿಯನ್ನು ಪಡೆದಿದೆ. ಸತ್ಯ ಶಿವ ಸುಂದರ ತತ್ವ ಇದರ ನೆಲೆಯಾಗಿದೆ. ಇದನ್ನೂ ಎಚ್.ಎಸ್.ವಿ. ಸ್ವತಂತ್ರ ಕಾವ್ಯಾತ್ಮದ ಮೂಲಕ ಶಬ್ದಶರೀರದ ಅಂತರ್ಗತ ಧ್ವನಿಯಲ್ಲಿ ಪಡೆಯಲು ಹವಣಿಸುತ್ತಾರೆ. ಈ ಹವಣಿಕೆ ಕಾವ್ಯದ ನಿಲುವಿನ ಮೂಲಕ ನಡೆಸುವ ಸಂಘರ್ಷ ಅಥವಾ ಹೋರಾಟದಿಂದ ಹುಟ್ಟಿದ್ದಾಗಿದೆ. ಚಲನೆ ಇರುವುದು ಮಾನವೀಯತೆಯ ಕಡೆಗೆ, ಪ್ರೀತಿಯ ಕಡೆಗೆ. ಇದೇ ಸತ್ಯ ಶಿವ ಸುಂದರ. ಇದು ಬದುಕಿನ ಹಾಗೂ ಕಾವ್ಯದ ಹಿತಾರ್ಥ. ಎಚ್.ಎಸ್.ವಿ. ಅವರ ಕಾವ್ಯ ಸಂದರ್ಭದಲ್ಲಿ ಬಂದ 'ಕೇಂದ್ರ ದರ್ಶನ' ಯಾವುದು ಎಂಬ ಪ್ರಶ್ನೆಗೆ ನನಗೆ ಸಿಕ್ಕಿದ ಉತ್ತರ– ಸತ್ಯ ಶಿವ ಸುಂದರಗಳಲ್ಲಿನ ಹಿತಾರ್ಥ ಸಾಧಿಸುವುದು.

ಹಿತಾರ್ಥ ಎಂಬುವದು ಶಬ್ದದ ಬಳಕೆಯಷ್ಟು ಸರಳವಲ್ಲ. ಪ್ರೀತಿಯ ಸ್ಪರ್ಶವಿಲ್ಲದೆ ಇದು ಫಲಿತವಾಗುವುದಿಲ್ಲ. ಸಮರಸ ಪೂರ್ಣ ಸ್ವರೂಪ ಪಡೆದಾಗಲೇ ಲೋಕದ, ಕಾರ್ಯದ ಹಿತಾರ್ಥ ಸ್ಪಷ್ಟವಾಗುವುದು. ಇಲ್ಲಿಯೆ ಜೀವನ ಹಾಗೂ ಕಾವ್ಯ ತನ್ನದೇ ಸ್ವರೂಪದಲ್ಲಿ ಸಾರ್ವತ್ರಿಕತೆಯನ್ನು ಪಡೆಯುವುದು. ಈ ಸ್ವರೂಪದ ಕ್ರಮಬದ್ಧತೆಯೆ ಜೀವನ. ಕಾವ್ಯವೆರಡರ ಮೌಲ್ಯಗಳನ್ನು ನಿರ್ಮಿಸುತ್ತದೆ. ಈ ನಿರ್ಮಿತಿಯಲ್ಲಿ ವಾಗಾರ್ಥಗಳು ಸಂಗಮವಾಗುತ್ತದೆ. ಈ ಸಂಗಮದಲ್ಲಿ ಹುಟ್ಟುವುದೆ ಅನಂತತೆಯ ಹಂಬಲ, ಸ್ವಾತಂತ್ರ್ಯದ ಅರಿವು. ಇದು ಗರುಡಪ್ರಜ್ಞೆ. ಗರುಡಪ್ರಜ್ಞೆ ರಹಸ್ಯದ್ದು, ಅಗಮ್ಯವಾದುದು ಅಲ್ಲ. ಆದರೆ ಗಾಳಿಯಲ್ಲಿ ತರಂಗವಾದ ನಾದದಂತೆ, ಗರುಡ ಬಿಂಬವಾಗಿ ಕಾಣುವಂತೆ ಪ್ರಜ್ಞೆಯೂ ಅನುಭವದ ಮೂಲಕ ಬಿಂಬವಾಗಬೇಕು. ನಾದ ಬಿಂಬವಾಗುವುದು ಚಿತ್ತದಲ್ಲಿ. ಚಕ್ಷುಸ್ಪರ್ಶಿತ ಗರುಡ, ಚಿತ್ತಸ್ಪರ್ಶಿತ ಪ್ರಜ್ಞೆ ಒಂದೇ ಬಿಂಬವಾಗುವ ಕ್ರಿಯೆಯಲ್ಲಿ ಎಚ್.ಎಸ್.ವಿ. ಅವರ ಕಾವ್ಯನಿರ್ಮಾಣ ನಡೆಯುತ್ತದೆ.

ನವೋದಯದ ಆಧ್ಯಾತ್ಮ ಸಂಸ್ಕೃತಿ, ಮನುಷ್ಯನ ನೈತಿಕ ಶಿಕ್ಷಣ, ನವ್ಯದ ವೈಚಾರಿಕ ಉದ್ದೀಪನ, ನವ್ಯೋತ್ತರದ ಸಾರ್ವತ್ರಿಕ ಮಾನವೀಯತೆ ಈ ಎಲ್ಲವೂ ಹಂಬಲಿಸಿದ ಜೀವನದರ್ಶನ ಇಡಿಗೊಂಡ ಬಗೆಯನ್ನು ಎಚ್.ಎಸ್.ವಿ. ಅವರ ಸಮಗ್ರಕಾವ್ಯದಲ್ಲಿ ನೋಡುತ್ತೇವೆ.

ಎಚ್.ಎಸ್.ವಿ. ಅವರನ್ನು ರಹಸ್ಯಗಳು ಕಾಡುತ್ತವೆ. ಈ ರಹಸ್ಯಗಳನ್ನು ಭೇದಿಸುವ ಕವಿಯ ಪ್ರಯತ್ನಗಳಲ್ಲಿ ಅನಂತತೆಯ ಬೆಡಗು ಕಾಣಿಸಿಕೊಳ್ಳುತ್ತದೆ. ಈ ಬೆಡಗೂ ರಹಸ್ಯದ ಗರ್ಭವೇ ಆಗುವುದರಿಂದ ಕವಿ ಅಭಿಮನ್ಯುಪ್ರಜ್ಞೆಯಲ್ಲಿ ಸನ್ನದ್ಧನಾಗಿ, ಪ್ರಹ್ಲಾದಪ್ರಜ್ಞೆಯಲ್ಲಿ ಅಗ್ನಿಸ್ತಂಭವನ್ನು ಸ್ಫೋಟಿಸುತ್ತಾನೆ. ಈ ಸ್ಫೋಟ ವಿನಾಶಕಾರಿಯಲ್ಲ, ಭಯವಿಹ್ವಲತೆಯಲ್ಲ, ಭೇದಿಸಿದ ರಹಸ್ಯ ತೆರೆದ ಅದ್ಭುತಗಳು. ಕವಿ ಇವನ್ನು ನೋಡುವುದು ಗರುಡನೇತ್ರದಿಂದ. ಇದು ಕವಿಯ ಕಣ್ಣೂ ಹೌದು. ಈ ಕಣ್ಣಿನಲ್ಲಿ ಭೂಮಿ ಇರುವಂತೆ ಆಕಾಶವೂ ಇದೆ. ಭೂಮಿ ಇಹದ ಬದುಕಿನ ಸಾರಶಕ್ತಿ. ಆಕಾಶ ಇದರಾಚಿನ ಹಂಬಲಗಳ ಹುಡುಕಾಟದ ರೂಪಕ. ಈ ಎರಡರ ನಡುವಿನ ಬಯಲಿನಲ್ಲಿ ಈ ಕವಿ ನಿತ್ಯ ಅನ್ವೇಷಿ.

ವೆಂಕಟೇಶಮೂರ್ತಿಯವರದು ಭಾವದಲ್ಲಿ ಮೃದುವಾಗಿ ಮುಟ್ಟುವ ಕಾವ್ಯ. ಕೊಡುವ ಅನುಭವ ಮೃದುತನದಲ್ಲೆ ಕರಗಿ ಹೋಗುವುದಿಲ್ಲ. ಇವರ ಭಾವಗೀತೆಗಳೂ ಹೀಗೆಯೆ. ಈ ಪರಂಪರೆಯ ನಡೆದಾರಿಯಲ್ಲಿ ಆರ್ದ್ರ ಭಾವಬಿಂದುಗಳನ್ನು ಅರಳಿಸುತ್ತ ಅವುಗಳಿಗೆ ಭಾವಸೌರಭ ವನ್ನು ತುಂಬುತ್ತಾರೆ. ಇವರ ಭಾವಗೀತೆಗಳು ಸಭ್ಯನ ರೊಮ್ಯಾನ್ಸಿನ ಮೂಡುಗಳಾಗಿವೆ. ಸೌದರ್ಯಪ್ರಜ್ಞೆ ಉಳ್ಳ ಹೆಣ್ಣು ಸಾವಕಾಶ ಸಿಂಗರಿಸಿಕೊಳ್ಳುವಂತೆ ನುಡಿಯ ನಡೆ ಇದೆ. ಸಿಂಗಾರ ಮುಗಿಸಿ ಕನ್ನಡಿಯ ಮುಂದೆ ನಿಂತಾಗ ಕಾಣುವ ಪ್ರತಿಬಿಂಬದಂತೆ ಭಾವದ ರೂಪ ಎದೆಯಲ್ಲಿ ನಿಲ್ಲುತ್ತದೆ, ವಿಶೇಷವಾಗಿ ನರಸಿಂಹಸ್ವಾಮಿಯವರಲ್ಲಿ ಆಗಿರುವಂತೆ.

ಈ ಕವಿಯ ಭಾವಗೀತೆಗಳ ಇನ್ನೊಂದು ವೈಶಿಷ್ಟ್ಯವೆಂದರೆ ಅವುಗಳಲ್ಲಿ ನದದ ಬಿರುಸಿಲ್ಲದೆ ನದಿಯ ಲಾಲಿತ್ಯವಿರುವುದು. ಆತುರವಿಲ್ಲ, ಅವಸರವಿಲ್ಲ. ನೆಲ್ಲುಹುಲ್ಲಿನ ಕಾವಿನಂತಲ್ಲ. ತೀವ್ರವಾದ ಉದ್ವೇಗವಿಲ್ಲ.

‘ಹೂವರಳಲಿ ಮೊಗ್ಗಿನ ಸೆರೆ ಹರಿದು
ಗಂಧದ ಬಿಡುಗಡೆಗೆ’

‘ಮಾವಿನ ಚಿಗುರನ್ನು
ಹಕ್ಕಿ
ಹಾಡು ಮಾಡಿಬಿಟ್ಟಿತು’

‘ಕಣ್ಣು ತುಂಬಿದ ಕಂಬನಿಯ ಗೆಳತೀ
ನೀನು ಒರೆಸಿಕೋ’

‘ಹವಳ ಕೆಂಪಿನ ಸಂಜೆ. ಸುಳಿವ ತಣ್ಣನೆ ಗಾಳಿ’

‘ವಸಂತ ಬರಲು ಮರ ಚಿಗುರುವುದು’

ಇಲ್ಲೆಲ್ಲ ಯಾವ ಆತುರವೂ ಇಲ್ಲ. ಗಬಗಬಿಕೆ ಇಲ್ಲ. ಇವೆಲ್ಲವೂ ಭಾವ ಸಾವಧಾನದ ಚಿತ್ರಗಳು.

ವೆಂಕಟೇಶಮೂರ್ತಿಯವರ ಪ್ರೀತಿಯಲ್ಲಿ ಮಕ್ಕಳಿದ್ದಾರೆ. ಇವರಿಗಾಗಿ ಬರೆಯುವಾಗ ಕವಿತೆಯ ಸನ್ನಿವೇಶವನ್ನು ಮಕ್ಕಳ ಮನೋಲೋಕದ ಭಾವನೆಗಳಿಗೆ ಚಿತ್ರರೂಪ ಕೊಡಲು

ಪ್ರಯತ್ನಿಸುತ್ತಾರೆ. ಪರಿಚಿತ ಸನ್ನಿವೇಶ ಮತ್ತು ವಸ್ತುವಿಗೆ ಮಗು ಮತ್ತು ಅಮ್ಮನ ನಡುವೆ ನಡೆಯುವ ಮಾತಿನ ನುಡಿಗಳನ್ನು ಕವಿತೆಯ ಭಾಷೆಯಾಗಿ ನಿರ್ಮಿಸಿಕೊಳ್ಳುತ್ತಾರೆ. ಇವರ ಇಂಥ ರಚನೆಗಳಲ್ಲಿ ಎರಡು ಬಗೆ ಇವೆ. ಒಂದು ಮಕ್ಕಳಿಗಾಗಿ ಕವಿತೆಗಳು. ಇವು 'ಹಕ್ಕಿ ಸಾಲು', 'ಹೂವಿನ ಶಾಲೆ' ಸಂಕಲನಗಳ ಕವಿತೆಗಳು. ಇಲ್ಲಿನವು ಕವಿತೆಗಳು. ಶಿಶುಪ್ರಾಸ ಪದ್ಯಗಳಲ್ಲ. ಆದರೆ ಪ್ರಾಸವೂ ಇರುವ ಪದ್ಯಗಳು. ಸಾಮಾನ್ಯವಾಗಿ ಶಿಶುಪ್ರಾಸ ಪದ್ಯಗಳು ದೊಡ್ಡವಲ್ಲ. ನಾಲ್ಕಾರು ಸಾಲುಗಳ ಮಿತಿ ಅವಕ್ಕೆ. ಆದರೂ ಎಚ್.ಎಸ್.ವಿ. ಅವರ ಮಕ್ಕಳಿಗಾಗಿ ಆದ ಪದ್ಯಗಳು ಶಿಶು ಪ್ರಾಸಗಳಂತೆ ಥಟ್ಟನೆ ಮಕ್ಕಳ ಬಾಯಲ್ಲಿ ಆಡಿಬಿಡುತ್ತವೆ. ನಮ್ಮ ಜಾನಪದ ಶಿಶುಗೀತೆ-ಪ್ರಾಸಗಳಂತೆ ಇವೂ ಮೊದಲಿಗೆ ಹಾಡಿ ಆಡಿಸುವ, ನಂತರ ಮಕ್ಕಳೇ ಹಾಡಿ ಆಡಿಕೊಳ್ಳುವ ಗುಣ ಹೊಂದಿರುವುದೆ ಇದಕ್ಕೆ ಕಾರಣ. ಈ ಕವಿತೆಗಳನ್ನು ಮಕ್ಕಳ ಭಾವಗೀತೆಗಳು ಎಂದು ಕರೆಯಬಹುದು. ನೀತಿ ಮತ್ತು ಮೌಲ್ಯಗಳನ್ನು ಅಂತರ್ಗತಗೊಳಿಸುವ ಕಲೆಗಾರಿಕೆಯಿಂದಾಗಿ ನವೋದಯದ ನಂತರ ಬಂದ ಮಕ್ಕಳ ಕವಿತೆಗಳಲ್ಲಿ ಎಚ್.ಎಸ್.ವಿ. ಅವರದು ಪ್ರತ್ಯೇಕ ಧ್ವನಿ ಹಾಗೂ ಮಾದರಿ.

'ಸೋನಿ ಪದ್ಯಗಳು' ಮಗುವಿನ ಪದ್ಯಗಳು. ಸೋನಿ ಕವಿಯ ಮೊಮ್ಮಗಳು. ಇವು ಕವಿಯ ಆಚೆಗೆ ಸೋನಿಯಂತಹ ಎಲ್ಲ ಮಗುವಿನ ಪದ್ಯಗಳು. ಇಲ್ಲಿ ಜಾನಪದ ತ್ರಿಪದಿಯೊಂದು ನೆನಪಿಗೆ ಬರುತ್ತದೆ–

ಅಳುವ ಕಂದನ ತುಟಿಯು ಹವಳದ ಕುಡಿ ಹಾಂಗ
ಕುಡಿಹುಬ್ಬು ಬೇವಿನ್ನೆಸಳ್ಹಾಂಗ । ಕಣ್ಣೋಟ
ಶಿವನ ಕೈಯಲಗು ಹೊಳೆದ್ಹಾಂಗ ॥

ಇದನ್ನು ಮೊದಲಿಗೆ ಹಾಡಿಕೊಂಡದ್ದು ಒಬ್ಬ ತಾಯಿ. ನಂತರದಲ್ಲಿ ಯಾವ ತಾಯಿಯೂ ತನ್ನ ಮಗುವಿಗೆ ಹಾಡಬಹುದಾಯಿತು. ಸೋನಿ ಪದ್ಯಗಳೂ ಹೀಗೆಯೆ. ಸೋನಿ ಎಂಬಲ್ಲೆಲ್ಲ ತಮ್ಮ ಮಗುವಿನ ಹೆಸರನ್ನು ಸೇರಿಸಿ ಆನಂದಿಸಬಹುದು.

'ಹಕ್ಕಿ ಸಾಲು', 'ಹೂವಿನ ಶಾಲೆ' ಸಂಕಲನಗಳ ಕವಿತೆಗಳು ಅರಳಿಸುವ ಅನುಭವ ಕಣ್ಣು ಮತ್ತು ಮನಸ್ಸುಗಳು ಹತ್ತಿ ಇಳಿಯುವ, ಹೀಗೆ ಮಾಡುತ್ತ ಅಥವಾ ಆಡುತ್ತ ಪಡೆಯುವಂಥದು. ಅಪ್ಪುವ ಮಮತೆ ಅಪ್ಪಿಕೊಳ್ಳುವ ಕೈಗಳನ್ನು ಚಾಚಿರುವಂತೆ ಈ ಕವಿತೆಗಳಿವೆ. ಆದರೆ 'ತಾರೆಯ ತರಲೆ' ಕವಿತೆಯ ಬಗ್ಗೆ ಸುಮತೀಂದ್ರ ನಾಡಿಗರು ಹೇಳಿರುವ 'ತೇಲುವ ಕಾರಿನಲ್ಲಿ ಬಂದ ಥಳ ಥಳ ಹೊಳೆಯುವ ತಾರೆ' ಸಿನಿಮಾ ತಾರೆ ಅಂತ ಒಗಟನ್ನು ಬಿಡಿಸಿದಾಗ ಮಕ್ಕಳಿಗೆ ಸಂತೋಷವಾಗುತ್ತದೆ' ಎಂಬ ಮಾತು ಅಂದವಾಗಿಲ್ಲ. ಮಾವು, ಹುವ್ವು ಇರುವುದು ಕಾಡಿನಲ್ಲಿ. ಆದರೆ ನೆತ್ತಿಯಾಚೆ ಕಾಣುವುದು ತಾರೆ. ಕಾರು ಕೃತಕ. ಇವುಗಳ ನಡುವೆ ಇದು ಬಂದರೆ ವಿಕೃತ. 'ತೇಲೋ ಕಾರು' ಬಂದದ್ದು ನೆಲದ ಮೇಲಲ್ಲ. ಗಾಳಿಯಲ್ಲಿ. ಅದನ್ನು ವಿಮಾನ ಅಂತ ಭಾವಿಸಲಾಗದು. ಅದು ಚಿಟ್ಟೆ, ಸೂರ್ಯನ ಕುದುರೆ ಆಗಬಹುದಲ್ಲ. ಮೇಕಪ್ಪಿನ ತಾರೆಯೆಂದೇಕೆ ಕಲ್ಪನೆ ಮಾಡಬೇಕು? ಮರಕ್ಕೆ ಹೂವೆಸೆದು ಸೊಬಗು ತುಂಬುವಷ್ಟು ಮಾಂತ್ರಿಕಳೆ ಸಿನಿಮಾ ತಾರೆ? ಆಕಾಶದ ತಾರೆಯೆ ಏಕೆ ತೇಲೋ ಕಾರಿನಲ್ಲಿ ಅಂದರೆ ಚಿಟ್ಟೆಯ ಮೇಲೆ ಬಂದು ಮರಕ್ಕೆ

ಹೂವೆಸೆದಿರಬಾರದು? ಬರುವಾಗ ತೇಲೋ ಕಾರಾಗಿ ಮರದಲ್ಲಿ ಕೂತಾಗ ಚಿಟ್ಟೆಯೆ ಹೂವಾಗಬಾರದೇಕೆ? ಇದು ಅದ್ಭುತವೂ ಸೊಬಗಿನದೂ ಆಗದೇನು? ತೇಲೊ ಕಾರನ್ನು ಕಾರೇ ಆಗಿ, ತಾರೆ, ಸಿನೆಮಾ ತಾರೆಯೇ ಎಂದು ಕವಿ ಒಪ್ಪುವುದಾದರೆ ಸುಂದರ ಚಿತ್ರದ ಮೇಲೆ ಬಣ್ಣ ಸೋರಿದಂತೆ ಆಗುತ್ತದೆ. ನಾನು ಈ ಕವಿತೆಯನ್ನು ಆರು, ಏಳನೇ ತರಗತಿಯ ಮಕ್ಕಳಿಗೆ ಹೇಳಿದ್ದೇನೆ. ಅವರಿಗೆ ಸಿನಿಮಾ ತಾರೆ ಎಂಬುದು ಪ್ರಿಯವಾಗಲಿಲ್ಲ.

ವೆಂಕಟೇಶಮೂರ್ತಿ ಕಲ್ಪನೆ ಹಾಗೂ ಅದರ ಚೆಲುವಿಕೆಗೆ ಕಾಪು ನೀಡುವುದರಿಂದ ಮಕ್ಕಳಲ್ಲಿನ ಮುಗ್ಧತೆಯನ್ನು ಪೋಷಿಸುತ್ತಾರೆ. ಹಾಗೆಯೆ ಮಕ್ಕಳಲ್ಲಿನ ವಿಚಾರವಂತಿಕೆಗೆ ಕಾಪು ಕೊಡುತ್ತಾರೆ. ಪಂಚತಂತ್ರದಂತಹ ಮಾರ್ಗೀಯ ರಚನೆಗಳ ಪ್ರೇರಣೆಯೊಂದಿಗೆ ಜಾನಪದೀಯ ಬೆರಗನ್ನೂ ಉಳಿಸಿಕೊಳ್ಳುತ್ತಾರೆ. ಇದು ಮಕ್ಕಳ ಕವಿತೆಗಳ ಇನ್ನೊಂದು ಮಾದರಿಯನ್ನು ತೋರಿಸಿಕೊಡಲು ಸಾಧ್ಯ ಮಾಡಿದೆ. ತುಪ್ಪ ಹಿಂಡಿದ ಜೇನು ಮೇಣದಿಂದ ಮಾಡಿದ ಗೊಂಬೆಗಳಂತೆ ಮಕ್ಕಳ ಸಾಹಿತ್ಯ ನಿರ್ಮಾಣವಾಗುತ್ತಿದ್ದ ಸಂದರ್ಭದಲ್ಲಿ ಎಚ್.ಎಸ್.ವಿ. ಮಕ್ಕಳ ಕವಿತೆಗಳಿಗೆ ಮಕರಂದ ಉಣಿಸಿದರೆಂದು ಹೇಳಬಹುದು.

ಆಧುನಿಕ ಮಕ್ಕಳ ಸಾಹಿತ್ಯದಲ್ಲಿ ಕ್ರಾಂತಿಕಾರಕ ಮಾರ್ಗವನ್ನು ತೆರೆದ ವಿ. ಜಿ. ಭಟ್ಟರ ಹಾಗೆ ಎಚ್.ಎಸ್.ವಿ. ವಸ್ತು, ವಿನ್ಯಾಸ ಎರಡರಲ್ಲೂ ಇದನ್ನು ಕಾಣಿಸುತ್ತಾರೆ. ಇದರಿಂದಾಗಿಯೆ ಇರಬೇಕು ನಮ್ಮ ಪ್ರಾಥಮಿಕ ಪಠ್ಯಪುಸ್ತಕಗಳನ್ನು ರೂಪಿಸುವವರಿಗೆ ಇವರ ಕವಿತೆಗಳು (ವಿ. ಜಿ. ಭಟ್ಟರ ಕವಿತೆಗಳಂತೆ) ಕಾಣದೆ ಹೋಗಿರುವುದು.

ವಿ. ಜಿ. ಭಟ್ಟರ 'ತುಂಟನ ಪ್ರಶ್ನೆ' ಪದ್ಯದ ಈ ಒಂದು ನುಡಿಯನ್ನು ಹೇಳುವುದರ ಮೂಲಕ ಎಚ್.ಎಸ್.ವಿ. ಅವರ ಮಕ್ಕಳ ಕವಿತೆಗಳ ಮಾತನ್ನು ಮುಗಿಸಬಹುದು :

'ಕತ್ತಲೆ ಕೋಣೆಗೆ ಬೆಳಕನು ತಂದರೆ
ಕತ್ತಲೆಯೆಲ್ಲೋ ಓಡುವುದು
ಬೆಳಕಿನ ಬಯಲಿಗೆ ಕತ್ತಲೆ ಬಂದರೆ
ಬೆಳಕಾದರೂ ಏನ್ ಮಾಡುವುದು?'

ದಲಿತ, ಬಂಡಾಯ ಸಾಹಿತ್ಯ ಚಳವಳಿ ಒತ್ತಿ ಬೀಸುವ ಗಾಳಿಯಾಗಿದ್ದಾಗ ಇದರಿಂದ ಹೊರಗಿದ್ದ ಲೇಖಕ-ಕವಿಗಳು ಕೆಲವರು ದಲಿತ-ಬಂಡಾಯ ಕವಿಗಳಂತೆ ಸಿಟ್ಟಿನಿಂದ ಬದುಕನ್ನು ನೋಡದೆ ಪರಿವರ್ತನೆಯ ಪರಿಣಾಮಗಳಲ್ಲಿ ಬದುಕನ್ನು ನೋಡುತ್ತಿದ್ದರು. ದಲಿತ-ಬಂಡಾಯ ಸಮಾಜ ವೈದಿಕ ಧರ್ಮಾಚರಣೆಗಳನ್ನು ಉದ್ದೇಶವಾಗಿಟ್ಟುಕೊಂಡು ಅನ್ಯಾಯಗಳನ್ನು ಖಂಡಿಸುತ್ತ ಬದುಕಿನತ್ತ ಹೊರಳಿದರೆ, ಇವರು ಬದುಕಿನ ಉದ್ದೇಶಗಳೊಂದಿಗೆ ಸಮಾಜದತ್ತ ಹೊರಳಿದರು. ಇಂಥವರಲ್ಲಿ ವೆಂಕಟೇಶಮೂರ್ತಿ ಒಬ್ಬರು. ಇವರು ವಸ್ತುಧ್ವನಿ, ಕಾವ್ಯಧ್ವನಿ, ರಸಧ್ವನಿ ಎಂಬ ಪರಿಕಲ್ಪನೆಗಳಿಂದ ಕಾವ್ಯವನ್ನು ಕಟ್ಟುವಲ್ಲಿ ನಿರತರಾದರು. ಕಾವ್ಯ, ಜೀವನ ಎರಡರಲ್ಲೂ ಜೀವ, ಜೀವಕಳೆ ಉಳಿಸುವ. ಆ ಜೀವಕಳೆಗೆ ಮುಗುಳುನಗೆ ತರುವ ಹಂಬಲದಲ್ಲಿ ಕಾವ್ಯ ರಚನೆ ಮಾಡುವಾಗ ವಿವಿಧ ಪ್ರಯೋಗಗಳಲ್ಲಿ ನಿರತರಾದರು. ಇದು ಯಾಂತ್ರಿಕವಾಗದೆ ಮಾಂತ್ರಿಕವಾಗಬೇಕೆಂಬ ಕಲಾಪ್ರಜ್ಞೆಯನ್ನು ಜಾಗೃತಿಯಲ್ಲಿ ಇಟ್ಟುಕೊಂಡರು. ಇದು 'ಗಂಧ

ವ್ರತ'ದ ಪ್ರಜ್ಞೆ. ಈ ಪ್ರಜ್ಞೆಯ ಯಶಸ್ಸು ಮುಖ್ಯವಾಗಿ 'ಎಷ್ಟೊಂದು ಮುಗಿಲು' ಸಂಕಲನದ ಕವಿತೆಗಳಲ್ಲಿ ಕಾಣಿಸುತ್ತದೆ.

ಪ್ರಯೋಗಗಳನ್ನು ದಾಟಿ ಬಂದ ಎಚ್.ಎಸ್.ವಿ., ಸಹೃದಯ ಎಂಬಲ್ಲಿಗೆ ತಮ್ಮ ಕಾವ್ಯವನ್ನು ಒಯ್ಯುವ ಪ್ರಯತ್ನ ನಡೆಸಿದರು. ಶಬ್ದ ಹಾಗೂ ಭಾವಗಳ ಕುಸುರಿಗೆ ತೊಡಗುವಾಗ ಕಾವ್ಯದ ಭಾಷೆಗೆ ಸಾಮಾಜಿಕ ಮಾತನ್ನು ಒಗ್ಗಿಸಿಕೊಂಡರು.

ಇಪ್ಪತ್ತನೇ ಶತಮಾನದ ಹಿಂದಿನ ಶತಮಾನಗಳಲ್ಲಿನ ಕನ್ನಡ ಕಾವ್ಯವನ್ನು ಸಾವಕಾಶದ ಕಾವ್ಯವೆಂದು ಹೇಳಬಹುದು. ಮಾರ್ಗಗಳೂ ಹೀಗೆಯೆ ಬೆಳೆದವು. ಇಪ್ಪತ್ತನೇ ಶತಮಾನದಲ್ಲಿ ನವೋದಯ ಕಾವ್ಯವನ್ನು ಬಿಟ್ಟರೆ ಕನ್ನಡಕ್ಕೆ ಬಂದ ಕಾವ್ಯದ ದಾರಿಗಳು ಬೇಗಬೇಗನೆ ಬದಲಾಗುತ್ತ ಬಂದವು. ಇದು ಕವಿಗಳಿಗೆ ಒಂದು ಸವಾಲೂ ಆಯಿತು. ಈ ಸವಾಲಿನ ನಡುವೆ ದಾರಿ ಬದಲಿಸಿದ ಕವಿಗಳು ಇದ್ದಂತೆ ಬದಲಿಸದವರೂ ಇದ್ದರು. ಇದೆಲ್ಲವನ್ನೂ ಗುರುತಿಸಿಕೊಂಡು ಎಚ್.ಎಸ್.ವಿ. ತಮ್ಮ ಕವಿಗರ್ಭದಲ್ಲಿ ವೃಥಾಗರ್ಭದ ಧಾರಣಶಕ್ತಿಯನ್ನು ಕಾಯ್ದುಕೊಂಡರು.

'ಮೂವತ್ತು ಮಳೆಗಾಲ'ದಲ್ಲಿನ ಕವಿತೆಗಳನ್ನು ಒಟ್ಟಾಗಿ ಗ್ರಹಿಸುವಾಗ ಬಹು ಸಂಸ್ಕೃತಿಯ ಭಾರತೀಯ ಸಂಗೋಪನಾ ದರ್ಶನದಂತೆ ಅಥವಾ ಜೀವನ ಸಂಸ್ಕೃತಿಯಂತೆ ಬಾಳನ್ನು ಪರಿಭಾವಿಸುವ ಕ್ರಮ ಎದ್ದುಕಾಣುತ್ತದೆ. ಮನುಷ್ಯ, ಮನುಷ್ಯ ಪ್ರಯತ್ನಗಳ ಬಗ್ಗೆ ಆದರ ಕಂಡುಬರುತ್ತದೆ. ಪ್ರಕೃತಿಯ ನಡುವಿನ ಬದುಕು ಗಟ್ಟಿತನದ್ದು. ಇಲ್ಲಿ ಇಡಿಯಾಗಿ ಬಾಳನ್ನು ಕಟ್ಟಿಕೊಳ್ಳುವ ಕಲೆಗಾರಿಕೆ ಸಾಧಿತವಾಗುವುದೆಂಬ ನಂಬಿಕೆ ಈ ಕವಿಯ ಕಾವ್ಯದರ್ಶನದಲ್ಲಿ ಕಾಣಿಸುತ್ತದೆ. ಇವರ ಒಳಗಿನ ಅನುಭವಗಳ ಆವೇಶವೇ ಇವರ ಕಾವ್ಯವೂ ಆಗಿದೆ. ಸಾಮಾಜಿಕ ವಿಘಟನೆ, ಆರ್ಥಿಕ ಸಂಕಷ್ಟಗಳು, ನಗರೀಕರಣ, ಇವೆಲ್ಲ ಹುಟ್ಟಿಸುವ ಅನಾಥ ಪ್ರಜ್ಞೆಯನ್ನು ಮೆಟ್ಟಿ ಜೀವನೋತ್ಸಾಹದಲ್ಲಿ ಬದುಕು ಮತ್ತು ಕಾವ್ಯವನ್ನು ಸಂಘಟಿಸಿಕೊಳ್ಳುವಲ್ಲಿ ಕವಿಯ ಆತ್ಮಶಕ್ತಿ ಪ್ರಕಟವಾಗುತ್ತದೆ. ಇದರಿಂದಾಗಿ ಈ ಕವಿಯದು ವಿಘಟಿತ ಸಂವೇದನೆಯಲ್ಲ, ಸಂಘಟಿತ ಸಂವೇದನೆ. ಇದನ್ನೇ 'ಮೂವತ್ತು ಮಳೆಗಾಲ'ದಲ್ಲಿನ ಕವಿತೆಗಳು ತೋರಿಸಿಕೊಡುತ್ತವೆ.

ಮಳೆಗಾಲ ಎಂಬುದಕ್ಕೆ ಮಳೆ ಬರುವ ಕಾಲ ಎಂಬುದು ಸಾಮಾನ್ಯಾರ್ಥ. ಇದು ಬಿತ್ತನೆಯ ಕಾಲವೂ ಆಗಿದೆ. ಹಾಗೆಯೆ ಬೆಳೆ ಬೆಳೆಯುವ ಕಾಲವೂ ಆಗಿದೆ. ಬೆಳೆಗಳ ನಡುವಿನ ಕಳೆ ತೆಗೆಯುವುದೂ ಈಗಲೆ. ಸುಖ, ಸಮೃದ್ಧಿಯ ಕನಸು ಮೂಡುವುದೂ ಮಳೆಗಾಲದಲ್ಲೆ. ನೆರೆಯ ಭೀತಿ ಹುಟ್ಟಿಸುವುದೂ ಮಳೆಗಾಲವೇ. ಇದು ವೆಂಕಟೇಶಮೂರ್ತಿಯವರ ಕಾವ್ಯಕ್ಕೆ ರೂಪಕವಾಗಿ ನಿಲ್ಲುವ ಶೀರ್ಷಿಕೆ.

'ಮೂವತ್ತು ಮಳೆಗಾಲ' ಕೃತಿ ಇಟ್ಟುಕೊಂಡೂ ವೆಂಕಟೇಶಮೂರ್ತಿಯವರ ಕಾವ್ಯ ಏನು ಎಂಬ ಪ್ರಶ್ನೆ ಎದ್ದರೆ ಉತ್ತರಕ್ಕೆ ಈ ಕವಿಯ ಕಾವ್ಯದೊಂದಿಗೆ ಕನ್ನಡದ್ದಾಗಿರುವ ಭಾರತೀಯ ಕಾವ್ಯವನ್ನು ತೆರೆಯಬೇಕಾಗುತ್ತದೆ.

■ ಸ. ರಘುನಾಥ : ಶ್ರೀ ಲಕ್ಷ್ಮೀ ಪ್ರಾವಿಷನ್ ಸ್ಟೋರ್ಸ್ ರಸ್ತೆ, ರಾಮಕೃಷ್ಣ ಬಡಾವಣೆ
ಶ್ರೀನಿವಾಸಪುರ-೫೬೩ ೧೩೫, ಜಿಲ್ಲೆ- ಕೋಲಾರ ■

ಅಮೇರಿಕಾ.... ಅಮೇರಿಕಾ!!

ಮಕ್ಕಳ ಏಕಾಂಕ ನಾಟಕ– ಅಂದರೆ
ಮಕ್ಕಳು ಮಾಡಬಹುದಾದ, ಹಿರಿಯರು ನೋಡಬೇಕಾದ ನಾಟಕ

ದಮಯಂತಿ ನರೇಗಲ್ಲ

ಪಾತ್ರಗಳು :

ಪಾಸ್‌ಪೋರ್ಟ್ ಅಧಿಕಾರಿ ಮತ್ತು ಒಬ್ಬ ಸಿಪಾಯಿ,
ಕಾಶಿಯ ವಿಶ್ವೇಶ್ವರ, ದ್ಯಾಮವ್ವ, ದುರಗವ್ವ, ಕರಿಯಮ್ಮ,
ರಾಮ, ಸೀತೆ, ಲಕ್ಷ್ಮಣ, ವಿಷ್ಣು, ಲಕ್ಷ್ಮಿ, ಗಣಪತಿ, ನಾರದ, ಹನುಮಂತ

ದೃಶ್ಯ : ೧

ಪಾಸ್‌ಪೋರ್ಟ್ ಆಫೀಸು. ಒಬ್ಬ ಅಧಿಕಾರಿ ಟೇಬಲ್ ಮುಂದೆ ಕುಳಿತಿದ್ದಾನೆ. ಬಾಗಿಲಲ್ಲಿ ಸಿಪಾಯಿ ಸ್ಟೂಲೊಂದರ ಮೇಲೆ ಕುಳಿತು ನಿದ್ದೆ ಹೊಡೆಯುತ್ತಿದ್ದಾನೆ. ಒಂದು ಬದಿಯಿಂದ ಗಣಪತಿ, ಮಾರುತಿ ಮಾತನಾಡುತ್ತ ಬರುತ್ತಾರೆ. ಸಿಪಾಯಿ ನಿದ್ದೆ ಹೊಡೆಯುತ್ತಿದ್ದುದನ್ನು ಕಂಡು ಅವನನ್ನೆಚ್ಚರಿಸದೇ ಒಳಗೆ ಹೋಗುವ ಪ್ರಯತ್ನದಲ್ಲಿದ್ದಾರೆ. ಆಗ ಸಿಪಾಯಿ ಗಕ್ಕನೇ ಎಚ್ಚೆತ್ತು ಅವರನ್ನು ಬಾಗಿಲಲ್ಲಿ ತಡೆಯುತ್ತಾನೆ.

ಸಿಪಾಯಿ : ಏ ಯಾರ್ರೀ ನೀವು? ಬಡಾ-ಬಡಾ ಒಳಗಽ ಹೊಂಟೀರಲ್ಲಾ ಮುಖ್ಯಮಂತ್ರೀ ಮಕ್ಕಳ ಹಾಂಗ? ಏನ ಕೆಲಸಾ, ಯಾರ ಬೇಕು ನಿಮಗ?

ಗಣಪತಿ : ಅರೇ ಇವನಽ, ನಮ್ಮನ್ನ ಯಾರು ನೀವು ಅಂತ ಕೇಳತೀಯಲ್ಲೋ? ನಮ್ಮನ್ನ ನೋಡಿದರ ತಿಳ್ಯೂದುಲ್ಲೇನು ನಾವು ಯಾರು ಅಂತ?

ಮಾರುತಿ : ಎಲ್ಲೀ ಅವ್ವನೋ ನೀನು? ಇದಽ ದೇಶದವನಽ ಹೌದೋ ಅಲ್ಲೋ...? ಅಲ್ಲೋ, ಗಣೇಶಾ - ಮಾರುತಿ ಗುರುತು ಹಿಡೀದೇ ಇದ್ದವರು ಯಾರರಽ ಇದ್ದಾರೇನೋ ಈ ದೇಶದಾಗ?

ಸಿಪಾಯಿ : (ಅಚ್ಚರಿಯಿಂದ ಅವರ ಸುತ್ತಲೂ ತಿರುಗುತ್ತ) ಹೌದ್ರೀ, ಈ ಸೊಂಡೀ, ಈ ಬಾಲಾ ಎಲ್ಲಾ ನೋಡಿ ನನಗೂ ಸಂಶಯ ಬಂದಿತ್ತರೀ... ಅದಕ್ಕಽ ಕೇಳಿದೆ ಮತ್ತ... ಆದರಽ, ನೀವ್ಯಾಕ್ರಿಪಾ ಇಲ್ಲೆ? ಇಲ್ಯಾಕ ಬಂದೀರಿ ಅಂತ... ಗುಡ್ಯಾಗ ಆರಾಮ ಕೂತಲ್ಲೆ ಎರಡು ಹೊತ್ತು ಊಟ ಸಿಗತಽದ... ನಮ್ಮ ಹಾಂಗೇನು ದುಡೀಬೇಕಾಗತಽದಽ ನಿಮಗ? ಆರಾಮ ಉಂಡು ನಿದ್ದೀ ಹೊಡಿಯೂದು ಬಿಟ್ಟು ಇಲ್ಯಾಕ ಬಂದ್ರೀ ಅಂತ...?

ಮಾರುತಿ : ಏ ಇಲ್ಲದ ಕಾರಭಾರಾ ಮಾಡಬ್ಯಾಡೋ ನೀನು... ಸರೀ ಅತ್ತಾಗ. ನಿಮ್ಮ ಸಾಹೇಬರ್‍ನ ಭೆಟ್ಟ್ಯಾಗಬೇಕಾಗೇದ. ನಮಗ ಪಾಸ್‌ಪೋರ್ಟ್ ಮಾಡಸೂದದ.

ಸಿಪಾಯಿ : ಪಾಸ್‌ಪೋರ್ಟ್ಽ? ನಿಮಗಽ...? (ಜೋರಾಗಿ ನಗುತ್ತಾ) ನಿಮಗೆಲ್ಲೆ ಹೋಗಬೇಕಾಗೇದ್ರೆಪಾ?

ಮಾರುತಿ : ನಮಗ ಎಲ್ಲೆರಽ ಹೋಗಬೇಕಾಗಿರವಲ್ಲತ್ಯಾಕ, ನಿನಗ್ಯಾತಕ್ಕ ಬೇಕು ಅವೆಲ್ಲಾ ಕಾರಭಾರಾ? ಬಿಡು ನಮ್ಮನ್ನ, ಒಳಗ ಹೋಗಿ ಸಾಹೇಬರಿಗೆಲ್ಲಾ ಹೇಳ್ತೀವಿ.

ಗಣಪತಿ : (ಪಿಸುದನಿಯಲ್ಲಿ) ಮಾರುತೀ, ಸ್ವಲ್ಪ ಸುಮ್ಮನಿರೋ ನೀನು. ಹಿಂಗ ತಲಿತಿರಕನ ಹಾಂಗ ಮಾಡಬ್ಯಾಡಾ... ನಾ ಮಾತಾಡ್ತೀನಿ ಸುಮ್ಮನಿರು... ಇಲ್ಲೂ ಎಲ್ಲಾ ನಮ್ಮ ಗುಡೀವಳಗ ಇದ್ದಹಾಂಗsss ಇರತsದ ಏನಪಾ, ಪೂಜಾರೀನ್ನ ಖುಶ್ ಮಾಡಿದ ಹೊರತು ಭಕ್ತರಿಗೆ ನಮ್ಮ ದರ್ಶನ ಎಲ್ಲ್ಯಾಗತದ ಹೇಳು? ಹಾಂಗs ನೋಡು, ನೀ ಸುಮ್ಮನಿರು, ನಾ ಎಲ್ಲಾ ನೋಡಿಕೋತೀನಿ. ಅಲ್ರೀ ಸಾಹೇಬರs...

ಸಿಪಾಯಿ : ಅರೇ ಇವನs, ನನಗs ಸಾಹೇಬರು ಅಂತೀಯಲ್ಲೋ, ಸಾಹೇಬರು ಒಳಗಿದ್ದಾರ.

ಗಣಪತಿ : ನಿಮ್ಮ ಆಫೀಸಿನ್ಯಾಗ ನೀವೂ ಸಾಹೇಬರs ಅಲ್ರೀ... ನಮ್ಮ ಗುಡೀವಳಗ ನಾವು ಸಾಹೇಬರು... ನಿಮ್ಮ ಆಫೀಸನ್ಯಾಗ ನೀವು ಸಾಹೇಬರು... ಹೌದೋ ಅಲ್ರೆಪಾ? ಈಗ ನೋಡ್ರೀ, ನಮಗ ಆದಷ್ಟು ಲಗೂ ಅಮೇರಿಕಾಕ್ಕ ಹೋಗಬೇಕಾಗೇದ. ಅದಕ್ಕ ನಮಗಿಬ್ಬರಿಗೂ ಪಾಸ್‌ಪೋರ್ಟ್ ಮಾಡಸ ಬೇಕಾಗೇದ ನೋಡ್ರಿ. ನೀವು ಒಂದ ಸ್ವಲ್ಪ ಸಹಾಯಾ ಮಾಡಿದರs...

ಸಿಪಾಯಿ : ಪಾಸ್‌ಪೋರ್ಟ್ ಮಾಡಸಬೇಕಾಗೇದ ಅಂತ ಸಾಹೇಬರ ಕೋಣ್ಯಾಗs ನುಗ್ಗೂದೇನು ಹಿಂಗ? ನೀವೂ ಶಾಣ್ಯಾರs ಅದೀರಲ್ಲಾ, ಹೋಗ್ರಿ, ಅಲ್ಲೆ ಲೈನಿನ್ಯಾಗ ನಿಲ್ಲರೀ ಹೋಗ್ರಿ... ಹೊರಗ ಲೈನ ಐತಿ ಅಲ್ಲಾ, ಅಲ್ಲೆ ನಿಂತು ನಿಮ್ಮ ಪಾಳಿ ಬಂದಾಗ ಫಾರ್ಮು ತಗೊಂಡು ಹೋಗ್ರಿ.

ಮಾರುತಿ : ಅರೇ ಇವನs, ಮತ್ತ ಅದs ಮಾತಾಡ್ತಾನಲ್ಲೋ... ಗಣಪ್ಪಾ, ಇವ್ನನ್ನ ಎತ್ತಿ ಒಯ್ದು ಹೊರಗಿಟ್ಟು ಬರ್ಲೇನೋ?

ಗಣಪತಿ : ಛೆ, ನಿನ, ಸುಮ್ಮನಿರೋ ಮಾರಾಯಾ, ಹಾಂಗೆಲ್ಲಾ ಹುಂಬತನಾ ಮಾಡಿ ನಡ್ಯೂದುಲ್ಲಾ ಇಲ್ಲೆ... ಸ್ವಲ್ಪ ಹೇಳಿಕೊಂಡು ಕೇಳಿಕೊಂಡು ಕೆಲಸ ಆಗಬೇಕಾಗತsದ... ಅಲ್ರೀ ಸಾಹೇಬರs... ಇಲ್ಲಿ ನೋಡ್ರಿ... (ಕಿಸೆಯಲ್ಲಿಂದ ಒಂದು ನೋಟು ತೆಗೆದು ಮರೆಮಾಡಿ ತೋರಿಸುವನು) ಸ್ವಲ್ಪ ನಮ್ಮ ಕೆಲಸಾ ಲಗೂ ಮಾಡಿಸಿಕೊಡ್ರೆಲ್ಲಾ, ಆ ಕ್ಯೂದಾಗಅದು ನಿಂತು ಮಾಡೂ ಅಷ್ಟು ವ್ಯಾಳ್ಯಾ ಇಲ್ಲರೀ ನಮಗ.

ಸಿಪಾಯಿ : (ಆ ನೋಟು ನೋಡಿ ಅಸಡ್ಡೆಯಿಂದ ಆ ಕಡೆಗೆ ತಿರುಗಿ) ಏ ಹೋಗ್ರೀ, ಹೋಗ್ರೀ, ಎಲ್ಲಾರ ಹಾಂಗ ಕ್ಯೂದಾಗ ನಿಲ್ಲರೀ... ನೀವೇನು ಮ್ಯಾಲಿನಿಂದ ಇಳದು ಬಂದೀರೇನು? ಅಷ್ಟ ಮಂದಿ ಲೈನ ಹಚ್ಚಿ ನಿಂತವರು ಮನಶ್ಯಾರು ಅಲ್ಲೇನು?

ಮಾರುತಿ : ಅದs ಮತ್ತ ಅವರು ಮನಶ್ಯಾರು... ನಾವು...

ಗಣಪತಿ : (ಅವನನ್ನು ತಡೆದು) ಅದು ಹಾಂಗಲ್ರೀ ಸಾಹೇಬರs. ಇಲ್ಲಿ ನೋಡ್ರೀ... (ಮತ್ತೆರಡು ನೋಟುಗಳನ್ನು ಜೋಡಿಸುವನು) ನಮಗ ಸ್ವಲ್ಪ ಲಗೂ ಕೆಲಸಾ ಮುಗಿಸಿಕೊಂಡು ಹೋಗಬೇಕ್ರೀ. ಮಧ್ಯಾಹ್ನ ನೇವಿದ್ಯದ ಹೊತ್ತಿಗೆ ಹೋಗಲಿಲ್ಲಾಂದರ ಉಪವಾಸನs ಆಗತsದ ನಮಗ ಇಡೀ ದಿನಾ...

ಮಾರುತಿ : (ಸಿಟ್ಟಿನಿಂದ) ಅಲ್ಲೋ, ನಮ್ಮನ್ನಽ ಪ್ಯಾಲಿಸಿಂದ ಇಳದು ಬಂದೀರೇನು ಅಂತ ಕೇಳತಾನಲ್ಲೋ... ಎಷ್ಟು ಸೊಕ್ಕು ಇಷ್ಟಗಽ? ಎಲ್ಲೀ ಪಾಸ್‌ಪೋರ್ಟು, ಎಲ್ಲೀ ವಿದೇಶಾ, ನಡೀ, ಏನೂ ಬ್ಯಾಡಾ, ಸುಮ್ಮನಽ ಹೋಗಿ ನಮ್ಮ-ನಮ್ಮ ಗುಡ್ಯಾಗ ಕೂಡೂಣು. ಇನ್ನೊಂದ ತಾಸಿನ್ಯಾಗ ನೇವಿದ್ಯಾ ಬರತದ ನನ್ನ ಗುಡೀಗೆ.

ಸಿಪಾಯಿ : (ಲಗುಬಗೆಯಿಂದ ಗಣಪತಿಯ ಕೈಯಿಂದ ನೋಟುಗಳನ್ನು ತೆಗೆದುಕೊಳ್ಳುತ್ತ) ಹೆ... ಹೆ... ಹಿಂಗ್ಯಾಕ ಗಡಿಬಿಡಿ ಮಾಡ್ತೀರಿ? ಬಂದವ್ರು ಬಂದೀರಿ, ಕೆಲಸಾ ಮುಗಿಸಿಕೊಂಡು ಹೋಗ್ರಿ. ತಡೀರಿ, ಇಲ್ಲೇ, ಸಾಹೇಬರನ ಕೇಳಿಬರ್ತೀನಿ. (ಒಳಗ ಹೋಗಿ ಒಂದೆರಡು ನಿಮಿಷಗಳಲ್ಲಿ ತಿರುಗಿ ಬಂದು) ಹ್ಞೂ, ಬರ್ರಿ, ಸಾಹೇಬರು ಕರೀತಾರ.

ಇಬ್ಬರೂ ಒಳಗ ಹೋಗುವರು. ಸಾಹೇಬರು ಹಣೆಗೆ ನಾಮ ವಗೈರೆ ಹಚ್ಚಿಕೊಂಡು ಸಾಕಷ್ಟು ದೈವಭಕ್ತರಂತೆ ಕಾಣುತ್ತಾರೆ. ಇವರಿಬ್ಬರನ್ನೂ ಕಂಡೊಡನೆ ಎದ್ದು,

ಸಾಹೇಬರು : ಓ... ಹೋ... ಹೋ, ಏನಿದು, ಇವತ್ತ ನಮ್ಮ ಆಫೀಸಿನ ಅಹೋಭಾಗ್ಯ... ನಮ್ಮ ಪೂರ್ವಜರ ಪುಣ್ಯಾ ಅನಬೇಕು, ನೀವಽ ಇಲ್ಲೀ ತನಕಾ ಬಂದು ದರ್ಶನಾ ಕೊಟ್ಟುಬಿಟ್ರಿ... (ಉದ್ದಂಡ ನಮಸ್ಕಾರ ಹಾಕುತ್ತಾನೆ) ಕೂಡ್ರಿ, ಕೂಡ್ರಿ, ಏನ ಕೆಲಸ ಇದ್ದರೂ ನಮ್ಮನ್ನ ಕರೀಬಾರದಽ? ಬರತಿದ್ವಿವಿ, ನೀವಽ ಇಲ್ಲೀ ತನಕಾ ಬರೂ ತ್ರಾಸ ಯಾಕ ತೊಗೊಂಡ್ರಿ? ಹ್ಞೂ, ಹೇಳ್ರಿ, ಏನ ಕೆಲಸ ಆಗಬೇಕಾಗೇದ?

ಗಣಪತಿ : ಆತು, ನಿಮಗರಽ ನಮ್ಮ ಗುರುತು ಹತ್ತಿತಲ್ಲಾ, ನೋಡ್ರೆಪಾ, ನಾವು ಇಬ್ಬರೂ ಅಮೇರಿಕಾಕ್ಕ ಹೋಗಬೇಕು ಅಂತ ಮಾಡೀವಿ... ಅದಕ್ಕಽ ಪಾಸ್‌ಪೋರ್ಟ್ ಮಾಡಸಬೇಕಾಗೇದ.

ಸಾಹೇಬರು : (ಒಮ್ಮೆಲೇ ದನಿ ಬದಲಿಸಿ. ಅಧಿಕಾರಿಯ ದನಿಯಲ್ಲಿ) ಪಾಸ್‌ಪೋರ್ಟಽ? ಅದಕ್ಕೆಲ್ಲಾ ಭಾಳ ದೊಡ್ಡ ಪ್ರೊಸೀಜರ್ ಅದ. ಅಲ್ಲಾ, ನೀವು ಅಮೇರಿಕಾಕ್ಕ ಹೊಂಟೀರಾ? ಇಲ್ಲೇನು ಕಡಿಮ್ಯಾಗೇದ ನಿಮಗ? ಹಿಂಗ್ಯಾಕ ನಮ್ಮ ದೇಶಾ ಏಕಾಏಕಿ ಬಿಟ್ಟ ಹೊಂಟೀರಿ?

ಗಣಪತಿ : ಏನ ಮಾಡೂದರೆಪಾ...? ಸಾಕಾಗಿ ಹೋಗೇದ ನೋಡ್ರಿ... ಈ ಹುಬ್ಬಳ್ಳಿ-ಧಾರವಾಡದ ನೀರಿನ ಬರದಿಂದ ಸಾಕಾಗಿ ಹೋಗೇದ... ತಿಂಗಳ-ತಿಂಗಳಗಟ್ಟಲೇ ಸ್ನಾನಾನಽ ಕಾಣೂದುಲ್ಲರೀ. ಮಂದಿ ಅಭಿಷೇಕಾ ಮಾಡೂದಽ ಬಿಟ್ಟುಬಿಟ್ಟಾರ, ಅದರ ಬದ್ಲೀ ಮತ್ತಷ್ಟು ರೊಕ್ಕಾನಽ ಹಾಕಿ ಹೋಗ್ತಾರ.

ಮಾರುತಿ : ಹೌದ ನೋಡ್ರಿ ಸಾಹೇಬರಽ, ಆ ರೊಕ್ಕದ್ದು ನಮಗೇನು ಉಪಯೋಗಾ, ಹೇಳ್ರಿ? ಪೂಜಾರೀ ಮನೀ ತುಂಬತದಽ ಅಷ್ಟಽ... ನಾವು-ನಾವು ಮತ್ತ ಮೈ ಕೆರಕೋತ ಕೂಡೂದಽ, ಸ್ನಾನ ಇಲ್ಲದಽ ಮೈ ನಾರಲಿಕ್ಕೆ ಹತ್ತೇದ ನೋಡ್ರಿ... ಇನ್ನ ಶಕ್ಯ ಇಲ್ರೆಪಾ ಇಲ್ಲೆ ಇರಲಿಕ್ಕೆ, ಲಗೂ ಪಾಸ್‌ಪೋರ್ಟ್ ಕೊಟ್ಟುಬಿಡ್ರಿ ನಮಗ.

ಸಾಹೇಬರು : ಹಿಂಗs... ಆದರs ಪಾಸ್‌ಪೋರ್ಟ್ ಅಂದರs ಸುಮ್ಮನs ಆಗೂದುಲ್ಲಾ, ಏನ್ರೆಪಾ, ವ್ಯಾಳ್ಯಾ ಹತ್ತತsದ. (ದನಿ ಎಳೆಯುವನು.)

ಸಿಪಾಯಿ : (ಕಿಸೆ ತಟ್ಟಿ ಸೂಚಿಸುತ್ತ) ಸಾಹೇಬರs, ಹೊರಗ ನೇವಿದ್ಯಾ ಎಲ್ಲಾ ಆಗೇದರೀ.

ಸಾಹೇಬರು : (ಸಮಾಧಾನಗೊಂಡು) ಹ್ಞಾ... ಹ್ಞಾ... ಹೌದs, ಕೂಡ್ರಿ, ಕೂಡ್ರಿ. ಫಾರ್ಮ ಕೊಡತೀನಿ, ತುಂಬಿ ಕೊಡ್ರಿ. ಮಲ್ಲೇಶೀ. ಫಾರ್ಮ ತಗದು ಕೊಡ್ರೋ ಕಪಾಟದಾಗಿಂದ. (ಸಿಪಾಯಿ ಫಾರ್ಮಗಳನ್ನು ತೆಗೆದುಕೊಡುವನು)

ಮಾರುತಿ : ಗಣಪ್ಪಾ, ನಂದೂ ಇಷ್ಟು ನೀನs ತುಂಬಿ ಬಿಡೋ, ಇದೆಲ್ಲಾ ಬರ್‍ಯೂದು-ಗಿರ್‍ಯೂದು ನನಗ ಬಗೀಹರಿಯೂದುಲ್ಲಾ. (ಗಣಪತಿ ಎರಡೂ ಫಾರ್ಮ ತುಂಬಿಕೊಡುವನು.)

ಗಣಪತಿ : ಯಾವಾಗ ಸಿಗಬಹುದು ಸಾಹೇಬರs ನಮ್ಮ ಪಾಸ್‌ಪೋರ್ಟು?

ಸಾಹೇಬರು : ಅದನ್ನೇನು ಖಾತ್ರೀ ಹೇಳ್ಳಿಕ್ಕೆ ಬರೂದುಲ್ಲೇನ್ರೆಪಾ, ಒಂದ ತಿಂಗಳೆರಡು ತಿಂಗಳರs ಬೇಕು... ಪೋಲೀಸ ತನಿಖಿ ಆಗಬೇಕು. ಪೋಲೀಸ ಸ್ಟೇಶನ್ನಿನಿಂದ ಚೆಕ್ ಮಾಡಲಿಕ್ಕೆ ಬಂದಾಗ ನಿಮ್ಮ-ನಿಮ್ಮ ಗುಡ್ಯಾಗs ಇರಲಿಕ್ಕೆ ಬೇಕು ಮತ್ತ ನೀವು... ಎಲ್ಲೆರs ಕಾಲೇಜ ಹುಡಿಗ್ಯಾರ ಹಿಂದ ತಿರಗಲಿಕ್ಕೆ ಹೋಗಬ್ಯಾಡ್ರಿ... ಹಾ... ಹಾ... ಹಾ... (ತನ್ನ ಮಾತಿಗೆ ತಾನೇ ನಗುವನು.)

ಗಣಪತಿ + ಮಾರುತಿ : ಛೆ, ಏನ ಹೇಳ್ತೀರಿ ಸಾಹೇಬರs? ನಾವೇನು ಅಂಥವರು ಅಲ್ಲ ಬಿಡ್ರಿ.

ಸಾಹೇಬರು : ನನಗ ಹೇಳ್ತೀರೇನು ನೀವು? ನಾ ದಿನಾ ನೋಡ್ತೀನಿ ಕಾಲೇಜಿಗೆ ಹೋಗೂ ಹಾದೀಮ್ಯಾಲ... ಹೆಣ್ಣು ಹುಡಿಗ್ಯಾರ ಹಿಂದ ನಿಮ್ಮ ಅನೇಕ ಅವತಾರಗೋಳು ಹ್ಯಾಂಗ ಬೆನ್ನ ಹತ್ತಿರತಾವ ಅಂತ...

ಗಣಪತಿ + ಮಾರುತಿ : ಛೆ, ಏನಂತೀರೀ ಸಾಹೇಬರs... ನಮಗ ಮತ್ತ ಅಷ್ಟ ಧೈರ್ಯಾ ಇದ್ದರs ಇಷ್ಟ ದಿನಾ ಬ್ರಹ್ಮಚಾರೀ ಆಗಿ ಉಳೀತಿದ್ವಿವಿ ಏನ್ರಿ? ಆತಲ್ರೀ, ಹೊತ್ತಾತು, ಹೋಗಿ ಬರ್ತೀವಿ, ನಿಮ್ಮ ಉಪಕಾರ ಭಾಳ ಆತು, ನಮಸ್ಕಾರಾ.

ಸಾಹೇಬರು : ನಮಸ್ಕಾರಾ, ಚ್ಯಾಷ್ಟೀ ಮಾಡಿದೆ ಅಂತ ಸಿಟ್ಟಿಗೇಳಬ್ಯಾಡ್ರೆಪಾ ಮತ್ತ...

ಗಣಪತಿ + ಮಾರುತಿ : ಛೆ, ಛೆ, ಸಿಟ್ಯಾಕರೀ... ನಮ್ಮ-ನಮ್ಮವರು ಅಂದಮ್ಯಾಲ ಇದೆಲ್ಲಾ ನಡಿಯೂದsರೆಪಾ... ಬರ್ತೀವಿ.

ಇಬ್ಬರೂ ಹೊರಬೀಳುವರು. ಹೊರಗೆ ಬರುತ್ತಿದ್ದಂತೆಯೇ ಎದುರಿಗೆ ಕಾಶಿಯ ವಿಶ್ವೇಶ್ವರ, ರಾಮ, ಸೀತೆ, ಲಕ್ಷ್ಮಣರು ಭೆಟ್ಟಿಯಾಗುವರು.

ಅರೇ ನೀವು... ಇಲ್ಲೆ! ನೀವೂ...?

ವಿಶ್ವೇಶ್ವರ : ಗಜಾನನಾ... ನೀ ಇಲ್ಲೆ? ಎಲ್ಲೆ ಹೊಂಟೀದ್ಯೋ? ಏನೂ ಹೇಳೇ ಇಲ್ಲಲ್ಲಾ ನನಗ?

ಗಣಪತಿ : ಇನ್ನೂ ಈಗs ಎಲ್ಲೆ ಹೊಂಟೇನಿ ಅಪ್ಪಾ? ಪಾಸ್‌ಪೋರ್ಟ್ ಸಿಕ್ಕಮ್ಯಾಲ ಹೇಳಿದರಾತು ಅಂದಕೊಂಡಿದ್ದೆ.

ವಿಶ್ವೇಶ್ವರ : ಹ್ಞಾ, ಅದs ನೋಡು... ನಿನಗೂ ಈ ದೇಶದ ಮಕ್ಕಳ ಗುಣಾ ಬರಲಿಕ್ಕೆ ಹತ್ತ್ಯಾವ ಹಾಂಗಾದರ... ಎಲ್ಲಾ ಮಾಡಿ ಮುಗಿಸಿ ಆಮ್ಯಾಲ ಅವ್ವಾ-ಅಪ್ಪಗ ಹೇಳೂದು...

ಗಣಪತಿ : ಹಾಂಗಲ್ರೀ ಅಪ್ಪಾ, ಪಾಸ್‌ಪೋರ್ಟ್ರs ಸಿಗತದೋ ಇಲ್ಲೋ... ಸುಮ್ಮನs ಈಗಿಂದನs ಯಾಕ ನಿಮಗ ಕಾಳಜೀ ಅಂತ ಹೇಳಿದ್ದಿಲ್ಲಾ... ನಾನು – ಮಾರುತಿ ಇಬ್ಬರೂ ಅಮೇರಿಕಾಕ್ಕ ಹೋಗಬೇಕಂತೀವಿ.

ರಾಮು : ಮಾರುತೀ, ನೀನೂ...! ಯಾಕ್ರೋ, ಏನಾತು ನಿಮಗ, ಹಿಂಗ್ಯಾಕ ಒಮ್ಮಿಂದೊಮ್ಮಿಗಿಲೇ ಎದ್ದಿರಿ?

ಮಾರುತಿ : ಸ್ವಾಮೀ, ಏನ ಹೇಳ್ಳಿ ನಿಮಗ? ಈಗ ನಮ್ಮ ಪರಿಸ್ಥಿತಿ ಭಾಳ ಕೆಟ್ಟsದ ನೋಡ್ರಿ, ನಿಮಗ ಗೊತ್ತಿಲ್ಲದ್ದು ಏನದs? ಎಂಟ-ಹತ್ತು ವರ್ಷಾತು... ಹುಬ್ಬಳ್ಳಿ-ಧಾರವಾಡದಾಗ ನೀರಿಲ್ಲಾ... ಸ್ವಾಮೀ, ನಮಗ ತಿಂಗಳಾನಗಟ್ಟಲೇ ಸ್ನಾನ ಇಲ್ಲಾ... ಮೈ ಹೊಲಸು ನಾರಲಿಕ್ಕೆ ಹತ್ತೇದ, ಸಾಕಾಗಿ ಹೋಗೇದ ಜೀವನಾ...

ಗಣಪತಿ : ಎಲ್ಲಾರೂ ಅಂತಾರ– ಅಮೇರಿಕಾ ಭಾಳ ಸ್ವಚ್ಛ ಅದ, ಬೇಕಾದಷ್ಟು ನೀರು-ಗಿಡಾ-ಮರಾ ಅವ ಅಂತ, ಅದಕ್ಕ ಅಲ್ಲೇ ಹೋಗಿಬಿಡೂಣು ಅಂತ ವಿಚಾರಾ ಮಾಡೀವಿ.

ಸೀತಾ : ಛೋಲೋ ಆತು ನೋಡು... ನನಗ ಭಾsಳ ಚಿಂತಿ ಹತ್ತಿತ್ತು... ಅಲ್ಲಿ ಹೋದಮ್ಯಾಲೆ ಏನು ಗತೀ ಅಂತ... ಅಲ್ಲಿ ಕೆಲಸಕ್ಕ ಯಾರೂ ಸಿಗೂದುಲ್ಲಂತ... ಮಾರುತೀನೂ ನಮ್ಮ ಜೋಡಿ ಬರತಾನ ಅಂದಮ್ಯಾಲ ಏನೂ ಕಾಳಜೀ ಇಲ್ಲಾ, ನೋಡ್ರಿ...

ಮಾರುತಿ : (ಸ್ವಗತ) ಅಂದರs ಅಲ್ಲಿ ಹೋದರೂ ನನಗೇನು ಸೂಟಿಯಿಲ್ಲಾ ಅಂಥಂಗಾತು. (ಪ್ರಕಟವಾಗಿ) ನಿಮ್ಮ ಸೇವಕ ನಿಮ್ಮ ಸೇವಾಕ್ಕ ಯಾವಾಗಲೂ ತಯಾರು, ತಾಯೀ... (ಮೊಣಕಾಲೂರಿ ಕುಳಿತು ನಮಸ್ಕರಿಸುವನು.)

ಗಣಪತಿ : ಅಂದರs ನೀವೂ ಎಲ್ಲಾರೂ... ಅಪ್ಪಾ, ನೀವು... ನೀವೂ ಎಲ್ಲಿರs ಹೊಂಟೀರೇನು?

ವಿಶ್ವೇಶ್ವರ : ಹ್ಞೂ, ನಾನೂ ಅಮೇರಿಕಾಕ್ಕs ಹೊಂಟೀನಿ... ನಂದೂ ಪರಿಸ್ಥಿತಿ ಇತ್ತಿತ್ತಲಾಗ ಭಾsಳ ಗಂಭೀರ ಆಗೇದೋ ಗಣೇಶಾ... ಅಲ್ಲೋ, ಮೊದಲ ಎಲ್ಲಾರೂ ವಯಸ್ಸಾದ ಕೂಡಲೇ ಸಾಯೂದರಾಗs ಒಮ್ಮೆ ಕಾಶಿಗೆ ಹೋಗಿಬರಬೇಕು ಅಂತಿದ್ದರೋ ಇಲ್ಲೋ...

ಗಣಪತಿ : ಹೌದು-ಹೌದು, ಬರೇ ಅನ್ನೂದು ಯಾಕ, ಹೆಚ್ಚಾಗಿ ಎಲ್ಲಾರೂ ಸಾಯೂದರಾಗs ಕಾಶೀಯಾತ್ರಾ ಮಾಡೇ ಮಾಡತಿದ್ದರು...

ವಿಶ್ವೇಶ್ವರ : ಆದರs ಈಗ ನೋಡು, ಕಾಲಾ ಹ್ಯಾಂಗ ಬದಲಾಗೇದ. ಈಗs ಸಾಯೂದರಾಗs ಒಮ್ಮೆ ಅಮೇರಿಕಾಕ್ಕ ಹೋಗಿಬರಬೇಕು ಅಂತ

ಧಡಪಡಸತಾರ ಮಂದಿ... ಎಲ್ಲಾ ಮುದುಕರೂ ಅಲ್ಲೇ ಓಡತಾರಪಾ, ಕಾಶಿಗೆ ಬರಲಿಕ್ಕೆ ಯಾರಿಗೆ ಟೈಮದ? ಇನ್ನೇನು ಮಾಡೂದಪಾ, ಭಗವಂತ ಇದ್ದಲ್ಲೆ ಭಕ್ತ ಬರದಿದ್ದರs ಭಕ್ತ ಇದ್ದಲ್ಲೇ ಭಗವಂತ ಹೋಗಬೇಕು ನೋಡು... ಅಂತs ನಾನs ಅಮೇರಿಕಾಕ್ಕ ಹೊಂಟೇನಿ...

ಗಣಪತಿ : ಆವರs ಅಲ್ಲೀ ಮಂದಿಗೇನು ಕಾಶೀ ವಿಶ್ವೇಶ್ವರನ ಕಿಮ್ಮತ್ತು, ಅಪಾ... ಅಲ್ಲೇ ಯಾರ ಬರತಾರ ದರ್ಶನಕ್ಕ?

ವಿಶ್ವೇಶ್ವರ : ಅಲ್ಲೀ ಮಂದೆಲ್ಲೋ... ಇಲ್ಲೀ ಅವರs ನನ್ನ ಭಕ್ತರು... ಅಲ್ಲಿರs ನನ್ನ ದರ್ಶನಕ್ಕ ಬರ್ತಾರೇನೋ ನೋಡೂಣು... ಇಂಡಿಯಾದಿಂದ ಹೋದವರೆಲ್ಲಾ ಸತಗೋತ ನಾಯಗರಾ ನೋಡಲಿಕ್ಕೆ ಹೋಗೇ ಹೋಗ್ತಾರಲ್ಲಾ, ಹಾಂಗ ನನ್ನೂ ನೋಡಲಿಕ್ಕೆ ಬಂದಾರು ಒಂದ ಸಲಾ...

ಮಾರುತಿ : ಸ್ವಾಮೀ ರಾಮಚಂದ್ರಾ, ನಿಮಗೇನು ಭಕ್ತರು ಕಡಿಮ್ಯಾಗ್ಯಾರ, ಸ್ವಾಮೀ, ಇಲ್ಲೇ...? ಎಂಥೆಂಥಾ ರಾಜಕಾರಣಿಗಳು ನಿಮ್ಮ ಹೆಸರಿನ ಮ್ಯಾಲೇ ಜೀವನಾ ಮಾಡ್ತಾರ...

ರಾಮ : ಏನು ಹೇಳ್ಳೆಪಾ ಮಾರುತೀ, ನನಗ ಖರೇ ಜೀವನs ಬ್ಯಾಸರಾಗಿ ಹೋಗೇದ ನೋಡು...

ಮಾರುತಿ : ಯಾಕ ಸ್ವಾಮೀ, ಅಂಥಾದೇನಾತು, ನಮ್ಮ ದೇಶದಾಗ?

ರಾಮ : ಮಂದೀ ವಳಗ ಖರೇ ಭಕ್ತೀ - ಪ್ರೇಮಾ ಉಳದೇ ಇಲ್ಲೋ... ರಾಮರಾಜ್ಯಾ ಮಾಡತೀವಿ ಅಂತ ಎಂದಿನಿಂದ ಹೇಳಕೋತ ಬಂದಾರ, ಇವರು ಇಲ್ಲೀ ತನಕಾ ಮಾಡಿದ್ದೇನಪಾ, ಬರೇ ಕಚ್ಚ್ಯಾಟಾ - ಬಡದಾಟಾ... ಒಬ್ಬರನೊಬ್ಬರು ಹೊಡಿಯೂದು - ಕೊಲ್ಲೂದು.

ವಿಶ್ವೇಶ್ವರ : ಹೌದೋ, ನನ್ನಂಥಾ ನನಗs ಈ ಸಂಹಾರಾ-ನಾಶಾ ನೋಡಿ-ನೋಡಿ ಸಾಕಾಗೇದ ನೋಡು. ಏನೂ ಕಾರಣ ಇಲ್ಲದs ಒಬ್ಬರನೊಬ್ಬರು ಕೊಲ್ತಾರಪಾ... ಬರೇ ಊರ ತುಂಬ ಗುಡಿ ಕಟ್ಟತಾರ, ಮೈತುಂಬ ಭಂಗಾರಾ ಹಾಕತಾರ, ಗುಡೀ ತುಂಬ ರೊಕ್ಕಾ ಸುರವತಾರ. ಏನ ಮಾಡೂದದsನೋ ಅದನ್ನ ತೊಗೊಂಡು?

ರಾಮ : ಅದs ನಾನೂ ಹೇಳೂದು... ಬರೇ ಓಣಿ-ಓಣಿಗೆ ಗುಡೀ ಕಟ್ಟಿದರ ರಾಮರಾಜ್ಯ ಆಧಂಗಾತೇನು? ಎಲ್ಲೆ ತಮ್ಮ ತಮ್ಮಲ್ಲೇ ಪ್ರೀತಿಯಿಲ್ಲಾ, ವಿಶ್ವಾಸ ಇಲ್ಲಾ, ಅಲ್ಲೆ ನಮಗೆಂಥಾ ಪ್ರೀತಿ ಸಿಗೂದದs ಹೇಳು? ಮತ್ತ-ಮತ್ತ ನಮ್ಮ ಸಲುವಾಗಿ ಗುಡೀ ಕಟ್ಟಬೇಕು ಅಂತ ಹೊಡದಾಡಿ ಸಾಯತಾರ. ಇಂಥಾ ಮೂರ್ಖ ಮಂದೀ ನಡುವ ಯಾಕ ಇರಬೇಕು ಹೇಳು? ನಾವೂ ಅದಕ್ಕs ಆದಷ್ಟು ಲಗೂ ಅಮೇರಿಕಾಕ್ಕ ಹೋಗಿಬಿಡಬೇಕಂತೀವಿ.

ಸೀತಾ : ಅಮೇರಿಕಾದಾಗ ಇದ್ದವರಿಗೆ ಇನ್ನೂ ದೇವರ ಮ್ಯಾಲ ಎಷ್ಟು ಭಕ್ತೀ ಅದ ಅನ್ನೂದನ್ನ ನೋಡಿದಿರೇನು, ಮೊನ್ನೆ ಟಿ.ವಿ.. ಮ್ಯಾಲ ತೋರಸತಿದ್ದರಲ್ಲಾ,

ಆ ನ್ಯೂ ಜರ್ಸೀ ಪೆಳಗಿನ ಗುಡ್ಯಾಗ ಎಷ್ಟ ತರುಣ ದಂಪತಿಗಳು — ಜೀನ್ಸ್-ಟೀ-ಶರ್ಟ ಹಾಕ್ಕೊಂಡಿದ್ದರು ಖರೇ— ಆದರೂ ಎಷ್ಟ ಭಕ್ತೀಲೇ ಭಜನೀ ಮಾಡತಿದ್ದರು, ಹ್ಯಾಂಗ ಗಲ್ಲಾ ಗಲ್ಲಾ ಬಡಕೊಂಡು ಸಾಷ್ಟಾಂಗ ನಮಸ್ಕಾರಾ ಹಾಕತಿದ್ದರು...

ಲಕ್ಷ್ಮಣ : ಹೌದು, ಖರೇನ, ನಾನೂ ನೋಡೀನಿ, ಪರದೇಶದಾಗಿದ್ದ ಮಂದೀಗೇ ಇತ್ತಿತ್ತಲಾಗ ದೇವರ ಮ್ಯಾಲ ಭಕ್ತೀ ಜಾಸ್ತಿ ಆಗೇದ. ಇಪs ಹುಡುಗರು ಇಲ್ಲಿದ್ದಾಗ ದೇವರ ಗುಡೀ ಕಡೆ ತಿರಗಿ ಸುದ್ದಾ ನೋಡತಿದ್ದಿಲ್ಲಾ.

ಗಣಪತಿ : ಹಾಂಗಾದರ ನೀವೂ ಎಲ್ಲಾ ಪಾಸ್‌ಪೋರ್ಟ್ ಸಲುವಾಗೇ ಬಂದೀರಿ... ಅಲ್ಲಿ ನೋಡ್ರಿ, ನಮ್ಮ ಅವ್ವಂದಿರೂ ಬಂದ್ರು.

ದುರಗವ್ವ, ದ್ಯಾಮವ್ವ, ಕರಿಯಮ್ಮ ಇತ್ಯಾದಿ ದೇವಿಯರು ಬರುವರು.

ದ್ಯಾಮವ್ವ : ಅಯ್ಯs, ನೋಡ ಯವ್ವಾ, ಇಲ್ಲೆ ದೊಡ್ಡ ಜಾತ್ರೀನ ಕೂಡೇತಿ. ಈಶ್ವರಾ, ಗಣಪ್ಪಾ, ರಾಮಾ ಸೀತಾ ಎಲ್ಲಾರೂ ಇದ್ದಾರ.

ದುರಗವ್ವ : ನೀವೂ ಎಲ್ಲಾರೂ ಪಾಸ್‌ಪೋರ್ಟ್ ತೊಗೊಳ್ಳಾಕ ಬಂದೀರೇನು?

ಸೀತಾ : ಹೌದs, ದುರಗಮ್ಮಾ, ಮತ್ತ ನೀವು?

ದುರಗವ್ವ : ನಾವೂ ಅದಕ್ಕs ಬಂದೀವೇ ತಾಯೀ, ಒಂದ ನಾಕ ದಿನಾ ಅಮೇರಿಕಾಕ್ಕ ಹೋಗಿ ಬರಬೇಕಂತ ಮಾಡೀವಿ.

ವಿಶ್ವೇಶ್ವರ : ನೀವ್ಯಾಕ ಹೊಂಟೀರಿ ಅಮೇರಿಕಾಕ್ಕ? ನಿಮಗೇನು ಕಡಿಮ್ಯಾತು ಮತ್ತ ಇಲ್ಲೆ? ದಿನಾ ಸಾಕಷ್ಟು ಮನಶ್ಯಾರ ಬಲೀನ ಬೀಳತಾವಲ್ಲಾ ಈಗ?

ದ್ಯಾಮವ್ವ : ಅಯ್ಯs ಮಹಾದೇವಾ, ನಿನಗೇನು ಗೊತ್ತಿಲ್ಲದ್ದ ಅದsನs? ಅವೆಂಥಾ ಬಲೀನೋ, ಮಾರಾಯಾ? ಮನಸಿನ್ಯಾಗ ದ್ವೇಷಾ ಇಟಗೊಂಡು ಕೊಂದದ್ದೇನು ಬಲೀ ಆಗತದೇನು? ಅದು ಯಾವ ದೇವರಿಗೆ ಪ್ರೀತಿ ಆಗತsದ, ಹೇಳು?

ದುರಗವ್ವ : ಏನ ಬಿಡೋ ಮಾರಾಯಾ, ಇತ್ತಿತ್ತಲಾಗ ಈ ದೇಶದಾಗ ನಮ್ಮನ್ನ ಯಾರೂ ಕೇಳದ ಹಾಂಗs ಆಗ್ಯಾರ. ಹುಡುಗರಿಗೆ ಗೊಬ್ಬರಾ ಗಣಜಲೀ ಎದ್ದರs ಜನಾ ನಮಗ ನೀರು ಹಾಕಲಿಕ್ಕೆ ಓಡಿ ಬರತಿದ್ದರು. ಪ್ರೀತಿಂದ ಅಡಿಗೀ ಮಾಡಿಕೊಂಡು ಬಂದು ಎಡೀ ತೋರಸತಿದ್ದರು. ಈಗೇನದನೋ, ವರ್ಷಾನುಗಟ್ಟಲೆ ಯಾರೂ ನಮ್ಮ ಗುಡೀ ಕಡೆ ಸಹಿತ ಹಾಯೂದಿಲ್ಲಾ.

ದ್ಯಾಮವ್ವ : ಅದಕ್ಕs ಒಂದ ಗುಂಪು ಕಟಿಗೊಂಡು ಅಮೇರಿಕಾಕ್ಕ ಹೋಗಿಬರೂಣು ಅಂತ ಹೊಂಟೇವಿ.

ಕರಿಯಮ್ಮ : ಅಲ್ಲೆ ಒಂದೆರಡು ತಿಂಗಳ ಅಡ್ಯಾಡಿ ಸಾಂಸ್ಕೃತಿಕ ಕಾರ್ಯಕ್ರಮಾ ಮಾಡಿ ಬರೂಣು ಅಂದಕೊಂಡೀವಿ.

ಸೀತಾ : ಅಯ್ಯಯ್ಯs, ಭಾರೀ ಭೋಲೋ ಐಡಿಯಾ ನೋಡು, ನಿಮ್ಮೆಲ್ಲಾರ ಈ ಎಥ್ನಿಕ್ ವೇಷಾ, ಫೋಕ್ ಡಾನ್ಸು —ಹಾಡು ಎಲ್ಲಾ ಅಲ್ಲೀ ಮಂದಿಗೆ ಹುಚ್ಚು ಹಿಡಸತಾವ ನೋಡು.

ಕರಿಯಮ್ಮ : ಹೌದs, ನಮ್ಮ ಕಾರ್ಯಕ್ರಮಾ ನೋಡಲಿಕ್ಕೆ ಮಂದಿ ಬರ್ತಾರ ಅಂತೀಯಾ?

ಸೀತಾ : ಖಾತ್ರೀ ಬರತಾರ, ನಿಮ್ಮ ಕಾರ್ಯಕ್ರಮಾ ಅಲ್ಲೆ ಭಾರೀ ಪಾಪ್ಯುಲರ್ ಆಗತsದs, ಸಂಶಯನs ಬ್ಯಾಡ ನೋಡು.

ಗಣಪತಿ : ಸ್ವಲ್ಪ ತಡೀರಿ ಅವ್ವಗೋಳs, ಎಲ್ಲಾ ಛೊಲೋತ್ನ್ಯಾಗಿ ವಿಚಾರಾ ಮಾಡೀರೋ ಇಲ್ಲೋ...? ಅಲ್ಲೆಲ್ಲಾ ಹಾಂಗ ಬೇಕಾದವರು ಹೋಗಲಿಕ್ಕೆ ಬರೂದುಲ್ಲಾ. ಅಲ್ಲೀ ಅವರು ಯಾರರ ಸ್ಪಾನ್ಸರ್ ಮಾಡಬೇಕಾಗತsದ.

ಕರಿಯಮ್ಮ : ನಮಗೂ ಎಲ್ಲಾ ಗೊತ್ತದ ಏಳೋ, ಎಲ್ಲಾ ಕೇಳಿಕೊಂಡೀವಿ. ನಮ್ಮ ಗೆಳತಿ ಇದ್ದಾಳಲ್ಲಾ ಮೇರಿ... ಏನಂತಾರs, ಎಂತಾ ಮೇರಿ... ಏನದು...?

ಗಣಪತಿ : ವ್ಹರ್ಜಿನ್ ಮೇರಿ... ವ್ಹರ್ಜಿನ್ ಮೇರಿ ಅಂತಾರ.

ಕರಿಯಮ್ಮ : ಹ್ಞೂ, ಆಕೀನs ನೋಡ... ಭಾರೀ ಒಳ್ಳ್ಯಾಕಿದ್ದಾಳ ಬಿಡ... ಎಲ್ಲಾ ವ್ಯವಸ್ಥಾ ಮಾಡತೀನಿ ಇಲ್ಲೆ, ಬಂದಬಿಡ್ರಿ ನೀವು ಅಂತ ಹೇಳ್ಯಾಳ. ಆಕೀನs ಮತ್ತ ನಮಗಿದೆಲ್ಲಾ ತಲ್ಯಾಗ ಹಾಕಿದಾಕಿ —ಅಲ್ಲೀ ಜನರಿಗೆ ಹಳೇ ಕಾಲದ ವೇಷ-ಭೂಷಾ, ಹಾಡು-ಕುಣತಾ ಎಲ್ಲಾದರಾಗ ಭಾಳ ಆಸಕ್ತಿ ಅದ ಅಂತ.

ಗಣಪತಿ : ಹೌದs, ಹಾಂಗಾದರ ಆಕೀ ಇದನ್ನೂ ಹೇಳಿರಬೇಕಲ್ಲಾ, ಇಂಥಾ ಗುಂಪಿನ್ಯಾಗ ಹೋದವರು 'ಕಬೂತರ' ಹ್ಯಾಂಗ ಆಗತಾರ ಅಂತ.

ಎಲ್ಲರೂ : ಕಬೂತರ... ಕಬೂತರ ಆಗೂದು, ಅಂದರೇನೋ ಗಣಪ್ಪಾ? ಏನದು, ಬಿಡಿಸೇರs ಹೇಳು.

ಗಣಪತಿ : ಅರೇ, ನಿಮಗ್ಯಾರಿಗೂ ಏನೂ ಗೊತ್ತs ಇಲ್ಲೇನು? ಕಬೂತರ ಆಗೂದು ಅಂದರs ಪಾರಿವಾಳ ಆಗೂದು... ಸದ್ದಿಲ್ಲದ ಹಾರಿ ಹೋಗೂದು... ಯಾರಿಗೂ ತಿಳೀಧಂಗ.

ದ್ಯಾಮವ್ವ : ನೀ ಏನು ಮಾತಾಡತೀಯೋ ಏನೋ ಮಾರಾಯಾ, ನಿನ್ನ ಮಾತs ತಿಳ್ಯೂದುಲ್ಲಾ ತಗೀ ನಮಗ.

ಗಣಪತಿ : ದ್ಯಾಮವ್ವಾ, ಸುಮ್ಮನs ನಾಟಕಾ ಮಾಡಬ್ಯಾಡಾ. ನಿಮಗೆಲ್ಲಾ ಆಗಲೇ ನಿಮ್ಮ ಏಜಂಟರು ಇದನ್ನೆಲ್ಲಾ ತಿಳಿಸಿಕೊಟ್ಟಿರಬೇಕು ಬಿಡು.

ಎಲ್ಲರೂ : ಏ ಗಜಾನನಾ, ಏನು ಮಾತಾಡಲಿಕ್ಕೆ ಹತ್ತೀಯೋ? ನಮಗರs ಒಂದ ಸ್ವಲ್ಪ ತಿಳಿಸಿ ಹೇಳು

ಗಣಪತಿ : ನಿಮಗೂ ಹೇಳಬೇಕs, ಹೇಳ್ತೀನಿ ತೊಗೋಳ್ರಿ, ಪೇಪರು-ಗೀಪರು ಏನೂ ಓದೂದs ಇಲ್ಲಾ ಕಾಣತದ ನೀವ್ಯಾರೂ... ಈಗ ನಾಲ್ಕಾರು ತಿಂಗಳ ಹಿಂದ ಕೇಸು ನಡದಿದ್ದವು ನೋಡ್ರಿ... ಯಾರ ಅಕೀ, ಹಗಲೆಲ್ಲಾ ಫಾರೀನಿಗೆ ಕುಣೇಲಿಕ್ಕೆ ಹೋಗತಾಳಲ್ಲಾ... ಹ್ಞಾ... ಹ್ಞಾ... ಆಕೀನs, ಮಲ್ಲಿಕಾ ಸಾರಾಭಾಯಿ... ಮತ್ತ ಅವ್ನಾ ಹಾಡಕೋತ ಕುಣೇತಾನಲ್ಲೋ ಚಿತ್ರ-ವಿಚಿತ್ರ ವೇಷಾ ಹಾಕ್ಕೊಂಡು, ಆ ಸರದಾರಜೀನೋ... ಹ್ಞಾ... ಹ್ಞಾ... ದಲೇರ ಮೇಂದಿ... ಅವರೆಲ್ಲಾರ ಮ್ಯಾಲ ಕೇಸು ನಡದಿದ್ದು ನೋಡ್ರಿ,... ಹುಡಗರ್ನ ಹಿಂಗs

ಹಾಡಲಿಕ್ಕೆ, ಕುಣೇಲಿಕ್ಕೆ ಅಂತ, ಅಮೇರಿಕಾಕ್ಕ ಕರಕೊಂಡು ಹೋದರು, ಅಲ್ಲೆ ಅವರು ಅದೃಶ್ಯ ಆದರು ಅಂತ.

ದುರಗವ್ವ + ದ್ಯಾಮವ್ವ : ಅಯ್ಯs ಶಿವನ, ಹಂಗಂದರೇನೋ, ಎಲ್ಲೆ ಹೋದರು, ಏನಾತ ಅವರಿಗೆ?

ಗಣಪತಿ : ಅವರಿಗೇನಾಗತsದ, ಏನೇನೂ ಆಗಲಿಲ್ಲಾ... ಅವರು ಗುಂಪಿನ ಜೋಡಿ ತಿರಗಿ ಬರಲಿಲ್ಲಾ ಅಷ್ಟs... ಅಲ್ಲೇ ಉಳಕೊಂಡು ಬಿಟ್ಟರು. ಇವೆಲ್ಲಾ ಗುಂಪುಗೋಳು ಹೋಗೂದs ಅದಕ್ಕಂತs, ಹ್ಯಾಂಗರs ಮಾಡಿ ಅಮೇರಿಕಾದಾಗ ಹೊಕ್ಕೊಳ್ಳಿಕ್ಕೆ ಅಂತ.

ದುರಗವ್ವ + ದ್ಯಾಮವ್ವ : (ತಮ್ಮ ತಮ್ಮಲ್ಲಿ) ಹೌದೇನs, ಹಾಂಗಿರ್‍ಲಿಕ್ಕೆ ಬರ್‍ತದೇನು, ಕೇಳೂಣು ತಡೀ... ಎಷ್ಟ ದಿನಾ ಆತು ಅಷ್ಟ ದಿನಾ. ...ನೋಡೂಣಂತ ತಡೀ...

ವಿಶ್ವೇಶ್ವರ : ಎಲ್ಲಾರೂ ಇಲ್ಲೇ ಮಾತಾಡಕೋತ ನಿಲ್ಲಬ್ಯಾಡ್ರಿ, ಹೊತ್ತಾಗತದ, ನಡೀರಿ, ಈ ಜನಾ ಯಾವಾಗ ಆಫೀಸು ಮುಚಿಗೊಂಡು ಹೋಗತಾರ ಹೇಳ್ಳಿಕ್ಕೆ ಬರೂದುಲ್ಲಾ... ಮೊದಲ ಒಳಗ ಹೋಗೂಣು, ನಡೀರಿ.

ಸಿಪಾಯಿ : ಏ ಯಾರ ನೀವು... ಏನ ಚಿತ್ರ ವಿಚಿತ್ರ ವೇಷಾ ಹಾಕ್ಕೊಂಡ ಬಂದೀರಿ... ಏನ ತಾನು, ಸರಕಾರೀ ಆಫೀಸಿಗೆ ಬರಬೇಕಾದರ ಹ್ಯಾಂಗ ಬರಬೇಕು ಗೊತ್ತಿಲ್ಲ? ಏ, ತಡೀರಿ, ಹಿಂಗ್ಯಾಕ ಒಳಗs ನುಗ್ಗತೀರಿ? ಅರೇ ಇವನs ಒಳಗ ನುಗ್ಗೇ ಬಿಟ್ಟನಲ್ಲೋ...

ವಿಶ್ವೇಶ್ವರ ಕೈಯಲ್ಲಿಯ ತ್ರಿಶೂಲದಿಂದ ಒಂದೆಡೆಗೆ ಅವನನ್ನು ದೂಕಿ ಆಫೀಸಿನ ಒಳಗ ನುಗ್ಗುತ್ತಾನೆ. ಉಳಿದವರೆಲ್ಲರೂ ಅವನ ಹಿಂದೆಯೇ ಒಳಗೆ ಬರುತ್ತಾರೆ. ಈಶ್ವರನ ರುದ್ರಾವತಾರ. ಅವನ ಕೈಯಲ್ಲಿಯ ತ್ರಿಶೂಲವನ್ನು ನೋಡಿ ಪಾಸ್‌ಪೋರ್ಟ್ ಅಧಿಕಾರಿ ಗಡಗಡನೆ ನಡುಗುತ್ತ ಸಾಷ್ಟಾಂಗ ಬೀಳುತ್ತಾನೆ.

ವಿಶ್ವೇಶ್ವರ : ಎಲೋ ಮೂರ್ಖಾ, ಏಳು... ಯಾರಿಲ್ಲೆ ಅಧಿಕಾರಿ... ಅವ್ನನ್ನ ಕರಕೊಂಡು ಬಾ, ಹ್ನೂ, ಏಳು.

ಸಾಹೇಬರು : (ಮೇಲೆದ್ದು ಕೈಜೋಡಿಸಿ) ನಾನೇ, ...ನಾನೇ ಸ್ವಾಮೀ...

ವಿಶ್ವೇಶ್ವರ : (ಜೋರಾಗಿ ನಗುತ್ತ, ತನ್ನ ಸಂಗಡಿಗರತ್ತ ತಿರುಗಿ) ಹಾ... ಹಾ... ಹಾ, ಇವ್ನನs, ಈ ಪುಕ್ಕನs ಅಂತ ಇಲ್ಲೀ ಅಧಿಕಾರಿ, ಹೊರಗಿನ ಸಿಪಾಯೀಕಿಂತಾ ಅತ್ತತ್ತ ಕಾಣತಾನ... ಹೋಗೋ, ನಿಮ್ಮ ಸಾಹೇಬ ಯಾರು, ಅವ್ನನ್ನ ಕರಕೊಂಡು ಬಾ.

ಸಿಪಾಯಿ : (ಧೈರ್ಯ ಮಾಡಿ, ಮುಂದೆ ಬಂದು) ಸ್ವಾಮೀ, ಇವರsರಿ, ಖರೇನs ಇವರsರೀ ಇಲ್ಲೆ ಸಾಹೇಬರು...

ವಿಶ್ವೇಶ್ವರ : ಇವ್ನನs ಇಲ್ಲೀ ಸಾಹೇಬನs... ಭೋಲೋನs ಆತ ಬಿಡು. (ತ್ರಿಶೂಲವನ್ನು ಅವನ ಕಡೆಗೆ ಚಾಚಿ, ಅವನನ್ನು ಹೆದರಿಸುತ್ತ) ನಡೀ, ಕೂಡ ನಡಿ ನಿನ್ನ ಕುರ್ಚೀ ಮ್ಯಾಲ... ನಮ್ಮದೆಲ್ಲಾರದು ಪಾಸ್‌ಪೋರ್ಟ್ ತಯಾರ ಮಾಡು.

ಸಾಹೇಬರು : ಇಷ್ಟೆಲ್ಲಾರದೂ ಪಾಸ್‌ಪೋರ್ಟ್ ಅಂದರs... (ಕೈ ತಿಕ್ಕುತ್ತ ದೇಶಾವರಿ ನಗೆ ನಗುತ್ತ, ಅತ್ತಿತ್ತ ನೋಡುವನು.)

ವಿಶ್ವೇಶ್ವರ : (ಮತ್ತೆ ತ್ರಿಶೂಲವನ್ನು ಅವನ ಕಡೆಗೆ ಚಾಚುತ್ತಾನೆ.) ಹ್ಞೂ, ಬಾಯಿ ಮುಚಿಗೊಂಡು ಕೆಲಸಾ ಮಾಡು, ಹೆಚಗೀ ಮಾತಾಡಬ್ಯಾಡಾ. ಎಲ್ಲಾರದೂ ಪಾಸ್‌ಪೋರ್ಟ್ ಬೇಕು, ಹ್ಞೂ... ಸುರು ಮಾಡತೀಯೋ...

ಸಾಹೇಬರು : ಮಾಡ್ತೀನಿ ಸ್ವಾಮೀ, ಮಾಡ್ತೀನಿ, ಸಿಟ್ಟಿಗೇಳಬ್ಯಾಡ್ರಿ, ನಿಮ್ಮಂಥವರ ಸೇವಾ ಮಾಡ್ಲಿಕ್ಕೇ ಅಲ್ಲs, ನಾವಿಲ್ಲೆ ಕೂತದ್ದು. (ಕಪಾಟಿನಿಂದ ಫಾರ್ಮುಗಳನ್ನು ತೆಗೆದು ಟೇಬಲ್ ಮೇಲಿಟ್ಟು) ತೊಗೋಳ್ರಿ, ಎಲ್ಲಾರೂ ಫಾರ್ಮ್ ತುಂಬಿ...

ವಿಶ್ವೇಶ್ವರ : ಅದೆಲ್ಲಾ ನಮಗ ಬಗೀ ಹರ್‍ಯೂದುಲ್ಲಾ, ನೀನs ತುಂಬು ಎಲ್ಲಾರ ಫಾರ್ಮು... ನಿನ್ನ ಯಾತಕ್ಕ ಕೂಡಿಸ್ಯಾರ ಇಲ್ಲೆ ಪಗಾರಾ ಕೊಟ್ಟು? ಹ್ಞೂ, ಸುರು ಮಾಡು...

ಸಾಹೇಬರು : (ನಡುಗುವ ಕೈಗಳಿಂದ ಫಾರ್ಮ್ ಎತ್ತಿಕೊಂಡು) ಹ್ಞೂ, ಹೇಳ್ರಿ, ಹೆಸರು...

ವಿಶ್ವೇಶ್ವರ : ಹ್ಞೂ, ನಂದ ಮೊದಲ ಬರಕೋ... ವಿಶ್ವೇಶ್ವರ– ಬ್ಯಾಡ, ಬ್ಯಾಡ ತಡೀ, ಜಗದೀಶ್ವರ ಅಂತ ಬರೀ.

ಸಾಹೇಬರು : ಅಪ್ಪನ ಹೆಸರು...?

ವಿಶ್ವೇಶ್ವರ : ಅಪ್ಪನ ಹೆಸರು...? ಅಪ್ಪನ ಹೆಸರು ಏನು ಹೇಳಬೇಕಪಾ ಇವ್ನಗ... (ರಾಮನ ಕಡೆಗೆ ತಿರುಗಿ ಕೇಳುತ್ತಾನೆ.)

ರಾಮ : ಏನ ಹೇಳೂದು... ಹ್ಞಾ, ಸೃಷ್ಟಿಕರ್ತಾ ಅಂತ ಹೇಳಿಬಿಡು.

ವಿಶ್ವೇಶ್ವರ : ಹ್ಞಾ... ಹ್ಞಾ... ಅಪ್ಪನ ಹೆಸರು ಸೃಷ್ಟಿಕರ್ತಾ... ಬರೀ.

ಸಾಹೇಬರು : ಅಡ್ಡ ಹೆಸರು...

ವಿಶ್ವೇಶ್ವರ : (ಸಿಟ್ಟಿಗೆದ್ದು) ಅಡ್ಡಾ-ಉದ್ದಾ ಹೆಸರೇನು ಬ್ಯಾರೇ-ಬ್ಯಾರೇ ಮತ್ತ? ಈಗ ಹೇಳಿದ್ದೇನು ಉದ್ದ ಹೆಸರು ಅಂತ ನಾ ಏನರ ಹೇಳೀನೇನು ನಿನಗ?

ಗಣಪತಿ : ಹಾಂಗಲ್ಲಾ ಅಪ್ಪಾ, ಪಾಪ, ಅವರ ಮ್ಯಾಲೆ ಸಿಟ್ಟಿಗೇಳಬ್ಯಾಡ್ರಿ, ಈ ಮರ್ತ್ಯಲೋಕದಾಗ ಅಡ್ಡಹೆಸರು ಅಂತ ಪ್ರತಿಯೊಬ್ಬರಿಗೂ ಒಂದು ಗುರುತಿರತದ... ಎಲ್ಲೀ ಅವರು, ಏನು ಅಂತ. ಕೈಲಾಸ ಅಂತ ಹೇಳಿಬಿಡ್ರಿ.

ಸಾಹೇಬರು : ಹ್ಞೂ... ಹಾಂಗಾದರ ಪೂರಾ ಹೆಸರು ಜಗದೀಶ್ವರ ಸೃಷ್ಟಿಕರ್ತಾ ಕೈಲಾಸ... ಹೌದs? ಹ್ಞೂ, ಮನೀ ಪತ್ತೆ ಹೇಳ್ರಿ.

ವಿಶ್ವೇಶ್ವರ : ಕಾಶೀ ವಿಶ್ವೇಶ್ವರ ನಾನು... ಗೊತ್ತಾಗಲಿಲ್ಲೇನೋ ಮೂರ್ಖಾ ನಿನಗ? ಕಾಶೀ ವಳಗ ಮನೀ ನಂದು.

ಸಾಹೇಬರು : ಸ್ವಾಮೀ, ಕಾಶೀ ವಳಗ ಇರವರಾದರs ಪಾಸ್‌ಪೋರ್ಟ್ ಅಲ್ಲೇ ಮಾಡಸಬೇಕಾಗಿತ್ತು, ಇಲ್ಲ್ಯಾತಕ್ಕ ಬಂದ್ರಿ? ಇಲ್ಲೆ ಆಗೂದುಲ್ಲಾ ಬಿಡ್ರಿ...

ವಿಶ್ವೇಶ್ವರ + ರಾಮ : (ಇಬ್ಬರೂ ಒಮ್ಮೆಲೇ) ಅಲ್ಲೋ, ಮಹಾರಾಯಾ, ಕರ್ನಾಟಕದಾಗ ಪಾಸ್‌ಪೋರ್ಟ್ ಮಾಡಸೂದು– ಅದರಾಗೂ ಹುಬ್ಬಳ್ಳಿ ಧಾರವಾಡದಾಗ ಭಾಳ ಸರಳ ಅಂತ ಕೇಳಿದ್ದಿವೀ... ಅದಕ್ಕಂತ ಇಲ್ಲೀತನಕಾ ಬಂದ್ವೆಪಾ.

ಸಾಹೇಬರು : ಹಾಂಗಿದ್ದರ ಹುಬ್ಬಳ್ಳೀ-ಧಾರವಾಡದ್ದ ಪತ್ತೇ ಕೊಡ್ರಿ.

ವಿಶ್ವೇಶ್ವರ : ಏನಪಾ, ಮತ್ತೊಂದೇನೋ ಪಾಯಿಂಟ್ ತಕ್ಕೊಂಡು ಕೂತನಲ್ಲಾ ಇವ್ನಾ...

ಗಣಪತಿ : ಅಪ್ಪಾ, ಅಷ್ಟ್ಯಾಕ ಕಾಳಜೀ ಮಾಡತೀರಿ? ನಿಮಗೇನು ಎಲ್ಲೆ ಸ್ಮಶಾನ ಅದ, ಅಲ್ಲೇ ವಾಸಸ್ಥಾನಾ... ಹುಬ್ಬಳ್ಳೀ ಮಂಟೂರ ರಸ್ತೇದ ಮ್ಯಾಲಿನ ಸ್ಮಶಾನದ ಪತ್ತೇ ಕೊಟ್ಟಬಿಡ್ರಿ.

ವಿಶ್ವೇಶ್ವರ : ವಾ, ಏನ ಅಂದ್ರೂ ಶ್ಯಾಣ್ಯಾ ತಲೀ ನೋಡು ನಿಂದು.. ಹ್ಞೂ ಬರಕೋ, ಹುಬ್ಬಳ್ಳಿ ಮಂಟೂರ ರಸ್ತೆಯ ಸ್ಮಶಾನ...

ಸಾಹೇಬರು : ಸ್ವಾಮೀ, ಹಾಂಗೆಲ್ಲಾ ನಡ್ಯೂದಿಲ್ಲರೀ, ಮನೆ ನಂಬರು ಓಣಿ ಹೆಸರು ಎಲ್ಲಾ ಬೇಕು. ಪೋಲೀಸ ತನಿಖೀ ಆಗಬೇಕಾಗತದರಿ...

ವಿಶ್ವೇಶ್ವರ : ಯಾವ ಪೋಲೀಸ ಅವ್ನಾ, ನನ್ನ ತನಿಖೀ ಮಾಡಾವ್ನಾ?

ಗಣಪತಿ : ಅಪ್ಪಾ, ನೀವು ಸುಮ್ಮನಿರ್ರಿ, ನಾ ಹೇಳ್ತೀನಿ, ಸ್ಮಶಾನಾ ಕಾಯಲಿಕ್ಕೆ ಇದ್ದಾನಲ್ಲಾ ಕಲ್ಲಪ್ಪಾ, ಅವ್ನನ ಮನೀ ಪತ್ತೇ ಕೊಟ್ಟರಾತು, ಹ್ಞೂ ಬರಕೋಳ್ರಿ, ಕೇರ್ ಆಫ್ ಕಲ್ಲಪ್ಪಾ ದುಂಡಪ್ಪಾ ವಾಚ್‌ಮನ್, ಸ್ಮಶಾನ, ಮಂಟೂರ ರಸ್ತೆ, ಹುಬ್ಬಳ್ಳಿ...

ವಿಶ್ವೇಶ್ವರ : ಹ್ಞೂ, ಆತಿಲ್ಲೋ, ಇನ್ನ ಮತ್ತೇನರs ತಕ್ಕೊಂಡು ಕೂಡಬ್ಯಾಡಾ. ಉಳದದ್ದೆಲ್ಲಾ ನಿನಗ ತಿಳಧಂಗ ತುಂಬು. ಒಟ್ಟಿನ ಮ್ಯಾಲ ನಮಗ ಪಾಸ್‌ಪೋರ್ಟು ಸಿಗಬೇಕ ನೋಡು. ಇಲ್ಲಾಂದರ (ಅವನನ್ನು ಹೆದರಿಸುತ್ತ) ನಿನ್ನ ಪರಿಸ್ಥಿತಿ ನೆಟ್ಟಗಾಗಲಿಕ್ಕಿಲ್ಲ ತಿಳೀತಿಲ್ಲೋ...? (ಅಧಿಕಾರಿ ಅವನ ಫಾರ್ಮ್ ತುಂಬಿ ಮುಗಿಸುವನು. ಮುಂದೆ ರಾಮಚಂದ್ರನ ಸರದಿ.)

ಸಾಹೇಬರು : ಹೆಸರು...?

ರಾಮ : ಶ್ರೀರಾಮಚಂದ್ರ ದಶರಥ ಅಯೋಧ್ಯಾ.

ಸಾಹೇಬರು : ಪತ್ತೇ...?

ರಾಮ : ಪತ್ತೇ ಎಲ್ಲಿಂದ ಕೊಡಬೇಕಪ್ಪಾ? ಅಯೋಧ್ಯಾದ್ದಂತೂ ನಡಿಯೂದಿಲ್ಲಾ...

ಮಾರುತಿ : ಸ್ವಾಮೀ, ಈ ನಿಮ್ಮ ಸೇವಕನ ಮನೀ ಅಂದ್ರೇನು ಬ್ಯಾರೇ ಏನ್ರೀ, ನಿಮ್ಮದs ಮನೆ ಅಲ್ರೀ... ನನ್ನ ಗುಡೀದ ಪತ್ತೆ ಕೊಟ್ಟಬಿಡ್ರಿ.

ರಾಮ : ಭಲೇ, ಭಲೇ, ಸೇವಕಾ ಅಂದರs ಹಿಂಗಿರಬೇಕು ನೋಡು, ಹೇಳು ಪತ್ತೆ, ಬರಕೊಳ್ರೆಪಾ... ನೋಡ್ರೆಪಾ ಏನು ಕಾಲ ಬಂತು... ಅಯೋಧ್ಯಾದ ಅರಸ ಶ್ರೀರಾಮಚಂದ್ರ ಕೇರ್ ಆಫ್ ಮಾರುತಿ ಆಗೂ ಪ್ರಸಂಗ ಬಂತು!

ಮಾರುತಿ ಹೇಳುವನು, ಅಧಿಕಾರಿ ಬರೆದುಕೊಳ್ಳುವನು.

ಸಾಹೇಬರು : ವಯಸ್ಸು...?

ರಾಮ : ಅದs ಇನ್ನೂ ಖಾತ್ರಿ ಆಗಿಲ್ಲಾ ನೋಡ್ರೆಪಾ... ಯಾರು ಮೂರು ಸಾವಿರ ವರ್ಷಾ ಅಂತಾರ, ಯಾರು ಸಾವಿರಾ-ದೀಡಸಾವಿರಾ ಅಂತಾರ...

ಸಾಹೇಬರು : ಛೆ, ಹಾಂಗ ಹೇಳಿದರ ಹ್ಯಾಂಗ ನಡೀತದರೀ... ಯಾವದರ ಒಂದು ಖಾತ್ರೀ ಹೇಳ್ರಿ.

ಸೀತಾ : ಸ್ವಾಮೀ, ಸಾವಿರಾ-ದೀಡಸಾವಿರಾ ಅಂತ ಏನು ಮಾತಾಡ್ತೀರಿ? ನೀವೇನು ಅಷ್ಟು ಮುದುಕರಾಗೀರೇನು? (ನಾಚುತ್ತ..ವೈಯಾರ ಮಾಡುತ್ತ) ನನ್ನ ಕಣ್ಣಿಗಂತೂ ಇನ್ನೂ ಇಪ್ಪತ್ತೈದು ವರ್ಷದವರ ಹಾಂಗ ಕಾಣತೀರಿ.

ರಾಮು : (ಬಹಳ ಸಂತೋಷದಿಂದ ಉಬ್ಬಿ) ಹೌದs ಪ್ರಿಯೇ, ಹಂಗs ಆಗಲಿ, ಗಂಡಸಿಗೆ ಎಷ್ಟು ವಯಸ್ಸಾದರೇನು, ಹೇಣ್ತೀ ಕಣ್ಣಿಗೆ ಕಾಣಸೂ ವಯಸ್ಸs ಅವನ ಖರೇ ವಯಸ್ಸಲ್ಲs? ಹ್ಞಾ, ಬರಕೋಳ್ರಿಪಾ– ವಯಸ್ಸು ಇಪ್ಪತ್ತೈದು.

ಅಧಿಕಾರಿ ಅವನ ಫಾರ್ಮ ತುಂಬು ಮುಗಿಸುವನು.

ರಾಮು : ಇನ್ನ ಲಕ್ಷ್ಮಣಾ, ಸೀತಾ ಇಬ್ಬರದೂ... ಅವರದೇನು ಹೆಸರಷ್ಟs ಬ್ಯಾರೇ... ಬಾಕೀ ಡೀಟೇಲ್ಸ ಎಲ್ಲಾ ನನ್ನದs... ಬರದು ಬಿಡ್ರಿ.

ಲಕ್ಷ್ಮಣ : ಅಷ್ಟs, ನಮಗ ಬ್ಯಾರೇ ಅಸ್ತಿತ್ವ ಏನದ? ಹತ್ತರ ಜೋಡಿ ಹನ್ನೊಂದು– ಗೋವಿಂದಾ, ಗೋವಿಂದಾ.

ಅಧಿಕಾರಿ ಮತ್ತೆರಡು ಫಾರ್ಮ್ ತುಂಬಿ ಮುಗಿಸುವನು.

ವಿಶ್ವೇಶ್ವರ : ಹ್ಞೂ, ಈ ಹೆಣ್ಣುಮಕ್ಕಳದೂ ಅಷ್ಟ ಎಲ್ಲಾ ಬರದುಬಿಡು. ಅವರದೂ ಹೆಸರಷ್ಟs ಬ್ಯಾರೇ, ಎಲ್ಲಾ ನನ್ನಂತೇನ ಬರದುಬಿಡು... ನಮ್ಮ ಮನೀ ಅವರs ಅವರೆಲ್ಲಾ...

ಸಾಹೇಬರು : ಎಲ್ಲಾರೂ... ಎಲ್ಲಾರೂ ನಿಮ್ಮ ಪೈಕೀನs?

ವಿಶ್ವೇಶ್ವರ : ಹ್ಞೂ, ಹೌದೋ, ಒಮ್ಮೆ ಹೇಳಿದರ ತಿಳಿಯೂದುಲ್ಲ ಏನು? ಲಗೂ-ಲಗೂ ಬರದು ಮುಗಸು. ನಮ್ಮದೆಲ್ಲಾ ಆರತಿ-ನೇವಿದ್ಯದ ಹೊತ್ತಾಗೇದ. ನಾವು ಹೊರಡತೀವಿ ಇನ್ನ. ಆದಷ್ಟು ಲಗೂ ಪಾಸ್‌ಪೋರ್ಟ್ ನಮಗ ಮುಟ್ಟಬೇಕು, ನೋಡು. ತಿಳೀತೇನು? ಇಲ್ಲಾಂದರ ನಾನs ಬರತೀನಿ ಮತ್ತ.

ಸಾಹೇಬರು : ಬ್ಯಾಡ್ರಿ ಸ್ವಾಮೀ, ನೀವೇನು ಬರೂದು ಬ್ಯಾಡ್ರಿ. ನಾನs ಸ್ವತಃ ನಿಂತು ಮಾಡಿಸಿ ಕಳಸತೀನಿ. ನೀವು ನಿಶ್ಚಿಂತಿಂದ ಇರ್ರಿ.

ಎಲ್ಲರೂ ಸಂತೋಷದಿಂದ ಹೊರಗೆ ಹೋಗುವರು.

ದೃಶ್ಯ-೨

ಮೇಲೆ ಆಕಾಶದಲ್ಲಿ ವಿಷ್ಣು-ಲಕ್ಷ್ಮಿ-ನಾರದರು ನಿಂತು ನೋಡುತ್ತಿದ್ದಾರೆ.

ವಿಷ್ಣು : ಏನೋ ನಾರದಾ, ಇವರೆಲ್ಲ ಏನು ನಡಸ್ಯಾರ? ಏನೋ ಕಾರಸ್ಥಾನ ನಡದದ ಅಂತ ಅನಸತದಲ್ಲಾ?

ನಾರದ : ನಾರಾಯಣ-ನಾರಾಯಣ, ಕಾರಸ್ಥಾನಾ-ಗೀರಸ್ಥಾನಾ ಏನೂ ಇಲ್ಲಾ ಲಕ್ಷ್ಮೀಪತಿ, ಏನು ನಡದದ ಅಂತ ಏನು ಹೇಳ್ಲಿ, ನಿನಗ? ಭೂಲೋಕದಾಗ, ಅದರಾಗೂ ಭಾರತದಾಗ ಒಂದು ವಿಚಿತ್ರ ಪಿಡುಗು ಹಬ್ಬೇದ, ನೋಡು. ಎಲ್ಲಾರೂ ಕಾಲಾಗಿನ ಮಚ್ಚೀ ಎಚ್ಚರ ಇಲ್ಲದs ಅಮೇರಿಕಾಕ್ಕ ಓಡಲಿಕ್ಕೆ ಹತ್ಯಾರ ಪ್ರಭೂ...

ವಿಷ್ಣು : ಯಾಕs, ಅಂಥಾದೇನದನೋ ಅಲ್ಲೇ...?

ನಾರದ : ನಾರಾಯಣಾ, ನಿನಗ ತಿಳೀದಿದ್ದದ್ದು ಏನದಽ... ರೊಕ್ಕದ ಝಣಾ-ಝಣಾ ನಾದಾ... ದೊಡ್ಡವರು-ಸಣ್ಣವರು ಕೂಡೇ ಓಡಲಿಕ್ಕೆ ಹತ್ಯಾರ ನೋಡು. ಈಗ ಇವರನಽ ನೋಡು, ಈಶ್ವರಾ-ರಾಮಚಂದ್ರನಂಥವರು ಕೂಡ ಅಲ್ಲೇ ಹೊಂಟಾರ.

ವಿಷ್ಣು : ಎಲ್ಲೆ ಹೊಂಟಾರ... ಅಮೇರಿಕಾಕ್ಕಽ? ಅಲ್ಲೋ ನಾರದಾ, ಇವರೆಲ್ಲಾ ಹೊಂಟಹೋದರಽ ಭಾರತ ದೇಶದ ಗತೀ ಏನೋ? ಓಣಿ-ಓಣಿಗೆ ಕಟ್ಟಿದ ಗುಡಿಗೋಳೆಲ್ಲಾ ಖಾಲೀ ಬೀಳತಾವಲ್ಲೋ?

ನಾರದ : ನಾರಾಯಣಾ, ಅದರ ಚಿಂತ್ಯಾಕ ನಿನಗ? ನಿನಗಿನ್ನೂ ಭೂಲೋಕದವರ ಬಹುಮುಖ ಪ್ರತಿಭಾದ ಬಗ್ಗೆ ಜಾಸ್ತಿ ಗೊತ್ತಾದ ಹಾಂಗಿಲ್ಲಾ... ಭಾರತದಾಗ ದೇವರು ಹೋದರೂ ಯಾವದೂ ಗುಡಿ ಖಾಲೀ ಬೀಳೂದುಲ್ಲಾ ಏನಪಾ... ಆ ಗುಡಿಗಳು ಮರುದಿನಾನಽ ಲೋಕೋಪಯೋಗಿ ಕ್ಲಬ್‌ಗಳಾಗಿ ಪರಿವರ್ತನ ಹೊಂದತಾವ. ಅಲ್ಲೆ ಜೂಜು, ಸೋಮರಸಪಾನಾ ಎಲ್ಲಾ ವೈಭವದಿಂದ ನಡೀತಾವ ನೋಡು.

ವಿಷ್ಣು : ನಾರದಾ, ಅಲ್ಲೆ ನೋಡೋ, ಕಣ್ಮುಚ್ಚಿ ಕಣ್ಣು ತಗ್ಯೂದರಾಗಽ ಎಲ್ಲಾರೂ ಹೊಂಟಽಬಿಟ್ಟರಲ್ಲೋ...

ನಾರದ : ಶ್ರೀಹರೀ, ನೀ ಕಣ್ಮುಚ್ಚಿ ಕಣ್ಣು ತಗ್ಯೂದರಾಗಽ ಭೂಲೋಕದಾಗ ಎಷ್ಟು ಕಾಲ ಕಳದುಹೋಗಬಹುದು ಅನ್ನೂದು ನಿನಗ ತಿಳೀದೇನು?

ಕೆಳಗಿನ ರಂಗಮಂಚದ ಮೇಲೆ ಎಲ್ಲರೂ ಬಗಲಿಗೆ ಬ್ಯಾಗ್ ಹಾಕಿಕೊಂಡು ವಿಮಾನ ನಿಲ್ದಾಣಕ್ಕೆ ಹೋಗುತ್ತಿರುವ ದೃಶ್ಯ.

ಲಕ್ಷ್ಮಿ : ಅಯ್ಯಽ, ಅಲ್ಲೆ ನೋಡ್ರಿ ...ರಾಮಚಂದ್ರಾ-ಈಶ್ವರಾ, ದುರಗವ್ವಾ-ದ್ಯಾಮವ್ವಾ ಎಲ್ಲಾರೂ ಏರ್‌ಪೋರ್ಟಿಗೆ ಹೊರಟಾರ.

ನಾರದ : ಎಲ್ಲಾರೂ ಹೊಂಟಿಲ್ಲಾ ದೇವೀ. ನೋಡಲ್ಲೆ, ಗಣಪತಿ ಮತ್ತ ಮಾರುತಿ ಹೋಗಲಿಲ್ಲಾ. ಅವರನೆಲ್ಲಾ ಕಳಿಸಿ ತಿರಗಿ ಮನಿಗೆ ಹೊಂಟಾರ.

ವಿಷ್ಣು : ಅದ್ಯಾಕಽ, ಮತ್ತ ಅವರಿಬ್ಬರ್ಯಾಕ ಹೋಗಲಿಲ್ಲಾ?

ಲಕ್ಷ್ಮಿ : ಪಾಪ, ನೋಡ್ರಿ, ಹ್ಯಾಂಗ ಮಾರೀ ಒಣಗಿಸಿಕೊಂಡು ತಿರಗಿ ಹೊಂಟಾವ.

ನಾರದ : ನಾರಾಯಣಾ, ವಿಸಾ ಸಿಕ್ಕಿರಲಿಕ್ಕಿಲ್ಲಾ, ಮತ್ತೇನು ಕಾರಣ ಇರತಽದ? ಅಮೇರಿಕಾದ ಮಂದಿ ಭಾರೀ ಪುಕ್ಕರು ನೋಡು. ಇಂಡಿಯಾದಿಂದ ಒಂದು ಬ್ಯಾಕ್ಟೀರಿಯಾ ಬಂದಗಿಂದೀತು ಅಂತ ಹೆದರೂ ಅವರು ಇವರ್ನ ಬಿಡತಾರ ತಮ್ಮ ದೇಶದಾಗ? ತಡೀರಿ, ನಾ ಒಂದ ಕ್ಷಣದಾಗ ನನ್ನ ದಿವ್ಯ ಚಕ್ಷುವಿನಿಂದ ನೋಡಿ ಹೇಳತೀನಿ. (ಬೈನಾಕ್ಯುಲರ್ ಹಿಡಿದು ನೋಡುವನು) ಹ್ಞಾ, ನಾ ಹೇಳ್ಲಿಲ್ಲಽ... ಹಂಗಽ ಆಗೇದ ಅದು. ಅಮೇರಿಕನ್ ಎಂಬಸೀ ಅವರು ಆನಿಗೇ, ಮಂಗ್ಯಾಕ್ಕ ನಾವು ವಿಸಾ ಕೊಡೂದುಲ್ಲಾ ಅಂದಬಿಟ್ಟರಂತ.

ವಿಷ್ಣು : ಹಂಗಂದರs...? ಎಷ್ಟು ಸೊಕ್ಕ ಅವರಿಗೆ? ನಮ್ಮ ಗಣಪತಿಗೆ, ಮಾರುತಿಗೇ ಆಸೀ-ಮಂಗ್ಯಾ ಅಂದರs? ಈಗ ಸದ್ಯಾ ನರಸಿಂಹಾವತಾರಾ ತೊಗೊಂಡು ಅವರ ಹೊಟ್ಟೀ ಸೀಳಿ ಒಗೀತೀನಿ.

ನಾರದ : (ಸ್ವಗತ) ಕಂಡದ್ದ ಹೇಳಿದರ ಕೆಂಡದಂಥಾ ಸಿಟ್ಟಂತ...

ವಿಷ್ಣು : ಏನು, ಏನಂದೀ ನಾರದಾ?

ನಾರದ : ಛೆ, ಛೆ, ಏನಿಲ್ಲಾ, ಅಲ್ಲಾ ನಾರಾಯಣಾ, ನರಸಿಂಹಾವತಾರಾ ತಾಳಿದರ ನಿನಗೂ ಅವರು ವಿಸಾ ಕೊಡಲಿಕ್ಕಿಲ್ಲಾ ಅಂದೆ.

ಲಕ್ಷ್ಮಿ : ಅದೆಲ್ಲಾ ಇರಲಿ, ಹುಡುಗಾಟಿಕಿ ಸಾಕಿನ್ನ, ನಾರದಾ, ಅವರೆಲ್ಲಾ ಹೋದರು ಅಂತ ಭೂಲೋಕದ ಜನರು ಕಂಗಾಲಾಗ್ಯಾರ. ಅವರೆಲ್ಲಾ ತಿರಗಿ ಬರೂಹಾಂಗ ಏನರs ಉಪಾಯಾ ಮಾಡಬೇಕು, ಅದರ ಬಗ್ಗೆ ವಿಚಾರಾ ಮಾಡ್ರಿ ಈಗ.

ವಿಷ್ಣು : ಹೌದು ನಾರದಾ, ದೇವಿ ಹೇಳಿದ್ದು ಖರೇ ಅದ. ಇದನ್ನ ಹಿಂಗs ಬಿಟ್ಟರs ನಡ್ಯೂದುಲ್ಲಾ, ಅವರೆಲ್ಲಾ ತಿರಗಿ ಬರೂಹಾಂಗ ಏನರs ಮಾಡsಬೇಕು. ನೀನs ಏನರs ಉಪಾಯಾ ಹೇಳಬೇಕು, ನಾರದಾ.

ನಾರದ : ಶ್ರೀಹರೀ, ಭಾರತದಾಗ ಪ್ರಜಾಪ್ರಭುತ್ವ ಅದ ಸ್ವಾಮೀ. ಎಲ್ಲಾರು ತಮಗೆಲ್ಲೆ ಬೇಕು ಅಲ್ಲೆ ಹೋಗಲಿಕ್ಕೆ, ಏನು ಬೇಕು ಅದನ್ನ ಮಾಡಲಿಕ್ಕೆ ಸ್ವತಂತ್ರ ಇದ್ದಾರ... ನಾವು ಯಾರು ಅವರನ್ನ ತಿರಗಿ ಬಾ ಅನ್ನು ಅವರು?

ವಿಷ್ಣು : ನೀ ಹಾಂಗ ಕೈ ಚೆಲ್ಲಿ ಕೂಡಬ್ಯಾಡೋ ನಾರದಾ, ಕಾಯದೇದಿಂದ ಆಗಲಿಕ್ಕಿಲ್ಲಾ... ಆದರs ಏನಾದರೂ ಉಪಾಯದಿಂದ ಅವರು ತಿರಗಿ ಬರೂಹಾಂಗ ಮಾಡಬೇಕು, ನೋಡು, ವಿಚಾರ ಮಾಡು. ನಿನ್ನ ಚಾಣಾಕ್ಷ ಬುದ್ಧಿಗೆ ಏನರs ಹೊಳದs ಹೊಳೀತsದ.

ನಾರದ : (ಸ್ವಲ್ಪ ವಿಚಾರ ಮಾಡಿದಂತೆ ನಟಿಸಿ) ಹ್ಞಾ, ಒಂದ ಉಪಾಯ ನನ್ನ ತಲ್ಯಾಗ ಬಂದsದ ನೋಡು... ಆದರs ಅದು ಎಷ್ಟರ ಮಟ್ಟಿಗೆ ಯಶಸ್ವಿ ಆದೀತೋ ಅಂತ ಅನುಮಾನಾ.

ವಿಷ್ಣು : ಹೇಳೆರs ಹೇಳು ಏನದು, ನೋಡೂಣು...

ನಾರದ : (ಮೆಲ್ಲಗೆ ಪ್ರೇಕ್ಷಕರಿಗೆ ಕೇಳದಂತೆ ಏನೇನೋ ಹೇಳುವನು.)

ವಿಷ್ಣು : ಶಾಭಾಸ್, ಭಾಳ ಛೊಲೋ ಅದs ಉಪಾಯಾ.

ಲಕ್ಷ್ಮಿ : ಭಾರೀ ತಲೀ ಅದ ಬಿಡಪ್ಪಾ ನಿಂದೂ...

ವಿಷ್ಣು : ಖಾತ್ರೀ ಯಶಸ್ವಿ ಆಗತsದೇಳು, ಮಾಡೇಬಿಡೂಣು ಹಾಂಗs... ರಾಮಚಂದ್ರಾ, ಈಶ್ವರಾ ಅಂತೂ ಖಾತ್ರೀ ಓಡಿಬರ್ತಾರ ತಿರಗಿ, ಅನುಮಾನಾನs ಇಲ್ಲಾ. ಉಳದ ಹೆಣಮಕ್ಕಳದs ಅನುಮಾನಾ...

ಲಕ್ಷ್ಮಿ : ಅವರ ಕಾಳಜೀ ಬಿಡ್ರಿ ನೀವು... ಈಶ್ವರಾ-ರಾಮಚಂದ್ರಾ ಬಂದ ಮ್ಯಾಲೆ ಅವರೇನು ಭಾಳ ದಿನಾ ನಿಲ್ಲೂದುಲ್ಲಾ ಅಲ್ಲೆ, ಬಂದs ಬರ್ತಾರ, ಇವತ್ತಿಲ್ಲಾ ನಾಳೆ ತಿರಗಿ.

ದೃಶ್ಯ-೩

ಆಕಾಶದಲ್ಲಿ ನಾರದ-ವಿಷ್ಣು-ಲಕ್ಷ್ಮಿ ಹಿಂದಿನಂತೆ. ಭೂಲೋಕದ ಮೇಲೆ ಏರ್‌ಪೋರ್ಟ್ ಹೊರಗಿನ ದೃಶ್ಯ. ವಿಶ್ವೇಶ್ವರ, ರಾಮಚಂದ್ರ. ಲಕ್ಷ್ಮೀ ಬಿಟ್ಟು ಜೀನ್ಸ್‌ನಲ್ಲಿದ್ದಾರೆ ಮಹಿಳೆಯರೆಲ್ಲ ಸಲ್ವಾರ್-ಕಮೀಜ ತೊಟ್ಟಿದ್ದಾರೆ.

ವಿಶ್ವೇಶ್ವರ : ಓ, Hi ರ್‍ಯಾಮ್‌ಚಂದ್ರ, ನೀವೂ ಎಲ್ಲಾರೂ ತಿರಗಿ ಬಂದಬಿಟ್ರಿ?

ರಾಮು : ಓ, Hi ಈಶ್ವರ್, How are you? ನೀನೂ ತಿರಗಿ ಬಂದಬಿಟ್ಯಾ? ಭೋಲೋ ಆತು ಬಿಡು, ಓ ಅಲ್ಲೆ ನೋಡು, ದ್ಯಾಮವ್ವಾ-ದುರಗವ್ವಾ ಎಲ್ಲಾರೂ ಬಂದರು...! ಓ, ಹಲ್ಲೋ Girls. ಹ್ಯಾಂಗಿದ್ದೀರಿ, ಆರಾಮಿದ್ದೀರಾ?

ದುರಗವ್ವ : ಓ, ಫೈನ್, ಥ್ಯಾಂಕ್ಯು...

ವಿಶ್ವೇಶ್ವರ : ಹ್ಯಾಂಗಾತು ನಿಮ್ಮ ಟ್ರಿಪ್ಪು?

ದ್ಯಾಮವ್ವ : ಭಾಳ ಭೋಲೋ ಆತು, ಥ್ಯಾಂಕ್ಯು...

ರಾಮು : ಅರೇ ವಾ, ಭಾರೀ ಸುಧಾರಿಸಿ ಬಿಟ್ಟೀರೆಲ್ಲಾ ಎಲ್ಲಾರೂ... ನೀವೂ ಎಲ್ಲಾರೂ ಇಷ್ಟ ಲಗೂ ತಿರಗಿ ಬಂದಬಿಟ್ರೆಲ್ಲಾ? ಯಾಕs, ನಾವು ತಿರಗಿ ಬಂದಿವಿ ಅಂತ ನಮ್ಮ ಹಿಂದs ಬಂದಬಿಟ್ಟರೋ ಏನು ಮತ್ತ?

ಕರಿಯಮ್ಮ : ಅಯ್ಯs, ನಾವ್ಯಾತಕ್ಕ ನಿಮ್ಮ ಹಿಂದ ಬರೂಣು? ಇಷ್ಟ ದಿನಾ ಅಲ್ಲಿದ್ದಿವಿ, ಒಂದ ದಿನಾ ಅರs 'ಏನವಾs, ಹ್ಯಾಂಗಿದ್ದೀರಿ' ಅತ ಒಂದ ಮಾತು ಕೇಳಿದ್ರೇನ ಯಾರರೇ?

ವಿಶ್ವೇಶ್ವರ : ಏ, ಹಾಂಗ ಸಿಟ್ಟಿಗೇಳಬ್ಯಾಡಾ, ಕರಿಯಮ್ಮಾ.

ಕರಿಯಮ್ಮ : ಗೊತ್ತದs ಬಿಡು... ನೀವು ಎಷ್ಟು ನಂಬಗೀ ಅವರು ಅಂತ ನಮಗ ಎಂದೋ ಗೊತ್ತಾಗೇದ. ಅದಕ್ಕs ನಿಮ್ಮ ಗೊಡವೀ ಬಿಟ್ಟು ನಮ್ಮ-ನಮ್ಮಷ್ಟಕ್ಕ ನಾವು ಒಬ್ಬರs ಇರಲಿಕ್ಕೆ ಹತ್ತಿ ಎಷ್ಟೋ ದಿನಾ ಆತು.

ದ್ಯಾಮವ್ವ : ಅಲ್ರೆಪಾ, ನಾವು ಯಾಕ ತಿರಗಿ ಬಂದಿವಿ ಅನ್ನೂದನ್ನ ಆಮ್ಯಾಲೆ ಹೇಳ್ತೀವಂತ, ಈಗ ಮೊದಲ ನೀವು ಯಾಕ ತಿರಗಿ ಬಂದ್ರಿ ಅನ್ನೂದು ನಮಗ ಗೊತ್ತಾಗೇದ, ನಾವs ಹೇಳೂಣೇನು?

ದುರಗವ್ವ : ಹೇಳು, ಹೇಳು, ಇವರೆಲ್ಲಾ ನಮಗೇನೂ ಗೊತ್ತಿಲ್ಲಂತ ತಿಳಕೊಂಡ ಹಾಂಗ ಕಾಣತೈತಿ.

ಕರಿಯಮ್ಮ : ಐ ಬಿಡ, ಗೊತ್ತಿಲ್ಲದೇನು, ದೇಶದಾಗ ಎಲ್ಲಾರಿಗೂ ಗೊತ್ತೈತಿ. ನೋಡಿಲ್ಲೇನು, ಅಲ್ಲೆ ಸುದ್ದಾ ಎಲ್ಲಾ ಟಿ.ವಿ. ಚ್ಯಾನೆಲ್ ಮ್ಯಾಲೂ ಒಂದs ಸವನs ತೋರಸತಿದ್ದರು... ನೀನs ಹೇಳಿಬಿಡs...

ವಿಶ್ವೇಶ್ವರ + ರಾಮು : (*ದಡಬಡಿಸಿ*) ಏನು... ಏನ ಗೊತ್ತದs ನಿಮಗ? ಏನು ಹೇಳ್ತೀರಿ?

ದುರಗವ್ವ : ಅದs, ವಿಷ್ಣು ಸುಗ್ರೀವಾಜ್ಞಾ ಹೊರಡಿಸ್ಯಾನ ಅಂತ... ಇನ್ನ ಮ್ಯಾಲ ಈಶ್ವರನ ಸ್ಥಾನಕ್ಕ ಗಣಪತಿ ಮತ್ತ ರಾಮನ ಜಾಗಾಕ್ಕ ಮಾರುತಿನ್ನ ಕೂಡಸಬೇಕು ಅಂತ... ಅವರಿಗೇ ಅಗ್ರಪೂಜಾ ಸಲ್ಲಬೇಕು ಅಂತ... ಅದೇನು ನಮಗ ಗೊತ್ತಿಲ್ಲಂತ

ಮಾಡೀರೇನು? ಕುರ್ಚೀ ಹೋದೀತು ಅನ್ನೂ ಹೆದರಿಕೀ... ಇಬ್ಬರೂ ಇಷ್ಟ ಅವಸರದಲೇ ಓಡಿ ಬಂದ್ರಿ ಹೌದಲ್ಲೋ?

ರಾಮು + ವಿಶ್ವೇಶ್ವರ : ಛೆ-ಛೆ, ಅದಕ್ಯಾಕ ಹೆದರಿ ಓಡಿ ಬರ್ತೀವಿ? ನೀವೂ ಒಂದು, ಇಲ್ಲದ್ದs ಏನೇನೋ ಸುದ್ದೀ ಹಬ್ಬಸತೀರಿ... (ಅದೇ ಹೊತ್ತಿಗೆ ಗಣಪತಿ-ಮಾರುತಿ ಇಬ್ಬರೂ ಅವರನ್ನು ಎದುರುಗೊಳ್ಳಲು ಬರುವರು) ಇಕಾ, ಅವರs ಬಂದರು ನೋಡ್ರಿ. (ಇಬ್ಬರೂ ನಮಸ್ಕಾರ ಮಾಡುವರು) ಆಯುಷ್ಮಾನ್ ಭವ... ನಮಗ ಗೊತ್ತಿಲ್ಲೇನು...?

ರಾಮು : ಹನುಮಂತ ಎಂಥಾ ವಿಶ್ವಾಸದ ಸೇವಕಾ ಅಂತ? ಯಾರು ಕೂಡು ಅಂದರೂ ಅವ್ವಾ ಎಂದರs ನನ್ನ ಸಿಂಹಾಸನದ ಮ್ಯಾಲ ಕೂತಾನs? ಶಕ್ಯs ಇಲ್ಲಾ...

ವಿಶ್ವೇಶ್ವರ : ಮತ್ತs, ಗಣಪತಿ ಎಷ್ಟs ಅಂದರೂ ನನ್ನ ಮಗಾ, ಅವ್ವಾ ಎಂದರs ನನ್ನ ಸ್ಥಾನಕ್ಕ ಕೂಡಲಿಕ್ಕೆ ತಯಾರಾದಾನೇನು? ಶಕ್ಯs ಇಲ್ಲಾ, ಯಾಕೋ ಗಜಾನನಾ, ಹೌದೋ ಅಲ್ಲೋ?

ಗಣಪತಿ : ಹೌದು ಅಪ್ಪಾ, ಅಗದೀ ಖರೇ ನೀವು ಹೇಳಿದ್ದು... ನಿಮ್ಮ ಸ್ಥಾನದಾಗ ಕೂಡೂ ಯೋಗ್ಯತಾ ಏನು ನಂದು? (ಬದಿಯಲ್ಲಿ ನಿಂತ ಮಾರುತಿಗೆ ಮಾತ್ರ ಕೇಳುವಂತೆ) ಛೊಲೋ ಆತು ಬಿಡು ಮಾರಾಯಾ, ಇವರು ತಿರಗಿ ಬಂದರು. ಇವರ ಜಾಗಾದಾಗ ಕೂತು ನಾಕs ದಿನದಾಗs ಸಾಕಾಗಿ ಹೋಗಿತ್ತು. ಆರಾಮ ಉಂಡುಟ್ಟು ತಿರಗೂದು ಬಿಟ್ಟು ಜಗತ್ತಿಂದೆಲ್ಲಾ ಜವಾಬ್ದಾರೀ ಹೊತಗೊಂಡು ಯಾರು ಒದ್ದ್ಯಾಡಬೇಕೋ?

ಮಾರುತಿ : ಹೌದು ಬಿಡಲೇ, ಆ ಸಿಂಹಾಸನದ ಮ್ಯಾಲೆ ನನ್ನ ಹಿಡದ ಕೂಡಿಸಿದಾಗಿಂದ ಗಿಡಾ ಏರೂದs ಬಂದಾಗಿತ್ತು ನೋಡು. ಪಾರಾದೆ, ರಾಮಚಂದ್ರ ತಿರಗಿ ಬಂದಾ... ಪ್ರಭೂ, ಇನ್ನೊಂದು ಉದ್ದಂಡ ನಮಸ್ಕಾರಾ ನಿನಗ...

ವಿಶ್ವೇಶ್ವರ + ರಾಮು : ಕೇಳಿದಿರಾ ನೀವೆಲ್ಲಾ? ಗೊತ್ತಾತs ಈಗರs, ನಾವು ತಿರಗಿ ಯಾಕ ಬಂದಿವಿ ಅಂತ?

ಗಣಪತಿ : ಆದರs ದುರಗಮ್ಮಾ, ನೀವೂ ಯಾಕ ಇಷ್ಟು ಗಡಿಬಿಡೀಲೇ ತಿರಗಿ ಬಂದಬಿಟ್ರಿ? ನೀವೇನು ಇನ್ನ ತಿರಗಿ ಬರಲಿಕ್ಕೀ ಇಲ್ಲಾ ಅಂದಕೊಂಡಿದ್ದಿವಿ ನಾವು.

ದುರಗವ್ವ : ಮಹಾರಾಯಾ, ಉಪವಾಸಾ-ವನವಾಸಾ ಇಷ್ಟ ದಿನಾ ತಗ್ಯೂದರಾಗs ಸಾಕಾಗಿ ಹೋತು ನೋಡು ನಮಗ.

ಗಣಪತಿ : ಉಪವಾಸಾ-ವನವಾಸಾ...? ಯಾಕs ದುರಗಮ್ಮಾ, ಅಲ್ಲೇನ ಕಡಿಮೀ ನಿಮಗ? ನಿಮ್ಮ ಆಹಾರಾ ಬೇಕಾದಷ್ಟ ಸಿಗತsದ ಅಲ್ಲಾ ಅಲ್ಲೆ? ನಮ್ಮಂಥಾ ಹೋಳಿಗೀ ಕಡಬು ತಿನ್ನವರಿಗೆ ಪಂಚೀತಿ...

ದ್ಯಾಮವ್ವ : ಹೋಗೋ ಮಾರಾಯಾ, ಏನ ಸಿಗತsದ? ಆ ಬರ್ಫಿನ ಕೋಣ್ಯಾಗಿಂದ ತಗದು ನಮ್ಮ ಮುಂದ ಎಲ್ಲಾ ತಂದಿಡತಿದ್ದರೇನಪಾ. ಬರ್ಫಿನ ಗಡ್ಡಿಕಿಂತಾ ತಣ್ಣಗ

ನೋಡು, ಬಾಯಾಗಿಟಕೋಳಲಿಕ್ಕೆ ಆಗತಿದ್ದಿಲ್ಲೋ... ಒಂದಿನಾ ಏನು ಬೆಚ್ಚಗಿನ ತಾಜಾ ಕೋಳಿ ಸಿಗಲಿಲ್ಲ ನೋಡ ಅಲ್ಲೆ.

ಕರಿಯಮ್ಮ : ಹೋಗಲಿ, ಇದು ಬ್ಯಾಡೇ ಬ್ಯಾಡಾ ಅಂತ ಬ್ಯಾರೇ ಶಾಕಾಹಾರೀ ಮಂದೀ ಗುಡೀಗೆ ಹೋದರರs ಏನದs, ಬರೇ ಸುಕ್ಕಾ ಮೇವಾ, ಬಾಳಿ ಹಣ್ಣಿವಾ ಪ್ರಸಾದಕ್ಕ... ದಿನಾನೂ... ನೀವು ಬರಲಿಲ್ಲಾ. ಭಾಳ ಶ್ಯಾಣ್ಯಾತನಾ ಮಾಡಿದಿರಿ ನೋಡು.

ಗಣಪತಿ : ಅಪ್ಪಾ, ನಿಮಗೂ ಊಟಾ-ಉಡಗೀದು ಭಾಳ ತ್ರಾಸಾತೇನು?

ವಿಶ್ವೇಶ್ವರ : ಛೆ, ನಮಗೇನು ಅದರ ಪರಿವಿಲ್ಲಾ ಬಿಡು. ಗಡ್ಡಿ-ಗೆಣಸು ತಿಂದು ಇರೂ ಅಂದರೂ ಇರತೀವಿ ನಾವು. ಇನ್ನ ಉಡಗೀದು, ಅದೇನು ಇದ್ದರೂ ಅಷ್ಟs - ಇಲ್ಲದಿದ್ದರೂ ಅಷ್ಟs ನಮಗ.

ರಾಮು : ನಾವೇನು ಇಂಥಾ ಕ್ಷುಲ್ಲಕ ಕಾರಣಕ್ಕಾಗಿ ತಿರಗಿ ಬಂದಿಲ್ಲೇನಪಾ, ನಾವು ದೇಶಾ ಬಿಟ್ಟು ಭಾಳ ದಿನಾ ದೂರ ಹೋಗಿಬಿಟ್ಟರ ಇಲ್ಲಿಯ ಜನತಾದ ಗತೀ ಏನು, ಅವರ ಕಲ್ಯಾಣ ಹ್ಯಾಂಗ ಆಗಬೇಕು ಅಂತ ತಿರಗಿ ಬಂದಿವಿ ನಾವು.

ವಿಶ್ವೇಶ್ವರ : ಹ್ಞಾ, ಖರೆ... ಜನತಾದ ಕಲ್ಯಾಣಕ್ಕಾಗೇ ಭೂಲೋಕಕ್ಕ ಬಂದವರು ನಾವು... ಅದು ನಮ್ಮ ಕರ್ತವ್ಯ, ಅದಕ್ಕs ತಿರಗಿ ಓಡಿ ಬಂದೀವಿ ನೋಡು.

ಕರಿಯಮ್ಮ : ಆಹಾಹಾ, ಜನತಾ ಕಲ್ಯಾಣಾ ಮಾಡಲಿಕ್ಕೆ ಬಂದರಂತs... ಹ್ಯಾಂಗ ನೇತಾ ಮಂದೀ ಹಾಂಗ ಮಾತಾಡಲಿಕ್ಕೆ ಕಲತಾರ ನೋಡs ಇವರೂ...

ದ್ಯಾಮವ್ವ + ದುರಗವ್ವ : ನೋಡವಾ ನೀನs...

ಸೀತಾ : ಹೋಗಲಿ ಬಿಡs ಕರಿಯಮ್ಮಾ, ಗಂಡಸರದು ಯಾವಾಗಲೂ ಹಿಂಗs... ಅವರು ಹೇಳಿದ್ದಕ್ಕs ಹ್ಞೂ ಅಂದಬಿಟ್ಟರಾತು, ಅವರ ego ಕ್ಕ ಚುಚ್ಚಬಾರದು ನೋಡು, ನಮಗ ಖರೇ ಏನದs ಗೊತ್ತಿದ್ದರೂ 'ಆತ್ರೆಪಾ ನಿಮ್ಮದs ಖರೇ' ಅಂದರಾತು... ಇಷ್ಟ ದಿನಾ ಅನಕೋತ ಬಂಧಂಗ...

ಗಣಪತಿ + ಮಾರುತಿ : ತಾಯಂದಿರಾ, ನಿಮ್ಮ ಮಾತು ಖರೇ ಅದ.
ಜಗತ್ತಿನ ಕಲ್ಯಾಣಾ ಆಗಲಿ ಅಂತ ಆಶೀರ್ವಾದ ಮಾಡರಿ.

ನಮಸ್ಕರಿಸುವರು.
ಮೇಲೆ ಆಕಾಶದಲ್ಲಿ ಲಕ್ಷ್ಮಿ-ವಿಷ್ಣು-ನಾರದರು 'ತಥಾಸ್ತು' ಎನ್ನುವರು.
ನಾರದನ 'ನಾರಾಯಣ - ನಾರಾಯಣ' ಭಜನೆಯೊಂದಿಗೆ
ಮುಕ್ತಾಯ.

■ **ದಮಯಂತಿ ನರೇಗಲ್ಲ** : -
ಇಂಪನ, ೪ನೆಯ ಕ್ರಾಸ್, ಸಾಧನಕೇರಿ, ಧಾರವಾಡ-೫೮೦ ೦೦೮ ■

ಕನ್ನಡ ಒಲುಮೆಯ ಮರಾಠೀ ಪ್ರಾಧ್ಯಾಪಕ

ಕೃ. ಶಿ. ಹೆಗಡೆ

ಜಿ. ಪಿ. ರಾಜರತ್ನಂ ಕನ್ನಡ ಗ್ರಂಥಗಳನ್ನು ಹೆಗಲ ಮೇಲೆ ಹೊತ್ತು ಮಾರಾಟ ಮಾಡಿದರು. ಅವರ ನಾಡು-ನುಡಿಯ ಅಭಿಮಾನಕ್ಕಾಗಿ ನಾವೆಲ್ಲ ಹೆಮ್ಮೆ ಪಡುತ್ತೇವೆ. ಆದರೆ ಇಂಥವೇ ಕೆಲಸವನ್ನು ಒಬ್ಬ ಮರಾಠೀ ಪ್ರಾಧ್ಯಾಪಕರು ಮಾಡಿದರು ಎಂದರೆ ನಂಬಲು ಸಾಧ್ಯವೇ? ಮೊನ್ನೆ ಮೊನ್ನೆ ಬೆಂಗಳೂರಿನಲ್ಲಿ ತಮ್ಮ ಮಗನ ಮನೆಯಲ್ಲಿ ದೈವಾಧೀನರಾದ ಶ್ರೀಪಾದ ರಘುನಾಥ ಭಿಡೆ ಸ್ವತಃ ಕನ್ನಡ ಗ್ರಂಥಗಳನ್ನು ಹೆಗಲ ಮೇಲೆ ಹೊತ್ತು ಗಡಿನಾಡು ಪ್ರದೇಶಗಳಲ್ಲಿ ಮಾರಾಟ ಮಾಡಿದ ಒಬ್ಬ ಮರಾಠೀ ಪ್ರಾಧ್ಯಾಪಕ, ಕನ್ನಡ ಅಭಿಮಾನಿ.

ಕನ್ನಡ ಕಲಿಕೆ

ವಿಜಾಪುರದ ಸಂಗನಬಸವೇಶ್ವರ ಮಹಾವಿದ್ಯಾಲಯದಲ್ಲಿ ಅಖಂಡ ನಲ್ವತ್ತು ವರ್ಷ ಮರಾಠೀ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಶ್ರೀಪಾದ ಭಿಡೆ ಹುಟ್ಟಿದ್ದು ೧೦-೧-೧೯೧೯ ರಂದು ನಾಗಪುರದಲ್ಲಿ. ಶಿಕ್ಷಣ ಪಡೆದು ಪುಣೆ, ಮುಂಬಯಿಗಳಲ್ಲಿ. ಪ್ರಾ. ಭಿಡೆ ವಿಜಾಪುರದ ಕಾಲೇಜಿನಲ್ಲಿ ಕೇವಲ ಮರಾಠೀ ಪಾಠ ಮಾಡುತ್ತ ಕೈಕಟ್ಟಿ ಕೂಡ್ರಲಿಲ್ಲ. ಅಲ್ಲಿಯ ನೆಲದ ಭಾಷೆ ಕನ್ನಡವನ್ನು ತಾನು ಅರಗಿಸಿಕೊಂಡದ್ದಷ್ಟೇ ಅಲ್ಲ ಹೆಂಡತಿ, ಮಕ್ಕಳಿಗೂ ಕನ್ನಡ ಕಲಿಸಿದರು. ಮನೆಯಲ್ಲೆಲ್ಲ ಕನ್ನಡ ವಾತಾವರಣ ನಿರ್ಮಿಸಿದರು.

ಸ್ವತಃ ಮರಾಠೀ ನಾಟಕಗಳಲ್ಲಿ ಆಸಕ್ತಿ ಹೊಂದಿದ ಅವರು ಅನೇಕ ಮರಾಠೀ ನಾಟಕಗಳನ್ನು ರಚಿಸಿ, ಅವುಗಳನ್ನು ಪ್ರತ್ಯಕ್ಷ ರಂಗಭೂಮಿಯ ಮೇಲೆ ಸಾದರಪಡಿಸಿ ಮರಾಠೀ ಸಾಹಿತ್ಯ ಪ್ರಪಂಚದಲ್ಲಿ ಚಿರಪರಿಚಿತರಾದರು. ಮರಾಠೀ ಏಕಾಂಕ ನಾಟಕಗಳ ಏಳು ಸಂಕಲನಗಳನ್ನು ಸಂಪಾದಿಸಿದ ಅವರು ಗಿರೀಶ ಕಾರ್ನಾಡರ 'ಯಯಾತಿ' ಮತ್ತು ಕೈಲಾಸಂ ಅವರ 'ಕೀಚಕ'ವನ್ನು ಮರಾಠಿಗೆ ಅನುವಾದಿಸಿದರು. ಅಷ್ಟಕ್ಕೇ ತೃಪ್ತರಾಗದೆ ಅವುಗಳನ್ನೆಲ್ಲ ವಿಜಾಪುರದ ಮರಾಠೀ ಮಂಡಳದ ಮುಖಾಂತರ ತಮ್ಮ ಮನೆಯಲ್ಲೇ ಆಡಿಸಿ ತೋರಿಸಿದರು. ಪ್ರಾ. ಭಿಡೆಯವರ ಮನೆ ಕನ್ನಡ-ಮರಾಠಿಯ ಸಂಗಮವಾಗಿತ್ತು.

'ಶ್ರೀರಂಗ ಪುಸ್ತಕ ಮಾಧ್ಯಮ'

ಸೇವಾ ನಿವೃತ್ತಿಯ ನಂತರ ಹೆಚ್ಚಿನ ಪುರುಷರು ತಡಕಾಡುವುದನ್ನು, ನಿರಾಶೆ ಹೊಂದುವುದನ್ನು ನಾವೆಲ್ಲ ಕಾಣುತ್ತೇವೆ. ಆದರೆ ಪ್ರಾ. ಭಿಡೆ ಉತ್ಕೃಷ್ಟ ಕನ್ನಡ ಸಾಹಿತ್ಯವನ್ನು ಸಾಹಿತ್ಯಾಭಿಮಾನಿಗಳಿಗೆ, ಜನಸಾಮಾನ್ಯರಿಗೆ ದೊರಕಿಸಿ ಕೊಡುವ ಉದ್ದೇಶದಿಂದ ವಿಜಾಪುರದ ತಮ್ಮ ಮನೆಯಲ್ಲೇ 'ಶ್ರೀರಂಗ ಪುಸ್ತಕ ಮಾಧ್ಯಮ'ವನ್ನು ತೆರೆದರು. ಇದನ್ನು ನಡೆಸುವಲ್ಲಿ ಅವರ ಪತ್ನಿ ಶ್ರೀಮತಿ ಶಾಂತಾ ಅವರೇ ಆಸರೆ. ವಿಜಾಪುರದ ಕಾಲೇಜುಗಳಿಗೆ, ಅಷ್ಟೇ ಅಲ್ಲ ವಿಶೇಷವಾಗಿ ಜತ್ತ, ಸಾಂಗ್ಲಿ, ಸೊಲ್ಲಾಪುರದಂತಹ ಗಡಿನಾಡು ಪ್ರದೇಶದಲ್ಲಿರುವ ಕನ್ನಡ ಶಾಲೆಗಳಿಗೆ-ಕಾಲೇಜುಗಳಿಗೆ ಕನ್ನಡ ಪುಸ್ತಕಗಳನ್ನು ಸ್ವತಃ ತಾವೇ ಹೆಗಲ ಮೇಲೆ ಹೊತ್ತು ಮಾರಾಟ ಮಾಡಿದರು.

"ಏನ್ರಪಾ ಭಿಡೆಯವರೇ, ಮರಾಠಿಗರಾದ ನೀವು ಕನ್ನಡ ಪುಸ್ತಕದ ಅಂಗಡಿ ತೆರೆದು ಕನ್ನಡದ ದೊಡ್ಡ ಸೇವೆ ಮಾಡಿದ್ರಲ್ಲ", ಎಂದು ಸಹಜವಾಗಿ ಒಮ್ಮೆ ಅವರನ್ನು ವಿಚಾರಿಸಲಾಯಿತು.

ಅದಕ್ಕೆ, "ಯೇನ್ರಿ! ನಿಮ್ಮತ್ತಿ ನಂತ್ರ ಇವೆಲ್ಲ ಹೊಟ್ಟೆss ತುಂಬ್ಸಿಕ್ಕೆ ಮಾಡಿವ್ರು! ಅದ್ರಲ್ಲೇನು ಅಷ್ಟು ವಿಶೇಷ ಇಲ್ಲ!" ಎಂದು ಸಹಜವಾಗಿ ಉತ್ತರಿಸಿದರು.

ಗಡಿನಾಡು ಜಗತ್ತಿನ ಕನ್ನಡ ಶಿಕ್ಷಕರೊಬ್ಬರು ಇತ್ತೀಚೆಗೆ ಪುಣೆಯಲ್ಲಿ, "ಪ್ರಾ. ಭಿಡೆ ವಿಜಾಪುರ ಬಿಟ್ಟಿ ನಂತ್ರ ಕಳೆದ ಇಪ್ಪತ್ತೈದು ವರ್ಷಗಳಿಂದ ನಮ್ಮ ಕಡೀಗs ಕನ್ನಡ ಪುಸ್ತಕಗಳೇ ಸುಳ್ಯೋದಿಲ್ರಿ", ಎಂದು ಪ್ರಾಮಾಣಿಕವಾಗಿ ನುಡಿದರು.

"ಕನ್ನಡ ಪುಸ್ತಕ ವ್ಯಾಪಾರದಿಂದ ಪುಡಿಗಾಸೂ ಸಿಗುವುದಿಲ್ಲ", ಎಂದು ಜೋಷ್ನಿ ಹಾಕುವವರಿದ್ದಾರೆ. ಈ ಕುರಿತು ಪ್ರಾ. ಭಿಡೆಯವರನ್ನು ವಿಚಾರಿಸಿದಾಗ "ನಾ ವ್ಯಾಪಾರ ಮಾಡೋ ಗ್ರಂಥಗಳನ್ನು ಗಡಿನಾಡಿನ ಶಾಲೆಗಳು ಖರೀದಿ ಮಾಡ್ತಿದ್ದರ್ರಿ, ವರ್ಷಕ್ಕ ಕರ್ಚುಯೆಲ್ಲಾ ತೆಗ್ದು ಒಂದ್ರಿಂದ ಒಂದೂವರೀ ಲಕ್ಷದ ವರೆಗೂ ಹಣ ಗಳಿಸೀನ್ರಿ", ಎಂದು ಅಷ್ಟೇ ವಿನಮ್ರವಾಗಿ ನುಡಿದರು.

ಕನ್ನಡ-ಮರಾಠೀ ಸಮನ್ವಯ

ಎಂಬತ್ತನೇ ದಶಕದ ಕೊನೆಯ ಹಂತದಲ್ಲಿ ಪ್ರಾ. ಭಿಡೆ ವಿಜಾಪುರಕ್ಕೆ ವಿದಾಯ ಹೇಳಿ ಮಹಾರಾಷ್ಟ್ರದ ಸಾಂಸ್ಕೃತಿಕ ರಾಜಧಾನಿ ಪುಣೆಯಲ್ಲಿ ನೆಲೆಸುವ ನಿರ್ಣಯ ತೆಗೆದುಕೊಂಡರು. ಏಪ್ರಿಲ್ ೯, ೧೯೮೯ರಲ್ಲಿ ಪುಣೆಯಲ್ಲಿ ಮರಾಠೀ-ಕನ್ನಡ ಸ್ನೇಹವರ್ಧನ ಕೇಂದ್ರ ಸ್ಥಾಪನೆಯಾಯಿತು. ಭಾಷೆ, ಸಾಹಿತ್ಯ, ಸಂಗೀತ, ಕಲೆ, ಅನುವಾದ, ನೇರ ಸಂಪರ್ಕಗಳ ಮುಖಾಂತರ ಮರಾಠಿಗರು-ಕನ್ನಡಿಗರಲ್ಲಿ ಸಂಬಂಧವನ್ನು ವೃದ್ಧಿಸುವುದೇ ಈ ಸಂಸ್ಥೆಯ ಪ್ರಮುಖ ಉದ್ದೇಶ. ದಿನಾಂಕ ೧೦ ಏಪ್ರಿಲ್ ಮುಂಜಾನೆ ೬-೩೦ಕ್ಕೆ ಸರಿಯಾಗಿ ಹೊಸತಾಗಿ ಉದ್ಘಾಟನೆಯಾದ ಈ ಸಂಸ್ಥೆಯ ಸದಸ್ಯರೊಬ್ಬರ ಮನೆಯ ಕರೆಗಂಟೆ ಬಾರಿಸಿತು! ಇಷ್ಟು ಮುಂಜಾನೆ ಯಾರಿರಬಹುದು? ಎಂದು ಕಣ್ಣು ಉಜ್ಜುತ್ತಾ ಬಾಗಿಲು ತೆರೆದರೆ, "ನಾ ಶ್ರೀಪಾದ ಭಿಡೇರ್ರಿ. ನಿನ್ನೆ ನಿಮ್ಮ ಕೇಂದ್ರದ ಉದ್ಘಾಟನೆ ಸಮಾರಂಭದಲ್ಲಿ ನಾ ಹಾಜರ್ ಇದ್ದಿನ್ರೀ. ಅದಕ್ಕಾಗಿ ನಿಮಗೆಲ್ಲ ಅಭಿನಂದನೇರ್ರಿ. ಕೇಂದ್ರದ ಸದಸ್ಯತ್ವ ತೊಗೋಬೇಕ್ರೀ..." ಇತ್ಯಾದಿ ಮಾತು ಆರಂಭಿಸಿಬಿಟ್ಟರಂತೆ!

ಅವರಿಗೆ ಕನ್ನಡ-ಮರಾಠಿಯ ಸಮನ್ವಯದಲ್ಲಿರುವ ಕಳಕಳಿಯನ್ನು ನೋಡಿ ಅವರನ್ನು ಕೇಂದ್ರದ ಶಾಶ್ವತ ವಿಶ್ವಸ್ತರನ್ನಾಗಿಯೇ ನಂತರ ತೆಗೆದುಕೊಳ್ಳಲಾಯಿತು.

ಕೇಂದ್ರದ ಸಭೆಗಳಿಗೆ ಆರಂಭದ ಹಂತದಲ್ಲಿ ತಪ್ಪದೇ ಇರುತ್ತಿದ್ದ ಪ್ರಾ. ಭಿಡೆಯವರು ಕನ್ನಡದ ಕುರಿತು ಮೂರು ಮಾತುಗಳನ್ನು ಒತ್ತಿ ಒತ್ತಿ ಹೇಳುತ್ತಿದ್ದರು :

೧. ಕೇಂದ್ರವು ಮಹಾರಾಷ್ಟ್ರದ ಸಾಂಸ್ಕೃತಿಕ ರಾಜಧಾನಿ ಪುಣೆಯಲ್ಲಿ ಒಂದು ಬೃಹತ್ ಸ್ವರೂಪದ ಕನ್ನಡ ಸಮ್ಮೇಳನ ಆಯೋಜಿಸಬೇಕು.
೨. ಪುಣೆಯ ವಿಶ್ವವಿದ್ಯಾಲಯದಲ್ಲಿ, ಅದರಂತೆ ಪುಣೆಯ ಕನಿಷ್ಠ ಒಂದು ಮಹಾವಿದ್ಯಾಲಯ ದಲ್ಲಿ ಕನ್ನಡ ವಿಷಯ ಕಲಿಸುವ ವ್ಯವಸ್ಥೆ ಮಾಡಬೇಕು.
೩. ಕನ್ನಡೇತರರಿಗೆ ಕನ್ನಡ ಕಲಿಸುವ ಕಾರ್ಯ ಕೈಗೆತ್ತಿಕೊಳ್ಳಬೇಕು.

ಈ ಮೂರರಲ್ಲಿ ಕೊನೆಯ ಕಾರ್ಯವನ್ನು ೧೯೯೨ರಲ್ಲೇ ಕೇಂದ್ರ ಕೈಗೆತ್ತಿಕೊಂಡಿತು. ಉಳಿದ ಎರಡು ಕೇವಲ ಕನಸಾಗುತ್ತವೋ ಏನು ಎಂಬುದನ್ನು ಕಾಲವೇ ನಿರ್ಧರಿಸಬೇಕು!

ತಮ್ಮ ಸ್ಪಷ್ಟೋಕ್ತಿ, ನೇರ ಮಾತುಗಳು, ಭಿಡೆ ಹೆಸರಿಗೆ ವ್ಯತಿರಿಕ್ತವಾದ ಅವರ ನಿರ್ಭಿಡೆಯ ವಿಚಾರಗಳಿಂದ ಅವರು ಎಲ್ಲರ ಒಲವಿಗೆ ಪಾತ್ರರಾದರು.

ಕನ್ನಡ ಕುರಿತಾಗಿ ಲೇಖ

ಕರ್ನಾಟಕದಿಂದ ಕನ್ನಡ ಗ್ರಂಥಗಳನ್ನು ಮಹಾರಾಷ್ಟ್ರಕ್ಕೆ ಒಯ್ದು ಕನ್ನಡ ಗ್ರಂಥಗಳ ಬೆಲೆ ಮರಾಠೀ ಗ್ರಂಥಗಳಿಗೆ ಹೋಲಿಸಿದಾಗ ಎಷ್ಟು ಕಡಿಮೆಯಾಗಿರುತ್ತವೆಂಬುದನ್ನು ಅವರು ಮರಾಠೀ ಸಾಹಿತಿಗಳಿಗೆ ಒತ್ತಿ ಒತ್ತಿ ಹೇಳುತ್ತಿದ್ದರು. ಅಷ್ಟೇ ಅಲ್ಲ, ತನ್ನ ಮಾತನ್ನು ಸಮರ್ಥಿಸಿಕೊಳ್ಳಲು ಕನ್ನಡ ಸಾಹಿತ್ಯ ಪರಿಷತ್ತಿನ 'ರತ್ನಕೋಶ',- ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳ ಉದಾಹರಣೆ ನೀಡುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ-ಚಟುವಟಿಕೆಗಳು, ಕನ್ನಡ ಪುಸ್ತಕ ಮಾರಾಟ, ಕನ್ನಡ ಸ್ತ್ರೀ ಸಾಹಿತ್ಯ ಇತ್ಯಾದಿಗಳ ಕುರಿತು ಪ್ರಾ. ಭಿಡೆ ಮರಾಠಿಯ ಜನಪ್ರಿಯ ದೈನಿಕ ಪುಣೆಯ 'ಸಕಾಳ' ಇತ್ಯಾದಿಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ.

ಮಹಾಕಾವ್ಯಗಳ ಅಭ್ಯಾಸಕ

ರಾಮಾಯಣ, ಮಹಾಭಾರತಗಳು ನಮ್ಮ ಸಂಸ್ಕೃತಿಯ ಪ್ರತೀಕಗಳು. ಇವು ಜಗತ್ತಿನ ಎಲ್ಲ ಭಾಷೆಗಳ ವಿದ್ವಜ್ಜನರ, ಅದರಂತೆಯೇ ಸಾಮಾನ್ಯ ಓದುಗರ ಆದರ, ಅಭಿಮಾನಿಗಳಿಗೆ ಒಳಗಾಗಿವೆ. ಪ್ರಾ. ಭಿಡೆಯವರು ಈ ಗ್ರಂಥಗಳ ಚರ್ವಿತಚರ್ವಣಗಳಲ್ಲಿ ಆಸಕ್ತಿ ಹೊಂದದೆ ಇನ್ನೂವರೆಗೆ ಸಂಪೂರ್ಣವಾಗಿ ಅಲಕ್ಷ್ಯಕ್ಕೀಡಾಗಿದ್ದ ಶಾಪಗಳು, ವರಗಳನ್ನು ತಮ್ಮ ಅಭ್ಯಾಸದ ವಿಷಯವನ್ನಾಗಿ ಆಯ್ದುಕೊಂಡರು. ಕಾರಣ ಎರಡೂ ಮಹಾಕಾವ್ಯಗಳಲ್ಲಿ ಶಾಪ ಮತ್ತು ವರಗಳ ಸ್ಥಾನ ವೈಶಿಷ್ಟ್ಯಪೂರ್ಣವಾಗಿದೆ. ಅಷ್ಟೇ ಅಲ್ಲದೆ ಎರಡೂ ಮಹಾಕಾವ್ಯಗಳಲ್ಲಿ ಶಾಪ ಮತ್ತು ವರಗಳು ನ್ಯಾಯ-ಅನ್ಯಾಯಗಳಲ್ಲಿ ಸಮತೋಲವನ್ನು ಕಾಯ್ದುಕೊಳ್ಳುವಲ್ಲಿ ಮಹತ್ವದ ಪಾತ್ರ ವಹಿಸಿವೆ. "ವೇದ, ಉಪನಿಷತ್ತುಗಳು, ಪುರಾಣಗಳು ಇತ್ಯಾದಿಗಳಲ್ಲೂ ಶಾಪ-ವರಗಳಿವೆ. ಅವನ್ನೇಕೆ ನೀವು ಅಭ್ಯಾಸ ಮಾಡಿಲ್ಲ?" ಎಂದು ಪ್ರಾ. ಭಿಡೆಯವರನ್ನೊಮ್ಮೆ ವಿಚಾರಿಸಲಾಯಿತು. "ನಿವೃತ್ತಿಯ ನಂತರ ಈ ಎಲ್ಲ ಗ್ರಂಥಗಳನ್ನು ಅವಲೋಕಿಸಿ ಶಾಪ-ವರಗಳನ್ನು ಅಭ್ಯಸಿಸುವುದು ನನ್ನ ಶಕ್ತಿ ಮೀರಿದ ಸಂಗತಿ, ನನ್ನಿಂದ ನೀಗದ ಮಾತು. ಮೊದಲು ರಾಮಾಯಣವನ್ನಷ್ಟೇ ಅಭ್ಯಾಸಕ್ಕಾಗಿ ಎತ್ತಿಕೊಂಡೆ. ಆ ಗ್ರಂಥ ಓದುಗರಿಗೆ ಹಿಡಿಸಿದ್ದನ್ನು ಕಂಡು ಉತ್ತೇಜಿತನಾಗಿ ಮಹಾಭಾರತದತ್ತ ಹೊರಳಿದೆ", ಎಂದು ಅವರೆಂದರು.

ಶಾಪ-ವರಗಳ ಸರಮಾಲೆ!

"ವಾಲ್ಮೀಕಿ ರಾಮಾಯಣ : ಶಾಪ ಮತ್ತು ವರ" ೧೯೮೭ರಲ್ಲಿ ಪ್ರಕಟವಾಯಿತಷ್ಟೇ. ಆ ಕುರಿತು ಮರಾಠೀ ಓದುಗರಲ್ಲಿ ಉಂಟಾದ ಜಿಜ್ಞಾಸೆ, ಚರ್ಚೆ ಅದಕ್ಕೆ ಸಿಕ್ಕಿದ ಪ್ರೋತ್ಸಾಹದಿಂದ ಪ್ರಭಾವಿತರಾದ ಪ್ರಾ. ಭಿಡೆ ೫ ವರ್ಷಗಳ ಕಾಲಾವಧಿಯಲ್ಲಿ ನಾಲ್ಕುನೂರಕ್ಕಿಂತಲೂ ಹೆಚ್ಚು ಶಾಪ ಹಾಗೂ ವರಗಳನ್ನು ಒಳಗೊಂಡ ಮಹಾಭಾರತದ ಶಾಪಗಳನ್ನು ಎರಡು ಗ್ರಂಥಗಳಲ್ಲಿ ಮಹಾಭಾರತದಲ್ಲಿ ವರಗಳು, ಮಹಾಭಾರತದಲ್ಲಿ ಅಲಕ್ಷಿತ ಕಥೆಗಳು, ರಾಮಾಯಣ ಹಾಗೂ ಮಹಾಭಾರತ ಹೊಸ ಹೊಳಹು– ಇತ್ಯಾದಿ ಗ್ರಂಥಗಳನ್ನು ಪ್ರಕಟಿಸಿದರು.

ಇತ್ತೀಚೆಗಷ್ಟೇ ಮಹಾಭಾರತ ರಾಮಾಯಣಗಳಲ್ಲಿ ಆತ್ಮಹತ್ಯೆ ಎಂಬ ಗ್ರಂಥ ಪುಣೆಯಲ್ಲಿ ಬಿಡುಗಡೆಯಾಯಿತು. ಅದರ ಕನ್ನಡ ಅನುವಾದದ ಕಾರ್ಯವೂ ನಡೆದಿದೆ. ಅಷ್ಟೇ ಅಲ್ಲ ಅವರು ಇಚೆಗೆ ನಿಧನರಾಗುವುದಕ್ಕಿಂತ ಕೆಲವು ದಿನಗಳ ಹಿಂದೆ `ಮಹಾಭಾರತ-ರಾಮಾಯಣಾತ್ ಮದನಪೀಡಾ' ಅಂದರೆ `ಮಹಾಭಾರತ ರಾಮಾಯಣಗಳಲ್ಲಿ ಕಾಮಪೀಡೆ' ಎಂಬ ಅಪೂರ್ವ ಕಾರ್ಯ ಕೈಗೆತ್ತಿಕೊಂಡಿದ್ದರು. ಪಾಪ! ಆ ಮನ್ಮಥನಿಗೆ ಪ್ರಾ. ಭಿಡೆಯವರ ಪೀಡೆ ಸಹಿಸಲಾಗಲಿಲ್ಲವೇನೋ!

ಅನುವಾದ ಕಾರ್ಯ

ಮಹಾಕಾವ್ಯದ ವರ-ಶಾಪ - `ಕುಮಾರ ಸಂಭವ'ಗಳಂತಹ ಮಹತ್ವದ ವಿಷಯಗಳು ಕೇವಲ ಮರಾಠಿಗಷ್ಟೇ ಸೀಮಿತವಾಗಬಾರದು– ಇತರ ಭಾಷಿಕರಿಗೂ ಅವು ತಲುಪಬೇಕೆಂಬ ಉದ್ದೇಶದಿಂದ ಕನ್ನಡ, ಹಿಂದೀ, ತೆಲುಗು, ಇಂಗ್ಲೀಷ್ ಭಾಷೆಗಳಲ್ಲಿ ಅವುಗಳನ್ನೆಲ್ಲ ಅನುವಾದಗೊಳಿಸಲು ಪ್ರಾ. ಭಿಡೆ ನಿರ್ಧರಿಸಿದ್ದಷ್ಟೇ ಅಲ್ಲ, ಈ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಿ ಆ ಆ ಭಾಷೆಗಳಲ್ಲಿ ಯೋಗ್ಯ ಅನುವಾದಕರನ್ನು ಶೋಧಿಸಿ ಕೆಲಸದ ಸ್ವರೂಪವನ್ನು ತಿಳಿಸಿ ಕೊಟ್ಟರು. ಅನುವಾದಕರಿಗೆ ತನ್ನಿಂದಾಗಿ ತೊಂದರೆಯಾಗಕೂಡದೆಂದು ಪ್ರಕಾಶಕರನ್ನೂ ತಾವೇ ಸ್ವತಃ ಸಂಪರ್ಕಿಸಿ, ಪ್ರಕಟಣೆ ಕಾರ್ಯಕ್ಕೆ ಚಾಲನೆ ನೀಡಿದರು. ಕನ್ನಡದಲ್ಲಿ ಗೀತಾ ಬುಕ್ ಹೌಸ್, ಮೈಸೂರು ನೀಡಿದ ಸಹಕಾರವನ್ನು ಅವರು ಕೊನೆಯ ಗಳಿಗೆಯ ವರೆಗೂ ಸ್ಮರಿಸುತ್ತಿದ್ದರು. ಕೆಲವು ಭಾಷೆಗಳ ಅನುವಾದ ಕಾರ್ಯಗಳಲ್ಲಿ ಆರ್ಥಿಕ ಸಹಾಯಕ್ಕೆ ಮೀಸಲಾದ ಸಂಸ್ಥೆಗಳ ಸಹಾಯವನ್ನು ಪಡೆಯಲು ಅವರು ಯಶಸ್ವಿಯಾದರು.

ಪ್ರೇರಣೆ

`ವಾಲ್ಮೀಕಿ ರಾಮಾಯಣ : ಶಾಪ ಮತ್ತು ವರ' ಈ ಗ್ರಂಥದಂತೆಯೇ `ಮಹಾಭಾರತದ ಶಾಪಗಳು' ಎಂಬ ಗ್ರಂಥಕ್ಕೆ ತನ್ನ ತರುಣ ಮಿತ್ರರಾದ ಮುದ್ದೇಬಿಹಾಳ ಮಹಾವಿದ್ಯಾಲಯದ ಗ್ರಂಥಪಾಲಕರಾದ ಪಂಡಿತ ಕನಮಡಿಯವರೇ ಪ್ರೇರಣೆ ನೀಡಿದ್ದರೆಂದು ಅವರ ಸಹಕಾರವನ್ನು ಪ್ರಾ. ಭಿಡೆ ಸ್ಮರಿಸುತ್ತಿದ್ದರು. ಅದರಂತೆಯೇ ಗುರುತುಲ್ಯರೂ, ಸನ್ಮಿತ್ರರೂ ಆಗಿರುವ ಪುಣೆಯ ಡಾ. ಗ. ನ. ಸಾಠೆ ತಂದೆಯ ಮಮತೆಯಿಂದ ನಿವೃತ್ತಿಯ ನಂತರ ತನಗೆ ಪ್ರೇರಣೆ ನೀಡಿ ಅದನ್ನೆಲ್ಲ ಬೆಳೆಯಿಸಿ ಕೆಲಸಕ್ಕೆ ಪ್ರವೃತ್ತ ಮಾಡಿದರೆನ್ನುತ್ತಾರೆ.

ಸ್ನೇಹತಂತು!

ತನ್ನ ಬರವಣಿಗೆಯ ಬಹುಮಟ್ಟಿಗಿನ ಶ್ರೇಯಸ್ಸೆಲ್ಲ ತನ್ನ ಮಡದಿ ಸೌ. ಶಾಂತಾ ಅವರಿಗೆ ಸಲ್ಲಬೇಕು ಎಂದು ಪ್ರಾ. ಭಿಡೆ ಹೇಳುತ್ತಾರೆ. ಕಾರಣ ಅವರ ಶ್ರೀಮತಿಯೇ ಅವರ ಮೊದಲ ಓದುಗರು. ಸೌಭಾಗ್ಯವತಿ ಹೇಗಾದರೂ `ಮನೆಯವರು!' ಎಂಬ ಕಾರಣದಿಂದ ಅಲಕ್ಷ್ಯಕ್ಕೀಡಾದ ಕೊರಗು ಪ್ರಾ. ಭಿಡೆಯವರಿಗಿದೆ. ಕನ್ನಡ ಪುಸ್ತಕ ಅಂಗಡಿ ಆರಂಭಿಸಲು ಪ್ರೇರಣೆ ನೀಡಿದವರೂ ಅವರ ಶ್ರೀಮತಿಯವರೇ. ತನ್ನ ಬರವಣಿಗೆಯಿಂದ ಹೆಚ್ಚಿನ ತೊಂದರೆ ತನ್ನ ಹೆಂಡತಿಗಾಗಿದೆ, ಎಂದು ಅವರೆನ್ನುತ್ತಿದ್ದರು. ``ಐವತ್ತು ವರ್ಷಗಳ ಕಾಲ ಆಲದ ಮರದ ಜೊತೆಗೆ ನೂಲು

ಸುತ್ತುತ್ತ ಬಂದಿರುವ ಪುಣ್ಯ ಅವಳ ಪಾಲಿಗಿದೆ," ಎಂದು ಅವರು ತಮ್ಮ ಗ್ರಂಥ ಒಂದರಲ್ಲಿ ಆ ಸ್ನೇಹತಂತುವನ್ನು ಸ್ಮರಿಸುತ್ತಾರೆ.

ಪ್ರತಿಭಟನೆ

೧೯೬೧ ರಲ್ಲಿ ಕರ್ನಾಟಕ ಮರಾಠೀ ಸಾಹಿತ್ಯ ಪರಿಷತ್ತಿನ ಪ್ರಥಮ ಸಾಹಿತ್ಯ ಸಮ್ಮೇಳನ ಗದುಗಿನಲ್ಲಿ ಜರುಗಿತು. ಹೊರನಾಡ ಪ್ರತಿನಿಧಿಯಾಗಿ ಪ್ರಾ. ಶ್ರೀಪಾದ ರಘುನಾಥ ಭಿಡೆ ಅದರಲ್ಲಿ ಪಾಲ್ಗೊಂಡರು. ಅಷ್ಟೇ ಅಲ್ಲ ಕೊನೆಯ ದಿನದ ಬಹಿರಂಗ ಅಧಿವೇಶನದಲ್ಲಿ ಮಹಾರಾಷ್ಟ್ರದಲ್ಲಿ, ಅದರಲ್ಲಿಯೂ ಮುಂಬಯಿಯ ಕಾಲೇಜುಗಳಲ್ಲಿ ಕನ್ನಡ ಶಿಕ್ಷಣಕ್ಕೆ ಒದಗುತ್ತಿರುವ ಅನ್ಯಾಯಗಳನ್ನು ಅವರು ತುಂಬ ಕಟುವಾದ ಶಬ್ದಗಳಿಂದ ಖಂಡಿಸಿದರು. "ಮಹಾರಾಷ್ಟ್ರದ ಕಾಲೇಜುಗಳಲ್ಲಿ ಬಹಳ ವರ್ಷಗಳಿಂದ ನಡೆದು ಬಂದ ಕನ್ನಡ ವಿಭಾಗಗಳನ್ನು ಅಲ್ಲಿಯ ಪ್ರಾಧ್ಯಾಪಕರು ನಿವೃತ್ತರಾದ ಕೂಡಲೇ ವಿದ್ಯಾರ್ಥಿಗಳಿಲ್ಲ ಎಂಬ ನೆಪ ಹೂಡಿ ಒಂದೊಂದಾಗಿ ವಿಭಾಗಗಳನ್ನೇ ರದ್ದು ಮಾಡುವ ವಿಧಾನ ನೆರೆಹೊರೆಯ ಭಾಷಿಕ ಬಾಂಧವ್ಯಕ್ಕೆ ಕೊಡುಕೊಳ್ಳುವಿಕೆಗೆ ಆತಂಕಕಾರಿ", ಎಂದು ಅವರು ಒತ್ತಿ ಒತ್ತಿ ಹೇಳಿದರು. "ಕರ್ನಾಟಕದಲ್ಲಿ ಮರಾಠೀ ವಿಭಾಗದ ಪ್ರಾಧ್ಯಾಪಕ ನಿವೃತ್ತನಾದರೂ ಸಹ ಹಿಂದಿನಿಂದ ನಡೆದು ಬಂದ ಮರಾಠೀ ವಿಭಾಗಗಳಲ್ಲಿ ಕೇವಲ ಒಂದೆರಡು ವಿದ್ಯಾರ್ಥಿಗಳಿದ್ದರೂ ವಿಭಾಗ ಮುಂದುವರಿದಿರುವಾಗ ಮಹಾರಾಷ್ಟ್ರದಲ್ಲೇಕೆ ಕನ್ನಡಕ್ಕೆ ಮಲತಾಯಿ ಧೋರಣೆ", ಎಂದು ಕಿಡಿಕಾರಿ ಮರಾಠಿಗರನ್ನು ಮರಾಠೀ ಸಾಹಿತ್ಯ ಪರಿಷತ್ತಿನ ವೇದಿಕೆಯಲ್ಲೇ ಎಚ್ಚರಿಸಿದ ಶ್ರೇಯ ಈ ಮರಾಠೀ ಪ್ರಾಧ್ಯಾಪಕನಿಗೆ ಸಲ್ಲುತ್ತದೆ. ಇದೊಂದು ಮರಾಠೀ ಸಾಹಿತ್ಯ ಸಮ್ಮೇಳನದ ಇತಿಹಾಸದಲ್ಲಿಯ ಅಪರೂಪ!

ಅವರ ಭಾಷಣ ಮುಗಿದದ್ದೇ ತಡ ಒಬ್ಬ ಮರಾಠೀ ಸಾಹಿತಿ ಓಡುತ್ತ ಬಂದು, "ನೀವು ಮರಾಠೀ ಸಾಹಿತಿಯೋ ಅಥವಾ ಕನ್ನಡ ಪರವಾಗಿ ಮಾತನಾಡುವ ಏಜೆಂಟನೋ", ಎಂದು ಕೇಳಿದರಂತೆ! ಅದಕ್ಕೆ ಪ್ರಾ. ಭಿಡೆಯೂ ಬೆದರಲಿಲ್ಲ. "ನಾನು ಸದ್ಯ ಮಹಾರಾಷ್ಟ್ರದ ಕಾಲೇಜುಗಳಲ್ಲಿ ಕನ್ನಡಕ್ಕೆ ನಡೆದಿರುವ ಅನ್ಯಾಯವನ್ನು ಅಂಕಿ-ಅಂಶ ಹಾಗೂ ವಸ್ತುಸ್ಥಿತಿಯ ಆಧಾರದಿಂದ ಹೇಳುತ್ತಿದ್ದೇನೆ. ನನ್ನ ಮಾತುಗಳು ನಾನೊಬ್ಬ ಕನ್ನಡ ಏಜೆಂಟ್ ಎಂದಾದರೆ ನನಗಿಲ್ಲಿ ಸ್ಥಾನವಿಲ್ಲ, ನೀವು ನನ್ನನ್ನು ಅರ್ಥ ಮಾಡಿಕೊಂಡಿಲ್ಲ", ಎಂದು ಎದ್ದು ನಡೆದರಂತೆ! ಈ ಗಡಸು, ಈ ದಿಟ್ಟತನವನ್ನು ತಮಗೆ ಸರಿ ಕಂಡ ಎಲ್ಲ ವೇದಿಕೆಗಳಲ್ಲಿ ಸಭೆಗಳಲ್ಲಿ ಪ್ರಾ. ಭಿಡೆ ತೋರಿಸಿದ್ದಾರೆ. ಅಷ್ಟೇ ಅಲ್ಲ, ಆ ಕುರಿತು ಟೀಕೆ ಟಿಪ್ಪಣಿಗಳಾದಾಗಲೆಲ್ಲ ಸ್ವತಃ ತಾವೇ ಇಂತಹ ವೇದಿಕೆಗಳಿಂದ ದೂರವಾಗಿದ್ದು ಪ್ರಾಯಶ್ಚಿತ್ತ ಮಾಡಿಕೊಂಡಿದ್ದಾರೆ.

ಪ್ರಶಸ್ತಿಗಳು

ಶುದ್ಧ ವ್ಯವಹಾರ, ಸ್ಪಷ್ಟೋಕ್ತಿ, ನಿಸ್ಪೃಹ ನಡವಳಿಕೆಗಳಿಗೆ ಪ್ರಾ. ಭಿಡೆ ಅನುಕರಣೀಯ ವ್ಯಕ್ತಿ. ಮರಾಠೀ ಪ್ರಾಧ್ಯಾಪಕರೊಬ್ಬರು ಕನ್ನಡ ಭಾಷೆ, ಸಾಹಿತ್ಯಕ್ಕೆ, ಗ್ರಂಥ ಮಾರಾಟಕ್ಕೆ ನೀಡಿದ ಸೇವೆ, ತೋರಿದ ಒಲುಮೆ, ಅಪೂರ್ವ ಸ್ವರೂಪದ್ದು. ಇದನ್ನೆಲ್ಲ ಅವಲೋಕಿಸಿದ್ದ ಅವರ ಪರಿಚಿತರೊಬ್ಬರು ಪುಣೆಯ ಮರಾಠೀ-ಕನ್ನಡ ಸ್ನೇಹವರ್ಧನ ಕೇಂದ್ರಕ್ಕೆ ಭೇಟಿ ನೀಡಿ,

"ಪ್ರಾ. ಭಿಡೆಯವರ ಹೆಸರನ್ನು ಮುಂಚೈ ಕರ್ನಾಟಕ ಸಂಘದ 'ವರದರಾಜ' ಆದ್ಯ ಪ್ರಶಸ್ತಿಗೆ ನೀವ್ಯಾಕೆ ಶಿಫಾರಸ್ಸು ಮಾಡಲಿಲ್ಲ?" ಎಂದು ಸಹಜವಾಗಿ ವಿಚಾರಿಸಿದರು. ಈಗಾಗಲೇ ಈ ದಿಶೆಯಲ್ಲಿ ಕೇಂದ್ರ ಶಿಫಾರಸ್ಸು ಮಾಡಿದ ವಿಚಾರವನ್ನು ಅವರಿಗೆ ತಿಳಿಸಲಾಯಿತು. ಈ ಸಂಗತಿ ಹೇಗೋ ಪ್ರಾ. ಭಿಡೆಯವರಿಗೆ ತಿಳಿದಾಗ ಅವರು ಕೆಂಡ ಕಾರಿದರಷ್ಟೇ ಅಲ್ಲ ತುಂಬ ಕಟುವಾಗಿ ಪತ್ರ ಬರೆದರು. "ಪುನಃ ಪುನಃ ನನ್ನ ಹೆಸರನ್ನು ಆದ್ಯ ಪುರಸ್ಕಾರಕ್ಕೆ ನನ್ನನ್ನು ವಿಚಾರಿಸದೆ ಯಾಕೆ ಶಿಫಾರಸ್ಸು ಮಾಡಿದಿರಿ. ಇದರಿಂದ ನನ್ನ ಕುರಿತು ಸಮಾಜದಲ್ಲಿ ಗೈರು ಭಾವನೆಯಾದೀತು!" ಎಂಬುದು ಅವರ ಸಂಕಟವಾಗಿತ್ತು. ಪ್ರಶಸ್ತಿಗಾಗಿ ಪರದಾಡುವ ಈ ಸಾಹಿತ್ಯವಲಯಗಳಲ್ಲಿ ನೈಜ ಯೋಗದಾನ ಮಾಡಿಯೂ ಮರೆಯಲ್ಲಿರುವ ಪ್ರಾ. ಭಿಡೆಯವರಂತಹ ಪ್ರಾಮಾಣಿಕರು ಇದ್ದಾರೆಂಬುದಂತೂ ವಾಸ್ತವ.

ಪ್ರಾ. ಭಿಡೆಯವರ ಯೋಗದಾನವನ್ನು, ಸಾಹಿತ್ಯ ಸೇವೆಯನ್ನು ಗುರುತಿಸಿ ಹಲವು ಪ್ರಶಸ್ತಿಗಳು ಅವರನ್ನು ಹುಡುಕುತ್ತ ಮನೆಯ ಬಾಗಿಲಿಗೆ ಬಂದಿವೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ ಶ್ರೀಮತಿ ಸರಸ್ವತಿ ರಿಸಬೂಡ ಅನುವಾದಗೊಳಿಸಿದ ಅವರ ಕನ್ನಡ ಗ್ರಂಥ 'ವಾಲ್ಮೀಕಿ ರಾಮಾಯಣ– ಶಾಪ ಮತ್ತು ವರ'ಕ್ಕೆ ದೊರಕಿದೆ. 'ಮಹಾಭಾರತದ ವರದಾನ' ಎಂಬ ಮರಾಠೀ ಗ್ರಂಥಕ್ಕೆ ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನ ರಾಜ್ಯಮಟ್ಟದ 'ಉತ್ಕೃಷ್ಟ ವಾಙ್ಮಯ ನಿರ್ಮಿತಿ' ಪ್ರಶಸ್ತಿ ಬಂದಿದೆ. ಅದರಂತೆ 'ರಾಮಾಯಣ-ಮಹಾಭಾರತ ಶಾಪ-ವರ' ಕೃತಿಗಳಿಗೆ ಮರಾಠೀ ಗ್ರಂಥೋತ್ತೇಜಕ ಸಂಸ್ಥೆ ಪ್ರಶಸ್ತಿ, ಇಚಲಕರಂಜಿ ಎಜ್ಯುಕೇಶನ್ ಆ್ಯಂಡ್ ಚೆರಿಟೇಬಲ್ ಟ್ರಸ್ಟ್ ಪ್ರಶಸ್ತಿ, ಅವರ ಸಮಗ್ರ ಬರವಣಿಗೆಯ ಯೋಗದಾನಕ್ಕಾಗಿ ಪುಣೆಯ ಜ್ಞಾನಬೋಧಿನಿಯ ಸಂಸ್ಕೃತ-ಸಂಸ್ಕೃತಿ ಪ್ರಶಸ್ತಿ, ಮಹಾರಾಷ್ಟ್ರ ಸಾಹಿತ್ಯ ಪರಿಷತ್ತಿನ ಮೃತ್ಯುಂಜಯ ಪ್ರಶಸ್ತಿ ಮುಂತಾದವುಗಳು ಪ್ರಾಪ್ತವಾಗಿವೆ.

ಪ್ರಾ. ಶ್ರೀಪಾದ ಭಿಡೆ ಶ್ರೀಪಾದ ಸೇರಿದ್ದು ನಿಜ. ಆದರೆ ಮರಾಠೀ ಪ್ರಾಧ್ಯಾಪಕನೊಬ್ಬ ಕನ್ನಡ ನಾಡು-ನುಡಿ-ಸಂಸ್ಕೃತಿಗಾಗಿ ಮಾಡಿದ ಅಳಿಲು ಸೇವೆ, ಕನ್ನಡ ಪುಸ್ತಕ ಮಾರಾಟಕ್ಕಾಗಿ ನಡೆಸಿದ ಹೋರಾಟ, ಕನ್ನಡ ಭಾಷೆಗಾಗಿ ತೋರಿದ ಪ್ರೀತಿ-ಒಲವು ತುಂಬ ಅಪರೂಪ ಸ್ವರೂಪದ್ದೆಂಬುದು ಮಾತ್ರ ಹದಿನಾರಾಣೆ ಸತ್ಯ!

■ ಕೃ. ಶಿ. ಹೆಗಡೆ : # ಎ ೧-೧೯, 'ಕೃತಿಕ', ಸಾಲೇಸ್‌ಪಾರ್ಕ, ಜಿ. ಟಿ. ಕವಡೆ ಮಾರ್ಗ, ಘೋರ್ಪಡಿ ಪುಣೆ-೪೧೧ ೦೩೬ ■

ಪುಸ್ತಕ ಪರಿಶೀಲನೆ

೧. ಕೆಬ್ಬೆನೆಲ : ಲಲಿತಾ ಸಿದ್ದಬಸವಯ್ಯ

ಚಿನ್ಮಯಿ ಪ್ರಕಾಶನ, ೩೨೧೭, ಗುರುಸ್ಮೃತಿ, ೨ನೇ ಕ್ರಾಸ್, ಅಶೋಕನಗರ, ತುಮಕೂರು-೫೭೨ ೧೦೨. ಪ್ರ.ಮು. ೨೦೦೪, ಪು. ೮೪, ಬೆ. ೬೦/-

ದಲಿತ, ಬಂಡಾಯ, ಸ್ತ್ರೀವಾದಿ ನೆಲೆಗಳಿಂದ ಹೊಮ್ಮಿದ ಆವೇಶ ಅಬ್ಬರಗಳ ಮಿತಿಯನ್ನು ಮೀರಿ ಬದುಕನ್ನು ಸಮಗ್ರವಾಗಿ ಗಂಭೀರವಾಗಿ ಪರಿಭಾವಿಸುವ, ಮಾನವೀಯ ಆಶಯಗಳ ಮಟ್ಟದಲ್ಲಿ ಗಟ್ಟಿಗೊಳ್ಳುವ ಎಚ್ಚರದ, ಕಲಾತ್ಮಕ ಸೂಕ್ಷ್ಮಗಳನ್ನು ಕಡೆಗಾಣಿಸದ ಕಾವ್ಯ ಇಂದು ಹುಟ್ಟುತ್ತಿದೆ. ಯಾವುದೇ ಸಂಘಟನೆಯ ಮುಖವಾಣಿಯಾಗುವ, ಸಿದ್ಧಾಂತಗಳ ಸಿದ್ಧ ಚೌಕಟ್ಟಿನಲ್ಲಿ ಕುಬ್ಜಗೊಳ್ಳುವ ಅಪಾಯದಿಂದ

ಪಾರಾಗುವ ಹೊಸ ದನಿಗಳು ಕಾಣಸುತ್ತಿವೆ. ವಿಸ್ಮೃತಿಯ ತಳಾತಳಕ್ಕೆ ತಳ್ಳಲ್ಪಟ್ಟ ನಮ್ಮ ಸಂಸ್ಕೃತಿಯ ಜೀವಸತ್ವಗಳನ್ನು, ಸ್ಥಳೀಯ ಪುರಾಣ, ಐತಿಹ್ಯ, ಚರಿತ್ರೆಗಳ ಉಪೇಕ್ಷಿತ ದನಿಗಳನ್ನು ಕಾವ್ಯದಲ್ಲಿ ಕಟ್ಟಿಕೊಡುವ ಪ್ರಯತ್ನ ಇಂದು ಕನ್ನಡ ಕಾವ್ಯ ತನ್ನ ಘನತೆಯನ್ನು ಮತ್ತೆ ಪಡಕೊಳ್ಳುವ ದಾರಿಯಲ್ಲಿದೆ ಎಂಬ ಆಶಾವಾದ ಮೂಡಿಸುವಂತಹದು.

ಲಲಿತಾ ಸಿದ್ದಬಸವಯ್ಯನವರ 'ಕೆಬ್ಬೆನೆಲ' ಕವನಸಂಕಲನ ಈ ಮಾತುಗಳ ಹಿಂದಿನ ಪ್ರೇರಣೆಯಾಗಿದೆ. ನಮ್ಮ ಬಹುಸಂಖ್ಯಾತ ಕವಯಿತ್ರಿಯರ ಸ್ತ್ರೀವಾದಿ ನೆಲೆಯಿಂದ ಹೊರಟ ಪುರುಷ ವಿರೋಧಿ ಮಾದರಿಯನ್ನಾಗಲಿ, ವೈದೇಹಿ, ಸವಿತಾ ನಾಗಭೂಷಣರಂಥವರ ಬೌದ್ಧಿಕ ಚಾತುರ್ಯದ, ವಿಸ್ಮಯದ ಮಾದರಿಯನ್ನಾಗಲಿ, ಪ್ರತಿಭಾ ನಂದಕುಮಾರರಂಥವರ ನಗರಕೇಂದ್ರಿತ ಅನುಭವಗಳ ಮಾದರಿಯನ್ನಾಗಲಿ ಅನುಸರಿಸದೆ ಲಲಿತಾ ಸಿದ್ದಬಸವಯ್ಯ ಅವರು ಸರ್ವಮಂಗಳಾ ಅವರ ಅಮ್ಮನಗುಡ್ಡದಂತಹ ಕೃತಿಗಳಲ್ಲಿ ಕ್ವಚಿತ್ತಾಗಿ ಕಂಡುಬರುವ ಮಾದರಿಯನ್ನು ಇನ್ನೂ ಭಿನ್ನ ಮಜಲುಗಳ ಸಾಧ್ಯತೆಗೆ ವಿಸ್ತರಿಸುವ ಹಾಗೆ ಬಳಸಿಕೊಂಡಿರುವುದು ಅವರ ಕಾವ್ಯವನ್ನು ಅನನ್ಯಗೊಳಿಸಿದೆ. ಅವರ ಒಂದೆರಡು ಸ್ತ್ರೀಕೇಂದ್ರಿತವೆನ್ನಬಹುದಾದ ರಚನೆಗಳು ಕೂಡ ಸ್ತ್ರೀಯ ಬಹುಮುಖ್ಯ ಶಕ್ತಿಗಳಾದ ತಾಯಿತನ ಮತ್ತು ಸೃಷ್ಟಿಶೀಲತೆಯ ಕಡೆಗೆ ಮುಖಮಾಡಿಕೊಂಡಿರುವುದರಿಂದ ಪರ-ವಿರೋಧಗಳ ಸಾಮಾನ್ಯ ರೀತಿಗಿಂತ ಭಿನ್ನವಾಗಿವೆ.

ಹೀಗೆ ನಮ್ಮ ಕಾಲದ ಹುಡುಗೇರು ಕಳೆದು ಹೋಗಿ ರೆಕ್ಕೆ ಕಳೆದ ಕಂಬಳಿ ಹುಳ
ವಾಗಿ ಹುಟ್ಟಿದ ಮನೆಗೇ ನೆಂಟರಾಗಿ ತಂಗಿಗೂ ಅವಳ ಗಂಡನಿಗೂ ಮುತ್ತೀನ
ಆರೂತಿ, ರತ್ನದ ಕಲಶ, ಸೋಬನ ಸೇವೆ ಸಾಸ್ತ್ರೇವು ಮಾಡಿ ಎಲ್ಲಿಂದ ಬಂದೆವೋ
ಅಲ್ಲಿಗೆ ಹಿಂದಿರುಗಿಸಲ್ಪಡುತ್ತಿದ್ದೆವು.

ಎಂಬಲ್ಲಿಗೆ ಕಥೆ ಮುಕ್ತಾಯ
ವಾದರೂ, ಕಲ್ಲಿಗೇ ಗೊತ್ತಿಲ್ಲದ ಬೆಂಕಿ ಕಲ್ಲಲ್ಲಿದ್ದ ಹಾಗೆ
ಇದೆಯೊಂದು ಉಪಕಥೆ
ಆ ಕಥೇಲಿ ಚಕ್ರ ಹಿನ್ನುರುಳಿ, ಹಿನ್ನುರುಳಿ
ಆ ಮಾಯ್ಕಾರ ಮಾದೇವನನು ಕೆಳದಬ್ಬಿ ನಾವೇ ಹುಲಿವಾನರಾಗಿ
ಅಲೆಲೆಲೆಲೇ (ಹುಲಿವಾನ)

ನಮ್ಮ ಹೆಣ್ಣುಮಕ್ಕಳ ಕ್ರಿಯಾಶೀಲತೆ, ಸೃಜನಶಕ್ತಿ ಮುಂತಾದವುಗಳನ್ನು ಪುರುಷಪ್ರಧಾನ ಸಾಂಸ್ಕೃತಿಕ ಪರಿಧಿಯೊಳಗೆ ಪಳಗಿಸಿ ನಿರ್ವೀರ್ಯಗೊಳಿಸಿದ ಪರಿಯನ್ನು ಇಷ್ಟು ಧ್ವನಿಪೂರ್ಣವಾಗಿ, ವ್ಯಂಗ್ಯೋಕ್ತಿಯ ಮೂಲಕ ಕಟ್ಟಿಕೊಡುವ ರಚನೆ ಕನ್ನಡದಲ್ಲಿ ಅಪರೂಪ.

ದೇವರೇ,
ನಮಗೆ ಗೊತ್ತಿಲ್ಲ ಇದರ ಲಿಪಿ
ನಮ್ಮ ಅಂಗೈಗಳ ನೇವರಿಕೆಯಲ್ಲಿ
ನಮ್ಮ ತೋಳುಗಳ ಬಿಗಿ ಮಡಿಕೆಯಲ್ಲಿ
ನಮ್ಮ ತೊಡೆಗಳು ರಚಿಸುವ ತೊಟ್ಟಿಲ ತಗ್ಗಿನಲ್ಲಿ
ನಮ್ಮ ಹಾಲುದುಂಬಿದ ಮೊಲೆಗಳಲ್ಲಿ
ಅದಕ್ಕೂ ಮೊದಲು ಮಾಂಸಮಜ್ಜೆಯ ಗರ್ಭಚೀಲದಲ್ಲಿ
ನಾವು ನಿನ್ನನ್ನು ಅನುವಾದಿಸುತ್ತಿರುತ್ತೇವೆ
ಮೂಲಕ್ಕೆ ಸದಾ ಸನಿಹವಾಗಿ
ನಿನ್ನ ಆಶಯಗಳಿಗೆ ಸದಾ ಬದ್ಧರಾಗಿ (ಧನ್ಯವಾದಗಳು)

ಕ್ರೌರ್ಯ, ದಬ್ಬಾಳಿಕೆಗಳ ಪುರುಷ ಅಹಂನ್ನು ಅತ್ಯಂತ ಸಹಜವಾಗಿ ಮೀರುವ ಸ್ತ್ರೀಘನತೆಯ ಅಪೂರ್ವ ಪ್ರತಿಮೆ ಇದು.

`ನಡೆಯುತ್ತಲೇ ನೆನಪು, ನೆನಪಿನಲ್ಲೇ ನಡಿಗೆ` ಕವಿತೆಯ ತಾಯಕ್ಕ ನಾವು ಕಳಕೊಂಡ ನೆಮ್ಮದಿಯ ಬದುಕಿನ, ಕಾಣೆಯಾಗುತ್ತಿರುವ ಸರಳ ಮೌಲ್ಯಗಳ, ವಿಸ್ಮೃತಿ-ಉಪೇಕ್ಷೆಗಳಿಗೆ ಗುರಿಯಾಗುವ ದೇಶೀ ಸಂಸ್ಕೃತಿಯ ಕುರಿತ ಹಳಹಳಿಕೆಯ ಸಂಕೀರ್ಣ ಪ್ರತಿಮೆ. ಭೂತ ಕಾಲದೊಂದಿಗಿನ ಸಂವಾದ ಸೇತುವೆಯಾಗುವ ತಾಯಕ್ಕ ಕಾರಂತರ ಅಜ್ಜಿಯರನ್ನು ನೆನಪಿಸುತ್ತಾಳೆ. ಅವಳ ನೆನಪು ನಮ್ಮ ನಡಿಗೆಯಲ್ಲಿ ಸೇರಿಕೊಳ್ಳುವುದೇ `ಹಗೂರ ಬೆನ್ನು ಸವರುವ` ಜೀವವೊಂದರ ಆವಾಹನೆ. ಸಂವೇದನೆಯೊಂದರ ಅನಾವರಣ.

ವಸೀಲಿಯಿಂದ ದಕ್ಕಿಸಿಕೊಳ್ಳುವುದಕ್ಕೂ ಸ್ವತಃ ಸಾಧಿಸಿ ಪಡೆಯುವದಕ್ಕೂ ಇರುವ ವ್ಯತ್ಯಾಸವನ್ನು ಒಂದು ಹಂತದಲ್ಲಿ ಧ್ವನಿಸಿದರೂ ವ್ಯಾವಹಾರಿಕ ಸೋಲು ಗೆಲುವಿನ ದಡದಲ್ಲಿ ವಿರಮಿಸದೆ ನಿಗೂಢ ನದಿಯೊಂದರ ಸೆಳವಿಗೆ ನಮ್ಮನ್ನೆಳೆಯುವ ಕವಿತೆ `ಸರೀಗಾ ಚೆಪ್ಪುರಾ ನಾ ಸಾಮಿ`.

'ತೆಂಕಣಭಾಮೆ' ಕವನ ಒಂದು ವಿಶಿಷ್ಟ ರೂಪಕ :

ಕಾಕಡಾ, ನಮ್ಮ ಬಯಲು ಸೀಮೆಯ ಹೂವು
ಹೆಸರಿನಲೂ ಮೃದುವಿಲ್ಲ, ಮೈಯೂ ಕೋಮಲವಲ್ಲ
ರೂಕ್ಷ ಬೇಸಿಗೆಯಲೂ ಬದುಕಿ ನಸುನಗುವ ರೂಹು
ಮಣ್ಣಗುಣಕನುಸಾರಿ ಕಲ್ಲರಳಿ ಹೂವಾದ ಗಟ್ಟಿ ಚೆಲುವು

'ಅಕ್ಕಿ'ಗೆ ಪ್ರತಿಯಾಗಿ 'ರಾಗಿ'ಯನ್ನು ಎತ್ತಿಹಿಡಿದ ಶ್ರಮ ಸಂಸ್ಕೃತಿ ಕಡೆಗಿನ ಕನಕನ ಕಿಂಡಿ ಈ 'ತೆಂಕಣ ಭಾಮೆ'. ಕರ್ನಾಟಕದ ಸಂದರ್ಭದಲ್ಲಿ ಇದು ಪ್ರಾದೇಶಿಕತೆಯನ್ನು ಪ್ರತಿನಿಧಿಸಿದರೂ ಒಟ್ಟು ಭಾರತೀಯ ಸಂದರ್ಭದಲ್ಲಿ 'ಧೂಳು ನೆಲ ಗುದ್ದುತ್ತ ಜಿದ್ದಿನಲಿ ಹೋರಾಡಿ' ಸ್ವಾವಲಂಬಿಯಾಗಿ ಬದುಕಲೆಳೆಸುವ ಗ್ರಾಮೀಣ ಬದುಕಿನ ರೂಹು, `ಲವಾಜಮೆ`ಯ ಹಿದಕವರೆ ಇದರದೇ ಇನ್ನೊಂದು ಮುಖ.

ಆಹಾ! ಸಿದ್ಧವಾಯಿತೋ ಲೊಟಗೆ ಹೊಡೆಯುತ್ತ ಚಪ್ಪರಿಸುವ
ಹಿದಕವರೆ ಆಮ್ರ

ಕುತೂಹಲಕ್ಕೆ ವೈದೇಹಿಯವರ `ತಿಳಿಸಾರು` ಕವಿತೆಯನ್ನು ಹೋಲಿಸಿ ನೋಡಬಹುದು. ಕವಿತೆ ಹುಟ್ಟುವ ಪ್ರಕ್ರಿಯೆಗೂ ಇದರ ಧ್ವನಿ ವಿಸ್ತರಿಸಿಕೊಳ್ಳುತ್ತದೆ.

ಮೊದಲ ಸಲ
ಕಡಲ ನೋಡಿದ ಬಯಲು ಸೀಮೆ ಹುಡುಗಿ
ಕುಣಿದು ಕುಪ್ಪಳಿಸಿದಳೇ
ಇಲ್ಲ, ತಮ್ಮೂರ ಕೆರೆ ನೆನೆದು
ಅದೇ ವಾಸಿ ಎಂದು ಷರಾ ಬರೆದಳು

ಈ ಕಡಲೋ
ಹೊರದಬ್ಬುವ ಬಜಾರಿ
ಸದಾ ಬಾಯ್ಬಡೆಯುವ ಹುಯ್ಲು ಮಾರಿ
ಇವಳ ನಿರುವಾಕಿಲ್ಲದ ಬಡಿವಾರ
ಕತ್ತೇ ಮೊಲೆ ಖಂಡುಗ ಕ್ಷೀರ
ಕರೆದಂಗಲ್ಲ ಕುಡಿದಂಗಲ್ಲ
ತೋ..... ಥೂ..... (ಷರಾ)

'ನಮ್ಮ ಹಳ್ಳೀ ಊರ ನಮಗ ಪಾಡs / ಯಾತಕವ್ವ ಹುಬ್ಬಳ್ಳಿ ಧಾರವಾಡs` (ಆನಂದಕಂದ) ಎಂಬುದರ ವಿಸ್ತರಣದಂತಿರುವ ಇಲ್ಲಿನ ದನಿ ಇವತ್ತು ಕೇವಲ ನಗರೀಕರಣಕ್ಕೆ ವಿರುದ್ಧವಾದದ್ದಲ್ಲ. ಇದು ಹುಸಿ ಜಾಗತೀಕರಣದ ಅಬ್ಬರಕ್ಕೆ ಪ್ರತಿರೋಧದ ದನಿಯೂ ಹೌದು. ಈ ಪ್ರತಿರೋಧವನ್ನು ಗುಣಾತ್ಮಕ ನೆಲೆಯಲ್ಲಿ ಗಟ್ಟಿಗೊಳಿಸುವ– `ಗುಟ್ಟೆ ಅಯ್ಯ`, `ಮನಸ್ವೇ ಕರ್ಪೂರದಾರತಿ`, `ನೇಪಥ್ಯ`

ಮುಂತಾದವು ಸ್ಥಳೀಯ ಪುರಾಣ-ಚರಿತ್ರೆಗಳ ನಿಗೂಢ ಲೋಕದೊಳಗೆ ಜೀವಸೆಲೆಗಳ ಶೋಧಕ್ಕಿಳಿಸುವ ಮಹತ್ವದ ರಚನೆಗಳು.

ವರುಷವೆಷ್ಟಾಯಿತೋ
ನೀರಸೆಲೆ ಸೋರಗಿಲ್ಲ ಬಾವಿ ತಳ ಕಂಡವರಿಲ್ಲ
ನಡೆದು ಹೋದವರ ವಿವರ ಹಾದಿ ಕೇಳುವುದಿಲ್ಲ
ಕುಣಿದು ತಣಿದವನ ಪ್ರವರ ಜಲಕೆ ಬೇಕಿಲ್ಲ. **(ಗುಟ್ಟೆ, ಅಯ್ಯ)**

ಮಾತೆಂದರೆ ಮಾತು, ನಸಿಕುಸಿಯಿಲ್ಲ
ಬಸಜ್ಜನೆಂದರೆ ಹೀಗೇ ಕಡ್ಡಿ ಮುರಿದ ಹಾಗೆ
ಅಜ್ಜನೆದೆಯಲ್ಲಿ ಮಿಡಿದಿದ್ದ ರಾಗ
ಹೊರಗಿವಿಗೆ ತಲುಪಲಿಲ್ಲ
ನನ್ನೊಳಗಿವಿ ಆಗಿನ್ನು ಬಲಿತಿರಲಿಲ್ಲ **(ನಿರ್ಮಲವಾದ ಮನವೇ ಕರ್ಪೂರವಾರತಿ)**

ಅಗೆದಷ್ಟು ಬಗೆದಷ್ಟು ಹಳೆಯೂರು ಹೊರಳುತಿದೆ ಗರ್ಭಚಕ್ರ ಮರಳಿ
ಇಲ್ಲಿತ್ತು ತಳಮನೆ ಅಲ್ಲಿತ್ತು ಅರಮನೆ ಕೇರಿಗೊಂದೊಂದು ಹೆಸರು ಹೇಳಿ
ನೋಡಿದೆವೆನ್ನುವುದು ಹೊರಗಣ ಲೆಕ್ಕ ಇತಿಹಾಸವದು ದಾಖಲೆಯ ಲೆಕ್ಕ
ಕಟ್ಟಿ ಕೆಡಹಿದ ಬದುಕು ಒಳಮಸೆತಗಳ ಚೂರು ತಡೆದೀತೆ ಕಲ್ಲ ಎರಕ
ಟಂಕಸಾಲೆಯ ಕಂಕುಳಲ್ಲಿದ್ದರು ಕಟ್ಟಬೇಕು ಒಳಿತು ಕೆಡಕಿನ ಸುಂಕ...
ಕಾಲಕೋಶದ ಮೌನ ಯಾರ ವಶವೇ ತಾಯಿ ಒಡೆಯಲಹುದೆ
ಬರೆದು ಕಳಕೊಂಡೆನೆಂದು ಹೇಳಿ ನೆನಪ ಮುಗಿಸಲು ಬಹುದೆ? **(ನೇಪಥ್ಯ)**

ಇವುಗಳಲ್ಲಿ 'ನೇಪಥ್ಯ' ಹಂಪಿಯ ದುರಂತದ ಹಿನ್ನೆಲೆಯಲ್ಲಿ ರಚನೆಯಾಗಿದ್ದರೂ ಬದುಕಿನ ಏಳುಬೀಳಿನ ಹಿಂದೆ ದಾಖಲೆಯಾಗದ, ನೇಪಥ್ಯದಲ್ಲೇ ಉಳಿದ ಸ್ಮೃತಿಸಂಪುಟಗಳ ಕಡೆಗೆ ಬೆರಳು ಮಾಡುವ ಕವಿತೆ.

ಇಲ್ಲಿರುವ ೩೩ ಕವಿತೆಗಳಲ್ಲಿ ಒಂದೆರಡು ಲಘುರಚನೆಗಳಂತೆ ತೋರಿದರೂ ಬಹುತೇಕ ಕವನಗಳು ಭಾಷೆ, ಶೈಲಿ, ವಸ್ತುವಿವರಣೆ, ಲಯ ಮುಂತಾದವುಗಳಲ್ಲಿ ಆಸೆಯ ಗಾಂಭೀರ್ಯದಿಂದ ಕೂಡಿವೆ. ಕನ್ನಡ ಕಾವ್ಯ ಇಲ್ಲಿ ತನ್ನ ಸರ್ವಾಂಗೀಣ ಸತ್ವಗಳಿಂದ ಭೂಷಿತಗೊಂಡು ದಟ್ಟಡಿಯಿಟ್ಟಿದೆ. ಇಲ್ಲಿನ ಕಥನ ಗುಣ ದೇವನೂರರ ಶೈಲಿಯ ನಿರುದ್ವಿಗ್ನ ಬೆಡಗಿನಿಂದ ಕೂಡಿದ್ದು ಕವಿತೆಗಳ ಸಹಜ ಚೆಲುವನ್ನು ಇಮ್ಮಡಿಸಿದೆ.

– ಬಸವರಾಜ ವಕ್ಕುಂದ, ೧೭/೩, ವಸ್ತ್ರದ ಬಿಲ್ಡಿಂಗ್, ಮಹಿಷಿ ರಸ್ತೆ, ಮಾಳಮಡ್ಡಿ, ಧಾರವಾಡ - ೧

೨. *ಕುಮಾರ ಗಂಧರ್ವ* : ಶಿರೀಷ್ ಜೋಶಿ

ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ಸಂಸ್ಥಾನಮಠ, ಗದಗ, ಪ್ರಮು. ೨೦೦೫. ಪು.೧೬೭, ರೂ.೩೦/-

ಕುಮಾರ ಗಂಧರ್ವರ ಬಗ್ಗೆ ಕನ್ನಡಿಗರು ಕೊಂಚ ಅಲಕ್ಷ್ಯ ತೋರಿದ್ದಾರೆ ಎಂದೇ ಅನ್ನಬೇಕು. ಆತ ತನ್ನ ಕಾರ್ಯಕ್ಷೇತ್ರವನ್ನು ಕರ್ನಾಟಕದ ಆಚೆಗೆ ಆರಿಸಿಕೊಂಡಿದ್ದು ಕನ್ನಡಿಗರ ಈ ಮನೋಭಾವಕ್ಕೆ ಕಾರಣವಿದ್ದೀತು. ಕುಮಾರ ಗಂಧರ್ವರು ತನ್ನ ಜಾತಿ, ಜನಾಂಗ, ಸಂಬಂಧಿಕರು, ಭಾಷೆ ಇತ್ಯಾದಿ ಎಲ್ಲ ಬಂಧನಗಳನ್ನು ಹರಿದ ಅಪ್ಪಟ ಭಾರತೀಯರಾಗಿ ಬದುಕಿದವರು. ಸಂಗೀತದಲ್ಲಿಯೂ ಅವರದ್ದು ಇದೇ ರೀತಿ. ಘರಾಣೆಗಳ 'ಮನೆತನ'ವನ್ನು ತಿರಸ್ಕರಿಸಿ, ಎಲ್ಲ ಘರಾಣೆಗಳು, ಎಲ್ಲ ಶೈಲಿಗಳು... ಶಾಸ್ತ್ರೀಯ ಅರೆಶಾಸ್ತ್ರೀಯ, ಜಾನಪದ, ಜನಪ್ರಿಯವೆಂಬ ಭೇದವಿಲ್ಲದೆ ಎಲ್ಲ ಕಡೆಯೂ ಚಿತ್ತ ಹರಿಸಿದವರು ಅವರು. ಇದೂ ಕೂಡ ಅವರ ಬಗೆಗಿನ ಅವಗಣನೆಗೆ ಕಾರಣವಿದ್ದೀತು. ಅದೇನೇ ಇರಲಿ ಕುಮಾರ ಗಂಧರ್ವರು ಹಿಂದೂಸ್ಥಾನಿ ಸಂಗೀತದ ಮಹಾನ್ ಸಾಧಕ ಹಾಗೂ ಇಪ್ಪತ್ತನೆಯ ಶತಮಾನದ ಮಹತ್ವದ ಭಾರತೀಯ ಕಲಾವಿದ. ಶಿರೀಷ್ ಜೋಶಿಯವರ 'ಕುಮಾರ ಗಂಧರ್ವ' ಪುಸ್ತಕವು ಕನ್ನಡ ಭಾಷೆಗೆ ಸ್ವಾಗತಾರ್ಹ

ಸೇರ್ಪಡೆಯಾಗಿದೆ. ಲೇಖಕರು ಕುಮಾರ ಗಂಧರ್ವರ ಬಗ್ಗೆ ಅಪಾರವಾದ ಪ್ರೀತಿ ಹಾಗೂ ಗೌರವಗಳಿಂದ ಆತನ ಜೀವನ ಹಾಗೂ ಸಾಧನೆಗಳನ್ನು ಚಿತ್ರಿಸಿದ್ದಾರೆ.

ಪುಸ್ತಕವು ಅಂತ್ಯದ ತನಕ ತಡೆಯಿಲ್ಲದೆ ಓದಿಸಿಕೊಂಡು ಹೋಗುತ್ತದೆ ನಿಜ. ಶಿರೀಷರು ಪುಸ್ತಕವನ್ನು ಇನ್ನಷ್ಟು ಸಾಂದ್ರವಾಗಿ ರಚಿಸಬಹುದಿತ್ತು. ಪುಸ್ತಕದಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವ ಪುನರಾವರ್ತನೆ ಹಾಗೂ ಕೆಲವೊಮ್ಮೆ ವಿಪರೀತ ಅನ್ನಿಸುವ ವಿಶೇಷಣಗಳ ಬಳಕೆಯನ್ನು ನಿಗ್ರಹಿಸಬಹುದಿತ್ತು. ಮುಂದೆ, ಗ್ರಂಥದ ಮತ್ತೊಂದು ಆವೃತ್ತಿಯನ್ನು ತರುವಾಗ ಲೇಖಕರು ಈ ಕೆಲವು ಸಮಸ್ಯೆಗಳನ್ನು ನಿವಾರಿಸಿಕೊಂಡಾರು.

ಪರಕೀಯ ಪ್ರಜ್ಞೆ ಕುಮಾರ ಗಂಧರ್ವರನ್ನು ಮಾತ್ರವೇ ಕಾಡಲಿಲ್ಲ, ಕನ್ನಡದ ಹೆಚ್ಚಿನ ಹಿಂದೂಸ್ತಾನಿ ಸಂಗೀತಗಾರರನ್ನೂ ಕಾಡಿದೆ. ಹಿಂದೂಸ್ತಾನಿ ಸಂಗೀತದ ಕ್ಷೇತ್ರವು ಕರ್ನಾಟಕದಲ್ಲಿ ಕಿರಿದು. ಮಹಾರಾಷ್ಟ್ರ ಹಾಗೂ ಉತ್ತರ ಭಾರತದ ವಿವಿಧ ನಗರಗಳಲ್ಲಿ ಹರಡಿಕೊಂಡಿದೆ ಹಿಂದೂಸ್ತಾನಿ ಸಂಗೀತದ ಶ್ರೋತೃಗಣ. ವಾಯುವ್ಯದಲ್ಲಿ ಲಾಹೋರು, ಅಮೃತಸರ, ಜಯಪುರ; ಉತ್ತರದಲ್ಲಿ ದೆಹಲಿ, ಅಲಹಾಬಾದ್, ಲಖನೌ, ಬನಾರಸ್‌ಗಳು; ಈಶಾನ್ಯದಲ್ಲಿ ಕಲ್ಕತ್ತೆ; ಮಧ್ಯಭಾರತದಲ್ಲಿ ಆಗ್ರಾ, ಗ್ವಾಲಿಯರ್, ದೇವಾಸ್, ಇಂದೋರ್, ಬಡೋದೆ, ಪುಣೆ, ಮುಂಬಯಿಗಳು ಹಿಂದೂಸ್ತಾನಿ ಗಾಯಕರ ನೆಲೆಗಳು. ಹಾಗಾಗಿ ಮಲ್ಲಿಕಾರ್ಜುನ ಮನಸೂರ್, ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ ಆದಿಯಾಗಿ ಕನ್ನಡದ ಹೆಚ್ಚಿನ ಹಿಂದೂಸ್ತಾನಿ ಸಂಗೀತಗಾರರು ಗಡಿಯಾಚೆ ದಾಟುವುದು ಅನಿವಾರ್ಯವಾಯಿತು, ಆದರೆ ಇವರಾರೂ ಕರ್ನಾಟಕದ ಜೊತೆಗಿನ ಸಂಪರ್ಕವನ್ನು ಬಿಡಲಿಲ್ಲ. ಭೀಮಸೇನ ಜೋಶಿಯವರನ್ನು ಹೊರತುಪಡಿಸಿದರೆ (ಅವರ ವಾಸ್ತವ್ಯ ಪುಣೆಯಲ್ಲಿ) ಇತರರು ಕರ್ನಾಟಕದಲ್ಲಿಯೇ ನೆಲೆನಿಂತಿದ್ದರು ಕೂಡ. ಆದರೆ ಕುಮಾರ ಗಂಧರ್ವರು ಅಲೆಮಾರಿ. ದೂರದ ಮಾಲವ ಪ್ರದೇಶದ 'ದೇವಾಸ್' ನಗರದಲ್ಲಿ ಕೊನೆಗೊಮ್ಮೆ ಅವರು ನೆಲೆನಿಂತರು.

ಶಿವಪುತ್ರ ಕೊಮಕಾಳಿಮಠರು ಬಾಲಪ್ರತಿಭೆಯಾಗಿ ಚಿಗುರಿದ್ದು ಕನ್ನಡದ ನೆಲದಲ್ಲಿಯೇ ಹೌದು. ಈ ಬಾಲಕ ಕುಮಾರ ಗಂಧರ್ವನಾದದ್ದು ಕೂಡ ಕನ್ನಡದ ನೆಲದಲ್ಲಿಯೇ (ಆ ಬಿರುದನ್ನು ನೀಡಿದವರು ಗುರುಮಠಕಲ್ಲಿನ ಶಾಂತವೀರ ಮಹಾಸ್ವಾಮಿಗಳು). ಆದರೆ ಅನಂತರ ಹೊರ ನಡೆದ ಕುಮಾರ ಗಂಧರ್ವರು ಮತ್ತೆ ಮನೆಗೆ ಮರಳಲೇ ಇಲ್ಲ ಎಂದರೂ ನಡೆದೀತು. ಕುಮಾರ ಗಂಧರ್ವರು ರೂಪುಗೊಂಡ ಕಾಲಘಟ್ಟವನ್ನು ಶಿರೀಷರು ಆಕರ್ಷಕವಾಗಿ ಚಿತ್ರಿಸಿದ್ದಾರೆ.

ಈ ಹಿಂದೆ ಸಂಕಲನದಲ್ಲಿ ಜೋಳದರಾಶಿ ದೊಡ್ಡನಗೌಡರ ಜೀವನಚರಿತ್ರೆಯ ಪುಸ್ತಕವನ್ನು ವಿಮರ್ಶೆ ಮಾಡುತ್ತ ನಾನು ಒಂದು ಸಂಗತಿಯನ್ನು ದಾಖಲಿಸಿದ್ದೆ. ಅದನ್ನಿಲ್ಲಿ ಮತ್ತೆ ನೆನಪಿಸಿಕೊಳ್ಳುವುದು ಅಪ್ರಸ್ತುತವಾಗಲಾರದು. ಲೇಖಕರುಗಳ ಜೀವನವು ಹೆಚ್ಚು ಕಡಿಮೆ ಒಂದೇ ಜಾಡಿನಲ್ಲಿರುತ್ತದೆ. ಕನ್ನಡದ ಹೆಚ್ಚಿನ ಲೇಖಕರ ಬದುಕಿನಲ್ಲಿ ಲಿಖಿತ ಭಾಷೆಗಳ ಕಲಿಕೆ ಮಹತ್ವದ ಸಂಗತಿ, ಹಾಗಾಗಿ ಶಾಲೆ ಕಾಲೇಜುಗಳು ಮಹತ್ವದ ಸಂಗತಿಗಳು ಆಗಬೇಕಿಲ್ಲ. (ಯೂರೋಪಿನ ಹಲವು ಲೇಖಕರು ಶಾಲೆ ಕಾಲೇಜುಗಳ ಮೆಟ್ಟಿಲು ತುಳಿಯದೆ ಮಹತ್ವದ ಲೇಖಕರಾಗಿದ್ದಾರೆ.) ಮೊದಲು ಓದು ವಿದ್ಯೆ ಅನಂತರ ನೌಕರಿ (ಹೆಚ್ಚಾಗಿ ಕಾಲೇಜು ಮಾಸ್ತರಿಕೆ), ಸಾಹಿತ್ಯ ರಚನೆ, ಪುಸ್ತಕ ಪ್ರಕಟಣೆ, ಪ್ರಶಸ್ತಿ... ಹೀಗೆ ಕನ್ನಡದ ಲೇಖಕ ಸೃಷ್ಟಿಯಾಗುವುದು. ಆದರೆ ಕನ್ನಡದ ಸಾಹಿತ್ಯೇತರ ಸಾಂಸ್ಕೃತಿಕ ವ್ಯಕ್ತಿಗಳ ಮಾತು ಬೇರೆ. ಅದರಲ್ಲೂ ಸಂಗೀತ ಹಾಗೂ ರಂಗಭೂಮಿ ಕ್ಷೇತ್ರದಿಂದ ಬಂದವರು ತುಂಬ ವೈವಿಧ್ಯಮಯ ವ್ಯಕ್ತಿಗಳು. ಗುಬ್ಬಿ ವೀರಣ್ಣ, ಮಲ್ಲಿಕಾರ್ಜುನ ಮನಸೂರ್, ಬಿ. ವಿ. ಕಾರಂತ, ಸುಬ್ಬಯ್ಯ ನಾಯ್ಡು, ಕಾಳಿಂಗರಾವ್, ಕಮಲಾದೇವಿ ಚಟ್ಟೋಪಾಧ್ಯಾಯ, ಕುಮಾರ ಗಂಧರ್ವ ಇವರುಗಳ ಸಾಧನೆಯಷ್ಟೇ ರೋಚಕವಾದದ್ದು ಅವರ ಬದುಕಿನ ಪಯಣ. ಕುಮಾರ ಗಂಧರ್ವರ ಜೀವನವಂತೂ ಯಾವುದೇ ಜನಪ್ರಿಯ ಸಿನಿಮಾಗಳ 'ನಾಯಕ' ಮಾದರಿಯನ್ನು ನಾಚಿಸಬಲ್ಲಷ್ಟು ವೈವಿಧ್ಯಮಯವಾದದ್ದು. ಕನ್ನಡ ಚಿತ್ರಗಳಿಗೆ ಗರಬಡಿದಿದೆ ಎಂದು ಇತ್ತೀಚೆಗೆ ಎಂ. ಎಸ್. ಸತ್ಯು ರೇಗಿದ್ದರು. ಅವರ ಮಾತು ನಿಜ. ಮೇಲೆ ತಿಳಿಸಿದ 'ನಾಯಕ' ಮಾದರಿಗಳು ಚಿತ್ರನಿರ್ಮಾಪಕರ ಕಣ್ಣಿಗೆ ಬೀಳುವುದೇ ಇಲ್ಲವಲ್ಲ ಎಂದು ಆಶ್ಚರ್ಯವಾಗುತ್ತದೆ.

ಕುಮಾರ ಗಂಧರ್ವರು ಮಹಾನ್ ಸಂಗೀತಗಾರರಾದದ್ದು ದೈವಲೀಲೆಯೋ ಎಂಬಂತಿದೆ. ದೈವಲೀಲೆ ಎನ್ನದೆ ಮತ್ತೇನನ್ನಬಹುದು ಹೇಳಿ? ಬೆಳಗಾವಿ ಜಿಲ್ಲೆಯ ಮೂಲೆಯ ಸೂಳೆಭಾವಿಯಲ್ಲಿ ೧೯೨೪ ರಲ್ಲಿ ಜನಿಸಿದ ಈ ಬಾಲಕನಿಗೆ ವಾಸ್ತವ ಮಾರ್ಗಗಳಿಂದ, ಅರ್ಥಾತ್ ಮೆರಿಟ್ ಸ್ಕಾಲರ್‌ಷಿಪ್ಪುಗಳು, ವಷೀಲಿ, ಪರದೇಶ ಯಾತ್ರೆ ಇತ್ಯಾದಿಗಳಿಂದಾಗಿ ಅವಕಾಶಗಳು ಬಂದು ತಲುಪುವುದು ಸಾಧ್ಯವೇ ಇರಲಿಲ್ಲ. ಕುಮಾರ ಗಂಧರ್ವರ ಹಿನ್ನೆಲೆಯಲ್ಲಿ ಇತರೆ ಬಾಲಕರು ಸೂಳೆಭಾವಿಯಲ್ಲಿಯೇ ರೈತನಾಗಿಯೋ ಅಥವಾ ತನ್ನ ಅಪ್ಪ ಸಿದ್ಧರಾಮಯ್ಯನಂತೆಯೇ ಸರಾಫನಾಗಿಯೋ ಉಳಿದುಬಿಡುತ್ತಿದ್ದರು. ಕುಮಾರ ಗಂಧರ್ವರು ಹೇಗೋ ದಾಟಿ ಹೊರಬಂದರು.

ಬಾಲಕ ಶಿವಪುತ್ರನಿಗೆ ಮೊದಲು ಹೆಸರು ಬಂದದ್ದು ಪ್ರಸಿದ್ಧ ನಾಯಕರ ಅನುಕರಣೆಯಿಂದಾಗಿ. ಏಳು ವರ್ಷದ ಬಾಲಕ ಒಮ್ಮೆ ಮಾತ್ರ ಕೇಳಿದ ಧ್ವನಿಮುದ್ರಿಕೆಯನ್ನು (ಅಥವಾ ಅಪರೂಪಕ್ಕೊಮ್ಮೆ ನಿಜ ಸಂಗೀತ ಕೇಳಿದ್ದರೆ ಅದನ್ನೂ) ಯಥಾವತ್ ನಕಲು ಮಾಡಿ ಹಾಡುತ್ತಿದ್ದನಂತೆ. ಕುಮಾರ ಗಂಧರ್ವರ ಈ ಅವಸ್ಥೆ ಅದೆಷ್ಟು ರೋಚಕವಾದದ್ದೆಂದರೆ ನನಗೆ ಚಾರ್ಲಿ ಚಾಪ್ಲಿನ್ನನ ನೆನಪು ಬರುತ್ತದೆ. ಏಕೆಂದರೆ ಬಾಲಕ ಬರೇ ಹಾಡನ್ನು ಮಾತ್ರವೇ ಅಲ್ಲದೆ ಉಸ್ತಾದ್ ಕರೀಂಖಾನರ ಭಾವಭಂಗಿಗಳನ್ನೂ ನಕಲು ಮಾಡುತ್ತಿದ್ದನಂತೆ. ಯಾವುದೇ ಗಾಯಕನ ಯಾವುದೇ ಗಾಯನವಿರಲಿ ಭಾವಭಂಗಿಗಳು ಮಾತ್ರ ಕರೀಂಖಾನರದ್ದು. ಹೋಗಿ ವೇದಿಕೆಯ ಮೇಲೆ ಕೂತು ಕೆಮ್ಮಿ ಖ್ಯಾಕರಿಸಿ, ಬಂದ್ ಗಲೇ-ಕ-ಕೋಟಿನ ಗುಂಡಿಗಳನ್ನು ಗಂಭೀರವಾಗಿ ಬಿಚ್ಚಿ, ಶ್ರೋತೃಗಳನ್ನು ಒಮ್ಮೆ ನಿರುಕಿಸಿ ಹಾಡಲಿಕ್ಕೆ ಶುರುಹಚ್ಚುತ್ತಿದ್ದನಂತೆ 'ಬಾಲನಟ'. ಇದೇ ನಕಲಿ ಶ್ಯಾಮ ಮುಂದೆ ವಾಮನನಂತೆ ಬೆಳೆದು ವಿರಾಟ್ ಸ್ವರೂಪವನ್ನು ಪಡೆದ, ಸಾವನ್ನು ಗೆದ್ದ, ಕುಲೀನ ವಿದ್ಯಾವಂತ ಸುಂದರಿಯನ್ನು ಮದುವೆಯಾದ, ಮತ್ತೆ ಮದುವೆಯಾದ, ದೇಶದ ಮೂಲೆಮೂಲೆಗಳಲ್ಲಿ ತನ್ನ ಹೆಸರು ಸ್ಥಾಪಿಸಿದ.

ಶಿರೀಷರು ಕುಮಾರ ಗಂಧರ್ವರ ವೈಚಾರಿಕತೆ, ಪ್ರಯೋಗಾತ್ಮಕತೆ, ಪಾಂಡಿತ್ಯ ಹಾಗೂ ಗ್ರಂಥರಚನಾ ಚಾತುರ್ಯದ ಬಗ್ಗೆ ಕೂಡಾ ವಿವರವಾಗಿ ಚರ್ಚಿಸಿದ್ದಾರೆ. ಅವರ ಜಗಳಗಳು, ವಿರಸಗಳು, ಪ್ರೀತಿ, ಪ್ರೇಮ, ಯಶಸ್ಸು, ಟೀಕೆ ಎಲ್ಲವನ್ನೂ ಚರ್ಚಿಸಿದ್ದಾರೆ. ಆದರೆ ಜೀವನಚಿತ್ರದಲ್ಲಿ ದಕ್ಕಿರುವ ಕಥನದ ಯಶಸ್ಸು ಅವರಿಗೆ ಸಾಧನೆಯ ಚಿತ್ರಣಕ್ಕೆ ದಕ್ಕುವುದಿಲ್ಲ. ಕುಮಾರ ಗಂಧರ್ವರನ್ನು ಪ್ರಭಾವಿಸಿದ ಎರಡು ಸಂಗತಿಗಳೆಂದರೆ ಅವರ ಗುರುಗಳಾದ ದೇವಧರರು ಹಾಗೂ ಅವರು ತಮ್ಮ ಜೀವನದ ಕಡೆಯ ಮೂವತ್ತು ವರ್ಷ ಕಳೆದ 'ದೇವಾಸ್' ಊರು. ದೇವಾಸ್ ಊರಿನ ಚಿತ್ರಣ ಚೆನ್ನಾಗಿ ಮೂಡಿದೆ. ಕ್ಷಯರೋಗ ನಿವಾರಣೆಗೆಂದು ಐದು ವರ್ಷ ಹಾಸಿಗೆ ಹಿಡಿದು ಮಲಗಿದ್ದ ಕುಮಾರರನ್ನು ಈ ಊರು ಪ್ರಭಾವಿಸಿದ ರೀತಿ ತುಂಬಾ ಮಹತ್ವದ್ದು. ಅಲ್ಲಿನ ನಾಥಪಂಥದ ಭಜನೆಗಳು, ಧುನ್‌ಗಳು, ಲೋಕಸಂಗೀತ ಕುಮಾರ ಗಂಧರ್ವರ ತುದಿಯ ವ್ಯಕ್ತಿತ್ವವನ್ನು ರೂಪಿಸಿದ ಮಹತ್ವದ ಸಂಗತಿಗಳು. ಹಿಂದೂಸ್ಥಾನಿ ಸಂಗೀತದ ಪರಿಚಯವಿಲ್ಲದವರೂ ಕೂಡ ಕುಮಾರ ಗಂಧರ್ವರ ನಿರ್ಗುಣ ಭಜನೆಗಳನ್ನು ಕೇಳಿರಲಿಕ್ಕೆ ಸಾಕು. ಅಷ್ಟು ಜನಪ್ರಿಯ ರಚನೆಗಳವು. ನಾನು ಕುಮಾರ ಗಂಧರ್ವರನ್ನು ಹಲವು ಸಲ ಭೇಟಿಯಾಗಿದ್ದೆ. ಒಮ್ಮೆ 'ದೇವಾಸ್'ವರೆಗೂ ಹೋಗಿ ಬಂದಿದ್ದೆ. ಭೂಪಾಲದಿಂದ ದೇವಾಸ್‌ಗೆ ಪ್ರಯಾಣ ಮಾಡುತ್ತಿದ್ದಾಗ, ದೇವಾಸ್ ಸಮೀಪಿಸುತ್ತಿದ್ದ ಹಾಗೆ ಅಲ್ಲಿನ ಪ್ರಕೃತಿ ನನ್ನನ್ನು ವಿಶೇಷವಾಗಿ ಆಕರ್ಷಿಸಿತ್ತು. 'ಅರೆ, ಉತ್ತರ ಕರ್ನಾಟಕಕ್ಕೆ ಬಂದುಬಿಟ್ಟೆನಲ್ಲ!' ಎಂಬಂತೆ ಭಾಸವಾಗಿತ್ತು. ಅಲ್ಲಿಯೂ ಅದೇ ಎರೆಭೂಮಿ, ಬಯಲು ಹೊಲಗಳು ಹಾಗೂ ದೂರದೂರದಲ್ಲಿ ಚದುರಿದಂತೆ ಕಿರುಗುಡ್ಡಗಳು. ಕುಮಾರ ಗಂಧರ್ವರನ್ನು ಕಂಡಾಗ ಹಾಗೆಂದು ಹೇಳಿದೆ. 'ನಿಮ್ಮೂರಿನಿಂದ ಸಾವಿರ ಮೈಲಿ ದೂರ ಬಂದು ನೆಲೆಸಿದ್ದೀರಿ. ಆದರೆ ನಿಮ್ಮೂರಿನ ಥರವೇ ಇರುವ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದೀರಿ' ಎಂದಿದ್ದೆ. ಕುಮಾರ ಗಂಧರ್ವರು ನಕ್ಕು ಹೌದೆಂದಿದ್ದರು.

– ಪ್ರಸನ್ನ, ಕವಿ ಕಾವ್ಯ ಟ್ರಸ್ಟ್, ಹೆಗ್ಗೋಡು - ೫೭೭ ೪೧೭, ತಾ. ಸಾಗರ

೩. ಬಿದ್ದುದು ಗರಿಯಲ್ಲ; ಹಕ್ಕಿಯೇ! : ಸಂ. ಡಾ. ಎಚ್. ಎಂ. ಮರುಳಸಿದ್ಧಯ್ಯ, ಡಾ. ಬಿ. ಎಂ. ಮರಕಿಣಿ : ಕರ್ನಾಟಕ ಸಂಘ, ಪುತ್ತೂರು-೨, ಪ್ರ.ಮು. ೨೦೦೩, ಪು. ೯೪, ರೂ. ೪೫/-

ಕನ್ನಡ ನವೋದಯ ಪರಂಪರೆಯ ಅಗ್ರಶ್ರೇಣಿಯ ಕವಿಗಳ ರಚನೆಗಳಿಗೆ ಹೋಲಿಸಬಹುದಾದ ಕಾವ್ಯಪ್ರತಿಭೆ ಕುಂಠಿತಹಿತ್ತು ರಾಮಚಂದ್ರರ ಕವಿತೆಗಳದ್ದು. ಸೂಕ್ಷ್ಮಸಂವೇದನೆಯ, ಭಾವುಕ ಸ್ವಭಾವದ ಈ ಕೋಮಲ ಕವಿಯ ಕಾವ್ಯಾಭಿವ್ಯಕ್ತಿ `ಬಿದ್ದ ಗರಿ' ಎಂಬ ಅವರ ಮೊದಲ ಸಂಕಲನಕ್ಕೇ ಕೊನೆಗೊಂಡದ್ದೊಂದು ವಿಪರ್ಯಾಸ. ೧೯೩೯ ರಲ್ಲಿ ಜನಿಸಿ ತಮ್ಮ ಬದುಕಿನ ಇಪ್ಪತ್ತಾರನೆಯ ವರ್ಷದಲ್ಲಿ(೧೯೬೫) ಅಕಾಲ ಮೃತ್ಯುವಿಗೆ ತುತ್ತಾದ ರಾಮಚಂದ್ರರ ನಿಧನದ ಎರಡು ವರ್ಷ ಮೊದಲು (೧೯೬೩ ರಲ್ಲಿ) ಅವರ `ಬಿದ್ದ ಗರಿ' ಸಂಗ್ರಹ ಪ್ರಕಟವಾಯಿತು. ಎಲ್ಲರೂ ಎಂದೋ ಮರೆತು ಹೋಗಿದ್ದ, ಹೊಸ ಪೀಳಿಗೆಯವರಿಗೆ ಗೊತ್ತೇ ಇರದ ಆ ಕವಿ ಮತ್ತು ಆತನ ಆ ಮೊದಲ ಕಾವ್ಯಕೃತಿಯನ್ನು ಮತ್ತೊಮ್ಮೆ ಕನ್ನಡ ಸಾಹಿತ್ಯಲೋಕಕ್ಕೆ ತಂದಿದ್ದಾರೆ ಡಾ. ಎಚ್. ಎಂ. ಮರುಳಸಿದ್ಧಯ್ಯ ಮತ್ತು ಡಾ. ಎಂ. ಬಿ. ಮರಕಿಣಿಯವರು. ಐವತ್ತು ವರ್ಷಗಳ ಹಿಂದೆ `ಬಿದ್ದಗರಿ' ಸಂಕಲನದ ಪ್ರಕಾಶಕರಾಗಿದ್ದವರೂ ಇದೇ ಮರಕಿಣಿ - `ಮರುಳಸಿದ್ಧ'ರು. ವಿದ್ಯಾರ್ಥಿದೆಸೆಯಲ್ಲಿ ಮೈಸೂರಿನಲ್ಲಿ `ಕನ್ನಡ ಕುಲ'ವೆಂಬ ಗೆಳೆಯರ ಗುಂಪೊಂದನ್ನು ರಚಿಸಿಕೊಂಡು ಅದರ ವತಿಯಿಂದ ತಮ್ಮ ಸಹಪಾಠಿ-ಸ್ನೇಹಿತ ರಾಮಚಂದ್ರನ ಸಂಕಲನವನ್ನು ಪ್ರಕಟಿಸಿದರು.

`ಬಿದ್ದುದು ಗರಿಯಲ್ಲ, ಹಕ್ಕಿಯೇ!' ಎಂಬ ಈ ಅರ್ಥಪೂರ್ಣ ಶೀರ್ಷಿಕೆಯ ಕೃತಿ ಕೇವಲ ರಾಮಚಂದ್ರರ `ಬಿದ್ದಗರಿ'ಯ ಪುನರ್ಮುದ್ರಣವಲ್ಲ. ಇದರಲ್ಲಿ ಎಂ. ಬಿ. ಮರಕಿಣಿ ಬರೆದ ಒಂದು ದೀರ್ಘ ಪ್ರಸ್ತಾವನೆ ಇದೆ. ಐವತ್ತು ವರ್ಷಗಳ ಹಿಂದೆ ರಾಮಚಂದ್ರರ ಸಂಕಲನ ಬಿಡುಗಡೆಯಾದ ಸಂದರ್ಭ, ಆ ಮೇಲೆ `ಕನ್ನಡ ಕುಲ'ದ ಗೆಳೆಯರು ಚದುರಿ ಆ ಪ್ರಕಾಶನ ಮೂಲೆಗುಂಪಾದುದು, `ಮರುಳಸಿದ್ಧ' ಡಾ. ಎಚ್. ಎಂ. ಮರುಳಸಿದ್ಧಯ್ಯನವರಾಗಿ ವಿಶ್ವವಿದ್ಯಾಲಯದಲ್ಲಿ ಸಮಾಜಕಾರ್ಯ ಬೋಧಿಸುತ್ತ ಬೆಂಗಳೂರಲ್ಲಿ ನೆಲೆಸಿ; ತಾವು (ಮರಕಿಣಿ) ಡಾ.ಎಂ. ಎಂ. ಭಟ್ ಆಗಿ ಆದಿವಾಸಿಗಳ ಆರೋಗ್ಯಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡು ಕಾರ್ಯಕ್ರಮಗಳಲ್ಲಿ ತೊಡಗಿಕೊಂಡು ಬಿಹಾರ್‌ನ ಚಂಪಾರಣ್ ಬಳಿ ಶಿವಾನ್‌ನಲ್ಲಿ ತಳವೂರಿದ್ದು, ಈ ಉದ್ದಕ್ಕೂ ಗೆಳೆಯ ರಾಮಚಂದ್ರನ ನೆನಪನ್ನು ಹಸಿರಾಗಿಟ್ಟುಕೊಂಡು ಅವರ ಸಾಹಿತ್ಯವನ್ನೆಲ್ಲ ಪುನರ್ಮುದ್ರಿಸಬೇಕೆಂಬ ಹಂಬಲ ಮೊಳೆತು ಅದರ ಯೋಜನೆ ಹಾಕಿಕೊಂಡದ್ದು, ಹಲವು ತೊಡಕುಗಳ ನಡುವೆ ಅದನ್ನು ಸಾಧಿಸಿದ್ದು ಈ ವಿವರಗಳಿವೆ.

`ಬರೆಹ' ಭಾಗದಲ್ಲಿ ಕವಿ ಗೋಪಾಲಕೃಷ್ಣ ಅಡಿಗರ ಹಿನ್ನುಡಿಯೊಂದಿಗೆ ೧೯೬೩ ರಲ್ಲಿ ಪ್ರಕಟವಾದ `ಬಿದ್ದಗರಿ' ಸಂಕಲನದ ಕವಿತೆಗಳು ಮತ್ತು `ಕೊನೆಯ ಮಾತು' ಎಂಬೊಂದು ಕತೆ ಇದ್ದರೆ `ಬದುಕು' ಭಾಗದಲ್ಲಿ ನಾಲ್ಕು ಲೇಖನಗಳಿವೆ. ಅದರಲ್ಲೊಂದು ಟಿ. ಜಿ. ಮುಡೂರು ಬರೆದ `ಸಂಗಮದ ನಮ್ಮ ರಾಮಚಂದ್ರ' ಎಂಬುದು. ಮುಡೂರರು ರಾಮಚಂದ್ರರಿಗಿಂತ ಶಾಲೆಯಲ್ಲಿ ಎರಡು ತರಗತಿಗಳಿಗೆ ಹಿರಿಯರು. ಇಂದಿನ ಸುಳ್ಯ ತಾಲೂಕಿನ ಮಲೆಗಳಲ್ಲೊಂದಾದ ಬಂಟಮಲೆಯ ಬಡಗು ತಪ್ಪಲಲ್ಲಿರುವ ಕಲ್ಮಡ್ಕದ ಶಾಲೆಗೆ ತಾವು-ರಾಮಚಂದ್ರ ವಾಟೆ ಹೊಳೆಯನ್ನು ದಾಟಿ ಹೋಗಿ ಬರುತ್ತಿದ್ದ ದಿನಗಳನ್ನು; ಆ ಮೇಲೆ ಪುತ್ತೂರು, ನಂತರ ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮುಂದುವರಿಸಿದ ರಾಮಚಂದ್ರರೊಡನೆ ರಜಾದಿನಗಳ ತಮ್ಮ ಒಡನಾಟವನ್ನು ಇವರು ಸ್ಮರಿಸಿದ್ದಾರೆ. ನೀಲೇಶ್ವರದಲ್ಲಿ ಕುಳಕುಂದ ಶಿವರಾಮ (ನಿರಂಜನ)ರ ಸಹಪಾಠಿಯಾಗಿದ್ದ ಪಾದೇಕಲ್ಲು ಶಂಕರನಾರಾಯಣ ಭಟ್ಟರು ಕಲ್ಮಡ್ಕಕ್ಕೆ ಶಾಲಾ ಅಧ್ಯಾಪಕರಾಗಿ ಬಂದ ನಂತರ ಅವರ ಮಾರ್ಗದರ್ಶನದಲ್ಲಿ ತಾವೆಲ್ಲ ಸಾಹಿತ್ಯ-ಸಂವೇದನೆಯನ್ನು ಬೆಳೆಸಿಕೊಂಡದ್ದು, ಕೆಲ ಪುಸ್ತಕಗಳನ್ನು ಪ್ರಕಾಶನಗೊಳಿಸಿದ್ದು, ಅದಕ್ಕೆಲ್ಲ ಮೈಸೂರಲ್ಲಿ ಇಂಗ್ಲಿಷ್ ಆನರ್ಸ್ ಪ್ರಥಮ ಬಿ.ಎ. ಓದುತ್ತಿದ್ದ ರಾಮಚಂದ್ರರ ಸಹಕಾರ, ಮುಂದೆ ೧೯೬೪ ರ ವರ್ಷಾಂತ್ಯದ ರಜೆಗೆ ಊರಿಗೆ ಬಂದ ರಾಮಚಂದ್ರ ಕ್ಷಯದಿಂದ ಕ್ಷೀಣಿಸಿ ಗತಿಸಿದ್ದು ಇವೇ ಮೊದಲಾದ ವಿವರಗಳಿವೆ.

ಇನ್ನೊಂದು ಲೇಖನ ಡಾ. ಎಚ್. ಎಂ. ಮರುಳಸಿದ್ಧಯ್ಯನವರದು. ಇವರು ಮೈಸೂರಿನಲ್ಲಿ ಸೇಂಟ್ ಫಿಲೋಮಿನಾ ಮತ್ತು ಮಹಾರಾಜಾ ಕಾಲೇಜುಗಳಲ್ಲಿ ವಿದ್ಯಾರ್ಥಿದೆಸೆಯಲ್ಲಿ ರಾಮಚಂದ್ರರ ಸ್ನೇಹಿತರು. 'ರಾಮಚಂದ್ರನ ಚಿತ್ರ' ಎಂಬ ಈ ಲೇಖನದಲ್ಲಿ ಮೃದು ದನಿಯ, ಮಿತ ಮಾತಿನ, ಸಂಕೋಚ ಪ್ರವೃತ್ತಿಯ ಸಂವೇದನಾಶೀಲ ತರುಣ ರಾಮಚಂದ್ರನ ಚಿತ್ರ ತುಂಬ ಚೆನ್ನಾಗಿ ಮೂಡಿಬಂದಿದೆ. ಆರೋಗ್ಯ ಕ್ಷೀಣಿಸಿ ಬೇಸಿಗೆ ರಜೆಯಲ್ಲಿ ಊರಿಗೆ ತೆರಳಿದ ರಾಮಚಂದ್ರ ತಮಗೆ ಬರೆದ ಪತ್ರಗಳನ್ನು ಮರುಳಸಿದ್ಧಯ್ಯ ಇಲ್ಲಿ ಕೊಟ್ಟಿದ್ದಾರೆ. ಸಾವಿನ ದವಡೆಯಲ್ಲಿ ಸಿಕ್ಕ ರಾಮಚಂದ್ರರ ಮನಸ್ಥಿತಿಯ ಸೂಚನೆಗಳು ಒಂದೆರಡು ಪತ್ರಗಳಲ್ಲಿದ್ದು ಮನ ಕಲಕುತ್ತವೆ. ವಿದ್ಯಾರ್ಥಿಗಳ ಸಾಹಿತ್ಯಪ್ರೇಮ, ಚರ್ಚೆ, ಸಾಹಿತ್ಯ ಪ್ರಕಟನೆಯ ಸಾಹಸಗಳು, ಸ್ಪರ್ಧೆಗಳ ಸಂಕ್ಷಿಪ್ತ ನಿರೂಪಣೆಯೂ ಇದೆ. ಪುತ್ತೂರು ಬೋರ್ಡ್ ಹೈಸ್ಕೂಲಿನಲ್ಲಿ ೧೯೪೫-೪೮ರ ಅವಧಿಯಲ್ಲಿ ಕುಂಞಿಹಿತ್ಲು ರಾಮಚಂದ್ರ ಮತ್ತು ಅಕಾಲ ಮೃತ್ಯುವಿಗೆ ತುತ್ತಾದ ಇನ್ನೊಂದು ಸಾಹಿತ್ಯಪ್ರತಿಭೆ ಯರ್ಮುಂಜ ರಾಮಚಂದ್ರ ಇಬ್ಬರಿಗೂ ಸಹಪಾಠಿಯಾಗಿದ್ದ 'ಬಿದ್ದಗರಿ'ಯ ರಾಮಚಂದ್ರರ ಹಾಸ್ಟೆಲ್ ಸಹವಾಸಿಯೂ ಆಗಿದ್ದ ಎಂ. ಬಿ. ಮರಕಿಣಿಯವರ 'ರಾಮಚಂದ್ರರ ನೆನಪು' ಇಲ್ಲಿರುವ ಕೊನೆಯ ಲೇಖನ.

'ಬಿದ್ದಗರಿ'ಯ ಕವಿತೆಗಳಲ್ಲಿ ತೋರುವಂತೆ ರಾಮಚಂದ್ರ ಓರ್ವ ಭಾವುಕ ಕವಿ. ತಮ್ಮ ವಯಸ್ಸಿಗೆ ತುಂಬ ಪ್ರೌಢವೆನ್ನಿಸುವಂಥ ಕವಿತೆಗಳನ್ನೇ ಅವರು ಬರೆದಿದ್ದರೆಂಬುದು ಇಲ್ಲಿ ವೇದ್ಯವಾಗುತ್ತದೆ. ಕನ್ನಡ ಕಾವ್ಯವಿಮರ್ಶೆಯಲ್ಲಿ ರಾಮಚಂದ್ರರ ಕಾವ್ಯ ಪರಿಶೀಲನೆಗೆ ಅರ್ಹವಾಗಿದೆ. ಬದುಕಿ ಉಳಿದಿದ್ದರೆ ಕನ್ನಡ ಕಾವ್ಯಕ್ಕೆ ಅಕೃತ್ರಿಮವಾದ ಕೋಮಲ ಕಾವ್ಯದ ಒಂದು ಧಾರೆಯಾಗಿ ಅವರ ಕಾವ್ಯ ಪೂರ್ಣಪ್ರಮಾಣದಲ್ಲಿ ಅರಳುತ್ತಿತ್ತೆನ್ನಿಸುತ್ತದೆ. ರಾಮಚಂದ್ರರ ಬದುಕು-ಬರಹಗಳನ್ನು ಮತ್ತೊಮ್ಮೆ ಸಾಹಿತ್ಯಲೋಕದ ಗಮನಕ್ಕೆ ತಂದ ಮರುಳಸಿದ್ಧಯ್ಯ-ಮರಕಿಣಿಯವರ ಪ್ರಯತ್ನ ಅಭಿನಂದನಾರ್ಹ.

– ಅಶೋಕ ಶೆಟ್ಟರ್, ೩೭, ಶಾಂತಿಸಾಗರ, ತಪೋವನ, ಧಾರವಾಡ - ೫೮೦ ೦೦೩

೪. *ನಾಟಕತ್ರಯ :* ಡಾ. ಕೆ. ಎಸ್. ರತ್ನಮ್ಮ

ಈಶ್ವರಿ ಪ್ರಕಾಶನ, ೨೮೫/ಎಫ್ ೬, ಮೊದಲ ಮಹಡಿ, ೫ ನೇ ತಿರುವು, ಉತ್ತರಾದಿಮಠ ರಸ್ತೆ, ಮೈಸೂರು-೫೭೦ ೦೦೪, ಪ್ರ.ಮು. ೨೦೦೪, ಪು. ೬೪, ರೂ. ೪೦/-

ಶಾಲಾಮಕ್ಕಳಿಗಾಗಿ ಬರೆಯಲಾದ ಮೂರು ಕಿರುನಾಟಕಗಳಲ್ಲಿ ಮೊದಲನೆಯದು 'ಪೌರರು ಯಾರು?' ತರಗತಿಯ ವಾತಾವರಣದಲ್ಲಿ ಅಧ್ಯಾಪಿಕೆ ತನ್ನ ವಿದ್ಯಾರ್ಥಿಗಳನ್ನು ಕುರಿತು ದೇಶ, ಭಾಷೆ, ಧರ್ಮ, ಪೌರತ್ವ ಇತ್ಯಾದಿಗಳನ್ನು ವಿವರಿಸುವ, ಸರಳ-ಪ್ರಶ್ನೋತ್ತರ ಮಾದರಿಯ ನಾಟಕ.

'ಕುಣಿಯೋಣ ಬಾರ' ಎಂಬುದು ಕೋಮುಸೌಹಾರ್ದವನ್ನು ಹೇಳುತ್ತದೆ. ರಾಮ ಆಯೂಬರಿಬ್ಬರು ಕೋಮು ದಳ್ಳುರಿಗೆ ತುತ್ತಾಗಿದ್ದರು. ಆಯೂಬನ ತಂದೆ ಅನ್ಯಮತೀಯರನ್ನು ಕೊಲ್ಲಲೆಂದು ಬಂದಾಗ ತನ್ನ ಮಗನೂ ಅವರೊಂದಿಗಿರುವುದನ್ನು ಕಂಡು ಕೊಲ್ಲಲಾಗದೆ ಇಬ್ಬರನ್ನೂ ರಕ್ಷಿಸುವ ಕಥೆ ಇದರಲ್ಲಿದೆ.

ಮಕ್ಕಳ ಮನಸ್ಸು ಶುದ್ಧ. ಅವರ ಮೂಲಕ ಸಮುದಾಯ ಕೂಡ ಪಾಠ ಕಲಿಯಬಹುದೆಂಬ ನೀತಿಯನ್ನು ಈ ನಾಟಕದೊಳಕ್ಕೆ ಆವಾಹಿಸಿಕೊಳ್ಳಲಾಗಿದೆ.

'ಗೂಢಚಾರಿ' ಎಂಬುದು ಮೂರನೆಯ ನಾಟಕ. ತೆನಾಲಿರಾಮನೂ ಕೆಲವೊಮ್ಮೆ ದಡ್ಡನಾಗಿಬಿಡುತ್ತಾನೆ ಎಂಬುದನ್ನು ಹೇಳುವ ಪ್ರಯತ್ನ ಇಲ್ಲಿದೆ. ಸುಲ್ತಾನನ ಕಡೆಯ ಸೋಮಯ್ಯನು ಕೃಷ್ಣದೇವರಾಯನನ್ನು ಕೊಲ್ಲಲು ಬಂದು ಕೊನೆಗೂ ಸಿಕ್ಕಿಬೀಳುವ ಕಥಾಸಂದರ್ಭವಿದು.

ಮೂರು ನಾಟಕಗಳೂ ಶಾಲಾಮಕ್ಕಳನ್ನು ದೃಷ್ಟಿಯಲ್ಲಿರಿಸಿ ಬರೆದವುಗಳಾಗಿವೆ. ಪ್ರಕಟಿಸುವ ವೇಳೆಯಲ್ಲಾದರೂ ಇನ್ನಷ್ಟು ಒಪ್ಪಗೊಳಿಸಬಹುದಾಗಿತ್ತು.

– ಡಾ. ನಾ. ದಾಮೋದರ ಶೆಟ್ಟಿ, ಪ್ರಸಾಧನ, ಬಿಜೈ, ಭಾರತೀನಗರ, ಮಂಗಳೂರು - ೫೭೫ ೦೦೪

ಸಂಕಲನ : ಅನಿಸಿಕೆ

೧. ಸಂಕಲನದ ಈವರೆಗಿನ ಎಲ್ಲ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳ ಆಳ, ವಿಸ್ತಾರ ನೋಡಿ ದಂಗಾದೆ. ಡಾ. ಷ. ಶೆಟ್ಟರರ ಲೇಖನಮಾಲೆ ಕಾದಿಡುವಂಥದು, ಪುಸ್ತಕ ರೂಪದಲ್ಲಿ ಬರುವಂಥದು. ನಿಮ್ಮ ಕಡೀಪುಟ ನನಗೆ ವೈಚಾರಿಕವಾಗಿ ಮೊದಲ ಪುಟ. / ಸಂಕಲನ-೨೧ ರಲ್ಲಿ ಬಂದ ಎನ್ಕೆ ಅವರ ನನ್ನ ಅಪ್ಪ ಅವ್ವ ಓದಿದೆ. ಅವರ ಲೇಖನದ ಕೊನೆ ಓದಿದಾಗ, ನನಗೂ ಕಣ್ಣೀರು ತುಂಬಬಂದವು. ಕೈಫೀ ಆಜ್‌ಮಿಯವರ ಕವನಗಳು ತುಂಬ ಹಿಡಿಸಿದವು. ಇಂಥವೇ ಕೆಲವು ಹಳೆಯ ಹಿಂದೀ ಉರ್ದೂ ಕವನಗಳು ನನ್ನ ನಿದ್ದೆ ಕೆಡಿಸಿವೆ– ೪೦-೫೦ ವರ್ಷಗಳಿಂದ. ಡಾ. ಪಾರ್ಶ್ವನಾಥರ ಎಚ್. ಎಲ್. ಎನ್. ಸಿಂಹ ಕುರಿತ ಲೇಖನ ಓದಿ ಸಿಂಹರ ಬಗ್ಗೆ ಗೌರವ ಹೆಚ್ಚಿತು. ಲೇಖಕರು ಎಷ್ಟು ವಿಷಯ ಸಂಗ್ರಹಿಸಿದ್ದಾರೆ!

– ವೆಂಕಟೇಶ ಕುಲಕರಣಿ, ಧಾರವಾಡ

೨. ಅಪರೂಪದ ಸಾಹಿತಿ ಎನ್ಕೆ ಅವರು ತಮ್ಮ ನೆನಪಿನ ಬುತ್ತಿಯಿಂದ ಬಾಲ್ಯದ ಅನೇಕ ಸಿಹಿ ಕಹಿ ಘಟನೆಗಳನ್ನು ಮುಚ್ಚುಮರೆಯಿಲ್ಲದೆ ತಮ್ಮ ವಿಶಿಷ್ಟ ದೇಶಿ ಭಾಷೆಯಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ತಮ್ಮ ಜೀವನದಲ್ಲಿಯೇ ಬಲವಂತವಾಗಿ ನಡೆದ ಅನಾಗರಿಕ, ಅಮಾನವೀಯ, ಕ್ರೂರ, ಗೊಡ್ಡು ಸಂಪ್ರದಾಯದ ಆಚರಣೆಯಿಂದಾದ ಮಾನಸಿಕ ಆಘಾತದ ಕರಾಳ ಘಟನೆ ಮರೆಯದಂಥದು.

– ಜಿ. ಹೆಚ್. ಪ್ರಸಾದ್, ಚಿಕ್ಕಮಗಳೂರು

೩. ಎನ್ಕೆ ಅವರ 'ನನ್ನ ಅಪ್ಪ ಅವ್ವ', ಶ್ಯಾಮಲಾರವರ 'ನನ್ನ ಗುರುಗಳು' ಲೇಖನ ಸಂಕಲನದ ಮಾಲಿಕೆಗೆ ಭೂಷಣವಾಗಿರುವಂತಹವು. ಷ. ಶೆಟ್ಟರ್ ಅವರ ಕವಿರಾಜಮಾರ್ಗ ಲೇಖನಮಾಲೆಯ ಪ್ರತಿ ಕಂತು ಓದುವಾಗ ಹಿಂದಿನ ಕಂತುಗಳನ್ನು ಪಕ್ಕದಲ್ಲಿಟ್ಟುಕೊಂಡು ಓದಬೇಕು. ಇದು ನಮ್ಮ ಅರಿವಿನ ವಿಸ್ತರಣೆ ಮತ್ತು ಮಂಥನಕ್ಕೆ ನೆರವಾಗುವಂತೆ ಪಾಂಡಿತ್ಯಪೂರ್ಣ, ಮತ್ತು ಅದೇ ಕಾಲಕ್ಕೆ ಸರಳ ಸಂವಹನಕಾರಿಯಾದ ಲೇಖನಮಾಲೆಯಾಗಿದೆ. ಸಂಕಲನ ಬಹುಕಾಲ ನಿಲ್ಲುವಂಥ ಕೆಲಸ ಮಾಡುತ್ತಿದೆ.

– ಲಲಿತಾ ಸಿದ್ದಬಸವಯ್ಯ, ತುಮಕೂರು

೪. ಸಂಕಲನದಲ್ಲಿ ಪ್ರಕಟವಾಗುತ್ತಿರುವ ಬರಹಗಳು ನನ್ನಂಥ 'ಕನ್ನಡೇತರರಿಗೆ' (ಅಂದರೆ ಕನ್ನಡವನ್ನು ವಿದ್ಯಾರ್ಥಿ ಜೀವನದಲ್ಲಿ ಯಾವ ಹಂತದಲ್ಲೂ ಓದಿಕೊಂಡಿರದೆ ಕೇವಲ ಅದರ ಮೇಲಿನ ಪ್ರೀತಿಗಾಗಿ ಅದನ್ನು ಕಲಿತುಕೊಂಡಿರುವವರಿಗೆ) ಉಪಯುಕ್ತ ಹಾಗೂ ಸ್ವಾರಸ್ಯಕರ.

– ವೆಂಕಟಲಕ್ಷ್ಮಿ ಬಿ. ಎಸ್., ಬೆಂಗಳೂರು

೫. ಸಂಕಲನದಲ್ಲಿ ನೀವು ಪ್ರಕಟಿಸುತ್ತಿರುವ ಡಾ ಎಸ್. ಶೆಟ್ಟರ್ ಅವರ ಕವಿರಾಜಮಾರ್ಗ ಕುರಿತ ಲೇಖನಗಳು ವಿಶಿಷ್ಟವೂ ವಿನೂತನವೂ ಸಂಶೋಧನಾತ್ಮಕವೂ ಆಗಿವೆ. ಈ ತೆರನ ಲೇಖನಗಳ ಪ್ರಕಟನೆಯಿಂದ ಸಂಕಲನ ಪತ್ರಿಕೆಗೆ ಘನತೆ ಗೌರವ ಪ್ರಾಪ್ತವಾಗಿವೆ.

ಶ್ರೇಷ್ಠ ಇತಿಹಾಸಕಾರರಾದ ಡಾ. ಎಸ್. ಶೆಟ್ಟರ್ ಅವರು ತಮ್ಮ ಬಹುಕಾಲದ ವ್ಯಾಸಂಗ ಮತ್ತು ಸಂಶೋಧನೆಗಳ ಫಲವಾಗಿ ಅಭೂತಪೂರ್ವ ಲೇಖನಗಳನ್ನು ಬರೆದಿದ್ದಾರೆ. ಕವಿರಾಜಮಾರ್ಗದ ಆಂತರಿಕ ಆಧಾರಗಳನ್ನು ಆಧರಿಸಿ 'ಕಾವೇರಿಯಿಂದಮಾ ಗೋದಾವರಿವರಮಿರ್ಪ' ಕರ್ನಾಟಕದ ಸೀಮಾರೇಖೆಗಳನ್ನು ಗುರುತಿಸಲು ಯತ್ನಿಸಿರುವುದು ಲೇಖಕರ ಅಸಾಧಾರಣ ಪ್ರತಿಭೆಗೆ ಅನುಪಮ ಸಂಶೋಧನ ಪ್ರವೃತ್ತಿಗೆ ಜ್ವಲಂತ ನಿದರ್ಶನವಾಗಿದೆ.

ಕನ್ನಡದ ಆದಿಗ್ರಂಥವೂ ಲಕ್ಷಣಗ್ರಂಥವೂ ಆಗಿರುವ ಕವಿರಾಜಮಾರ್ಗದ ಕರ್ತೃ, ಕಾಲ, ದೇಶ, ವರ್ತಮಾನಗಳ ಬಗೆಗೆ ಈವರೆಗೆ ವಿದ್ವಾಂಸರಲ್ಲಿ ಸಾಕಷ್ಟು ವಾದವಿವಾದಗಳೂ, ವಿಮರ್ಶೆ, ವಿಶ್ಲೇಷಣೆ, ಸಂಶೋಧನೆಗಳೂ ನಡೆದಿವೆ. ಈ ಕಾವ್ಯದ ಮೂರು ನಾಲ್ಕು ಪರಿಷ್ಕರಣಗಳೂ ಪ್ರಕಟವಾಗಿವೆ. ಈ ಎಲ್ಲ ಮುದ್ರಣಗಳಲ್ಲಿ ಡಾ. ಶೆಟ್ಟರ್ ಅವರು ಕೂಲಂಕಷವಾಗಿ ಪ್ರಸ್ತಾಪಿಸಿರುವ ಸಂಗತಿಗಳು

ಮತ್ತೆಲ್ಲಿಯೂ ಉಲ್ಲೇಖಗೊಂಡಂತೆ ಕಂಡುಬಂದಿಲ್ಲ. ಒಬ್ಬ ಶ್ರೇಷ್ಠ ಇತಿಹಾಸಕಾರನ ವಿಶಿಷ್ಟ ಪ್ರತಿಭೆ ಯಾವ ಯಾವ ನಿಟ್ಟಿನಲ್ಲಿ ನೂತನ ಸಂಶೋಧನೆಗಳನ್ನು ಮಾಡಬಲ್ಲುದು ಎಂಬುದಕ್ಕೆ ಈ ಲೇಖನಗಳು ಸಾಕ್ಷೀಭೂತವಾಗಿ ನಿಲ್ಲಬಲ್ಲುವು. ನಾಮನಿಷ್ಪತ್ತಿ, ಬಿರುದುಗಳು, ವಿಶೇಷಣಗಳು, ವಿಶಿಷ್ಟ ಪದಗಳ ಬಗೆಗೆ ಲೇಖಕರ ವಿವರಣೆ, ವಿಶ್ಲೇಷಣೆ, ವ್ಯಾಖ್ಯಾನ, ತೀರ್ಮಾನ ತರ್ಕಬದ್ಧವಾಗಿವೆ.

ರಾಷ್ಟ್ರಕೂಟರ ಇತಿಹಾಸ ರಚನೆಗೆ ಅತ್ಯಂತ ಮಹತ್ವದ ಆಕರಗ್ರಂಥವಾದ ಕವಿರಾಜಮಾರ್ಗದ ಕಾವ್ಯಾಧಾರವನ್ನೇ ಅಲ್ಲದೆ ಶಾಸನಾಧಾರಗಳನ್ನೂ ಬಳಸಿಕೊಂಡು ಅದರ ಎಲ್ಲ ಮಗ್ಗುಲುಗಳನ್ನು, ಸಂಶೋಧನೆಯ ಬೇರುಗಳನ್ನು ಪಾತಾಳಗರಡಿಯಂತೆ ಹೊರತೆಗೆದಿರುವುದು ಒಂದು ನೂತನ ಸೃಷ್ಟಿಕಾರ್ಯವೆಂದು ನಾನು ಭಾವಿಸಿದ್ದೇನೆ. ಈ ಲೇಖನಗಳ ಸಿದ್ಧತೆಗಾಗಿ ಲೇಖಕರು ಪರಿಶೀಲಿಸಿರುವ ಆಕರಗ್ರಂಥಗಳ ಪಟ್ಟಿಯನ್ನು ಪರಿಶೀಲಿಸಿದವರಿಗೆ ಅವರ ಅಪಾರ ಪರಿಶ್ರಮದ ಅರಿವಾಗುತ್ತದೆ. ಇತಿಹಾಸಕಾರರ ಪ್ರಜ್ಞೆ ಯಾವ ದಿಸೆಯಲ್ಲಿ ಕಾರ್ಯ ಕೈಗೊಳ್ಳುವುದು ಎಂಬುದಕ್ಕೆ ಈ ಲೇಖನಗಳು ಮಾರ್ಗದರ್ಶಿಯಾಗಿವೆ, ಮಾದರಿಯಾಗಿವೆ. ಕನ್ನಡದ ಎಲ್ಲ ಕಾವ್ಯಗಳ ಅನುಸಂಧಾನ ಈ ತೆರನಲ್ಲಾದರೆ ಸಾಹಿತ್ಯದ ಮೇಲೆ ನಿಜಕ್ಕೂ ಹೊಸ ಬೆಳಕುಂಟಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ ಎಂಬುದು ನನ್ನ ಅನಿಸಿಕೆ. ಕವಿರಾಜಮಾರ್ಗ ಮಂಥನವನ್ನು ಕುರಿತ ಈ ಲೇಖನಗಳು ಒಬ್ಬ ಪ್ರತಿಭಾವಂತ ಇತಿಹಾಸಕಾರನ ನಿರಂತರ ಸಂಶೋಧನೆಗಳ ಒಂದು ನೂತನ ಮಾರ್ಗವನ್ನು ಸೃಷ್ಟಿಸುವ ದಾರಿದೀಪಗಳಾಗಿವೆ. ಈ ದೀಪಗಳ ಬೆಳಕಿನಿಂದ ಹೊಸ ದೃಷ್ಟಿಯನ್ನು ಬೆಳಸಿಕೊಂಡು ಹೊಸ ಸೃಷ್ಟಿಯನ್ನು ಮಾಡಬಹುದಾಗಿದೆ. ಕವಿರಾಜಮಾರ್ಗ ಮಂಥನದಿಂದ ಈವರೆಗೆ ಉದ್ಭವಿಸಿದ ಕೋಲಾಹಲ, ಹಾಲಾಹಲಗಳನ್ನು ನಿಷ್ಕ್ರಿಯಗೊಳಿಸಿ ಅಮೃತವನ್ನು ಧಾರೆಯೆರೆದಂತಾಗಿದೆ.

ಲೇಖಕರು ಪ್ರಾರಂಭದಲ್ಲಿ 'ಕವಿರಾಜಮಾರ್ಗವು ರಾಷ್ಟ್ರಕೂಟ ಇತಿಹಾಸ ರಚನೆಗೆ ಅತ್ಯಂತ ಮಹತ್ವದ ಆಕರ ಗ್ರಂಥ. ಆದರೆ ಇದನ್ನು ಪರಿಪೂರ್ಣವಾಗಿ - ಅರ್ಥಪೂರ್ಣವಾಗಿ ಇತಿಹಾಸಕಾರರಾರೂ ಇನ್ನೂ ಉಪಯೋಗಿಸಿಲ್ಲ. ಈ ಲೇಖನವು ಆ ನಿಟ್ಟಿನೆಡೆಗೆ ಇಟ್ಟ ಒಂದು ಹೆಜ್ಜೆ. ಈ ಗ್ರಂಥದಲ್ಲಿ ಬರುವ ವಿಶೇಷಣಗಳನ್ನೆಲ್ಲ ಸಂಗ್ರಹಿಸಿ ಶಾಸನಗಳ ಹಿನ್ನೆಲೆಯಲ್ಲಿ ಅವುಗಳ ಮೌಲ್ಯವನ್ನು ನಿರ್ಧರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ' ಎಂದು ಹೇಳಿರುವುದನ್ನು ಯಥಾರ್ಥಗೊಳಿಸಲಾಗಿದೆ.

– ಎಸ್. ಬಸವಾರಾಧ್ಯ, ಬೆಂಗಳೂರು

೬. ಕವಿರಾಜಮಾರ್ಗವನ್ನು ಕುರಿತು ಈವರೆಗಿನ ಚರ್ಚೆಯನ್ನು ಗಣನೀಯವಾಗಿ ವಿಸ್ತರಿಸಿದ್ದೀರಿ. ಕವಿರಾಜಮಾರ್ಗದ ದ್ರಾವಿಡ ಬೇರುಗಳನ್ನು, ತಮಿಳಿನ ತೊಲ್‌ಕಾಪ್ಪಿಯಂ ಮತ್ತು ಕನ್ನಡದ ಕವಿರಾಜಮಾರ್ಗ ಈ ಎರಡೂ ಕೃತಿಗಳು ಸಂಸ್ಕೃತ ಸಾಹಿತ್ಯ ಹಾಗೂ ಭಾಷಾಪರಂಪರೆಗೆ ತೋರಿದ ಸೃಜನಾತ್ಮಕ ಪ್ರತಿಕ್ರಿಯೆಗಳ ತೌಲನಿಕ ವಿವೇಚನೆಯ ಮೂಲಕ, ಬಹುಶಃ ಮೊದಲ ಬಾರಿಗೆ ಗುರುತಿಸುವ ಪ್ರಯತ್ನವನ್ನು ನೀವು ಮಾಡಿದ್ದೀರಿ. ಹಾಗೆಯೇ, 'ಕಾವೇರಿಯಿಂದ ಗೋದಾವರಿಯ ವರೆಗೆ' ಎಂಬ ಉಕ್ತಿಯ ಮೂಲಕ ಕರ್ನಾಟಕದ ಭೌಗೋಳಿಕ ನಕಾಶೆಯನ್ನು ಪ್ರಸ್ತಾಪಿಸಿದ ಕವಿರಾಜಮಾರ್ಗಕ್ಕೂ ಬಹು ಹಿಂದೆ ತಮಿಳು ತೊಲ್‌ಕಾಪ್ಪಿಯಂ ಒಳಗೇ ಈ ಸೂಚನೆಯಿದೆ ಎಂಬ ಸಂಗತಿಯನ್ನು ನೀವು ನಿಮ್ಮ ಲೇಖನದಲ್ಲಿ ತುಂಬ ಸವಿಸ್ತಾರವಾಗಿ ಚರ್ಚಿಸಿ 'ಪ್ರಾಕೃತ ಮತ್ತು ಸಂಸ್ಕೃತ ಭಾಷಿಕರಾರೂ ಮಾಡದಿದ್ದುದನ್ನು ತಮಿಳರು ಮಾಡಿ, ತಮ್ಮ ಭಾಷೆಯೊಂದಿಗೆ ಗುರುತಿಸಿಕೊಂಡದ್ದು ನಮ್ಮ ಭಾಷಾ ಇತಿಹಾಸದಲ್ಲಿಯೇ ಒಂದು ಅಭೂತಪೂರ್ವ ಘಟನೆ' ಎಂಬ ಹೊಸ ವಿಚಾರವನ್ನು ನೀವು ಅನಾವರಣಗೊಳಿಸಿದ್ದೀರಿ. ಅಭಿನಂದನೆಗಳು.

ನಾನು ವಿದ್ವಾಂಸನಲ್ಲ. ಒಬ್ಬ ಶ್ರದ್ಧಾವಂತನಾದ ಓದುಗ. ನನ್ನ ಪತ್ರ ಅಂಥ ಓದುಗನೊಬ್ಬನ ಪ್ರತಿಕ್ರಿಯೆ ಎಂದಷ್ಟೆ ನೀವು ಭಾವಿಸಬೇಕೆಂಬುದು ನನ್ನ ಕೋರಿಕೆ.

(ಡಾ. ಎಸ್. ಶೆಟ್ಟರ್ ಅವರಿಗೆ ಬರೆದ ಪತ್ರದಲ್ಲಿ) – ಜಿ. ಎಸ್. ಶಿವರುದ್ರಪ್ಪ, ಬೆಂಗಳೂರು

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಕಳೆಯೂದು, ಕಳೆದುಹೋಗೂದು, ಕಳಕೊಳ್ಳೂದು, ಕಳೆದುಬಿಡೂದು, ಕಳದಂಗಾಗೂದು, ಕಳೀಬೇಕನಿಸೂದು, ಇಲ್ಲದಂಗಾಗೂದು, ನಾಶ ಹೊಂದೂದು, ಲಯ ಆಗೂದು, ಐಕ್ಯಗೊಳ್ಳೂದು, ಒಂದಾಗೂದು, ಶೂನ್ಯವಾಗೂದು, ಮುಳಗೂದು, ಮುಗಿಯೂದು, ಉಳಿಯದಂಗಾಗೂದು, ಹೋಗಿಬಿಡೂದು, ಹಾರಿಹೋಗೂದು, ಕಣ್ಣುಮುಚ್ಚೂದು, ಕೈ ಮುಗಿಯೂದು, ಗೋತಾ ಹೊಡೆಯೂದು, ಗೊಟಕ್ಕನ್ನೂದು, ಉಸರು ಹಾರೂದು, ಹುತಾತ್ಮರಾಗೂದು, ಹಕ್ಕಿ ಹಾರೂದು, ನೆಲಾ ಸೇರೂದು, ನೆಲಾ ಕಚ್ಚೂದು, ಮಣ್ಣಾಗೂದು ಮುಂತಾದ ನೂರಾರು ಪದಗಳ ಮಣ್ಣೊಳಗ ಮರೆಯಾದ, ಅಡಗಿದ, ಹುದುಗಿದ, ಅಥವಾ ಸಾಕಾರದೊಳಗ ನಿರಾಕಾರವಾದ ಅರ್ಥದ ಹಿಂದಿನ ಏಕರಸದ ಸ್ವಾದ ಎಂಥಾದ್ದಿರಬಹುದು ಅಂತ ವಿಚಾರ ಮಾಡಿಕೊಂತ ಕುಂತಿದ್ದೆ. ನನ್ನ ಪುಸ್ತಕಾ ಡೀಟೀಪಿಸುವ ಹುಡುಗ ಧುತ್ತಂತ ಎದುರಿಗೆ ಬಂದು ನಿಂತ. ಯಾಕಪಾ, ಏನಾತು, ಈ ಅಡಹೊತ್ತಿನ್ಯಾಗ ಯಾಕ ಬಂದಿ ಅಂದೆ. ಸ್‍ಅರ್, ನನ್ ಮದಿವಿ, ನಾ ಒಂದ್ ತಿಂಗಳ 'ಇರೂದುಲ್ಲ' ಅಂದ. ಎಲ್ಲಾ ನಿಘಂಟುಗಳನ್ನ ತಲೀಮ್ಯಾಲ ಹೊತ್ತುಗೊಂಡು ಗಕ್ಕನ್‍ಅ ಪಾತಾಳಕ್ಕ ಕುಸಿದ್ಹಂಗಾತು ನನಗ. ಈ ಮದಿವಿಯಿಂದಾಗಿನೂ ಮಾಡಬೇಕಾಗಿದ್ದು ಮಾಡಾಕಾಗೂದುಲ್ಲ, ಆಗಬೇಕಾಗಿದ್ದು ಆಗೂದುಲ್ಲ, ಅಂದರ ಇದೂ ಒಂದ ರೀತೀಲೆ ಏನೇನೋ ಕಳೆಯುವ ಕಳಕೊಳ್ಳುವ ಕೆಲಸಾ ಮಾಡುವ ಕ್ರಿಯಾ ಅಂದ್ಹಂಗಾತಲ್ಲ ಅನಿಸಿ, ಆಗ್ಲೆಪಾ, ಹೋಗು, ಲಗೂನ ಎಲ್ಲಾ 'ಮುಗಿಸಿಕೊಂಡು' ಬಾ ಅಂದೆ.

ಪ್ರತಿಯೊಂದು ಶಬ್ದಕ್ಕೂ ಹಿಂಗ ಮುಗಿಯುವ, ಮುಗಿಸುವ ಅರ್ಥ ಇದ್ದರ, ಕತ್ತಲ ಬೆಳಗಾಗುವಂಥಾ, ದಾರಿಗೆ ಬೆಳಕಾಗುವಂಥಾ ಪದಾ ಯಾವಂಗಾರ? ಇನ್ನ ನಿಜವಾದ, ಖಚಿತವಾದ, ಸ್ಪಷ್ಟವಾದ ಅರ್ಥ ಎಲ್ಲಿ ಹುಡುಕಬೇಕು? ಅರ್ಥ ಅಂದರ ಏನು? ಈ ಜಗತ್ತು ಈ ಸಂಸಾರ ಈ ಲೋಕ ಈ ಜೀವನ ಈ ಬಾಳೆ ಇತ್ಯಾದಿ ತಿಳಿದವರ್ಹಂಗ ಪ್ರವಚನ ಮಾಡವರಿಗೆ, ಭಾಷಣಾ ಝಾಡಿಸುವವರಿಗೆ, ವಿದ್ವಾಂಸರು ಅಂದುಕೊಳ್ಳವರಿಗೆ ಈ ಅರ್ಥ ಹೊಳೆದಿರಬಹುದು ಅನಿಸಿತು. ಅಂಥಾ ಮಂದಿ ಇಂಥಾ ಪದಗಳನ್ನ ಮ್ಯಾಲಿಂದ ಮ್ಯಾಲ ಹೇಳತಾರ, 'ಬಳಸತಾರ', ವಿವರಿಸತಾರ. ಸಾಮಾನ್ಯ ಮಂದಿನೂ ಇವನ್ನ ಆಡತಾರ, 'ಬಳಸ'ತಾರ, ಬದುಕತಾರ. ಆದರ ಈ ಪದಗಳ ಅರ್ಥದ ತಿರುಳು, ಬೆಳಕಿನ ನೆರಳು, ಭಾವದ ಬಯಲು ಮಾತ್ರ ಬಹುಶಃ ಯಾರಿಗೂ ತಿಳಿದಿರೂದೇ ಇಲ್ಲ. ತಿಳಿದಿದ್ದರ ಮತ್ತ ಮತ್ತ ಅವುಗಳ ಬಗ್ಗೆ ಯಾಕ ಮಾತಾಡತಿದ್ದರು ಹೇಳ್ರಿ? ಪದಗಳು ದನಿಯೊಳಗ ಹನಿ ಹನಿ ಆಗಿ ಸೇರತಾವು, ರಸ ಆಗಿ ಕರಗತಾವು; ಅರ್ಥಗಳು ಮನಸ್ಸನ್ನ ಆವರಿಸತಾವು, ಮಸುಕಾಗಿ ಕಸು ಕಳಕೋತಾವು, ಬಳಕೆಯ ಬತ್ತಳಿಕೆಯೊಳಗ ಕಸಾ ಆಗಿ ಸೋರಿಬಿಡತಾವು.

ಅಂಥಾ ಹೊತ್ತಿನ್ಯಾಗ ಯಾವ್ದು ನಮಗ ತಿಳಿಯೂದಿಲ್ಲವೋ ಅದನ್ನ ಅಗಮ್ಯ, ಅಪಾರ, ಅಮರ, ಅಗೋಚರ, ಮಹತ್ತರ, ಬೃಹತ್ತರ, ಅದ್ಭುತ ಇತ್ಯಾದಿ ಮತ್ತ ಅದೇ ಕೋಶದೊಳಗಿನ ಪದಗಳ ಸಂದುಕದೊಳಗ ಕಟ್ಟಿ ಇಟ್ಟಬಿಡತೇವಿ. ನಮಗ ತಿಳಿದಿಲ್ಲ ಅಂತ ಹೇಳಿಕೊಳ್ಳಾಕ ನಾಚಿಕಿ, ಹೆದರಿಕಿ. ಈ ಸೋಲಿನ ಭಾವದಿಂದನ್‍ಅ ನಮ್ಮನ್ನ ನಾವು ಪ್ರಕಾಂಡ ಪಂಡಿತರು, ವಿದ್ವಾಂಸರು ಅಂತ ಮತ್ತೊಂದು ವೇಷಾ ತೊಟ್ಟುಗೊಂಡು ಅದರೊಳಗ ಅಡಗಿ ಬಿಡತೇವು. ಆಗ ನಮಗ ಗೊತ್ತಿಲ್ಲದ್ಹಂಗ ಮತ್ತೊಂದು ಹೊಸ ಮೋಸಾವತಾರ ಸುರು ಆಕ್ಕತಿ. ಅದರ ಕೂಡ, ತಿಳಕೊಂಡೇವಂಥ ತಿಳದು ನಾವು ಬರೆಯುವ ಪುಸ್ತಕ, ಅರಿತೇವಂತ ಭಾವಿಸುವ ಬದುಕು, ಹೊಳದಯ್ತಂತ ಹೇಳುವ ಉಪದೇಶ ಇತ್ಯಾದಿ ಎಲ್ಲಾ ಮತ್ತ ಮೊದಲಿನ ಅಡ್ಡಡ್ಡ ದಾರಿಗುಂಟನ್‍ಅ ಅಲೆದಾಡತಾವು. ಪದವಿ ಪಡೆದವ್ನ್ಹಗ ಅದರ ಪದಾರ್ಥ ಅರಿವಿಗೆ ಬಂದಿರೂದಿಲ್ಲ. ಸಂಗೀತ ಹಾಡಾವ್ನ್ಹಗ ಅದರ ಒಳರಾಗ ಹೊಳೆದಿರೂದಿಲ್ಲ. ಪಾಠಾ ಹೇಳಾವ್ನ್ಹಗ ಅದರ ಆಟಾನ್‍ಅ ಗೊತ್ತಿರೂದಿಲ್ಲ. ಒಂದು ರೀತಿಯೊಳಗ ಗೊತ್ತಿಲ್ಲದೇ ಇರೂದ್‍ಅ ಇಲ್ಲಿ ಜ್ಞಾನ, ಪಾಂಡಿತ್ಯ, ಪರಿಪೂರ್ಣತಾ ಅಂತ. ಅಂದರೇನು, ಕಡಿತನಕಾ ಅರ್ಥಾ ಹುಡುಕಿಕೊಂತ ನಾವು ಅದರೊಳಗ್‍ಅ ಮುಳುಗಿರತೇವಿ, ಮುಗದಿರತೇವಿ, ಕಳೆದಿರತೇವಿ, ಕಳೆದುಹೋಗಿರತೇವಿ ಅಂತೆಲ್ಲಾ, ಅದೇನೋ ಅಂತಾರಲ್ಲಾ, ಆ ಅರ್ಥ...

SANKALANA : RNI No. KARKAN 14160 / 10 / 1 / 2002 - TC

ಸೌಂದರ್ಯ ಲೋಕದಲ್ಲಿ
ವಿಹರಿಸಲು ವಿಶೇಷ ವಿನ್ಯಾಸ

ಸೌಂದರ್ಯ ಹಾಗೂ ಹಣಕ್ಕೆ ತಕ್ಕ ಮೌಲ್ಯದ ಸಮ್ಮಿಲನ ಪ್ರಿಯದರ್ಶಿನಿ ಸೀರೆಗಳಲ್ಲಿ. ಬ್ರೋಕೇಡ್ ಹಾಗೂ ಸಾಂಪ್ರದಾಯಕ ವಿನ್ಯಾಸಗಳಲ್ಲಿ ಕಲಾಂಜಲಿ, ಕಾಂತಾ ಹಾಗೂ ಜಾಮ್ದಾನಿ ಸೀರೆಗಳ ಬೃಹತ್ ಶ್ರೇಣಿ.

ಬ್ರೋಕೇಡ್: ವಿವಿಧ ಆಕರ್ಷಕ ವರ್ಣಗಳಲ್ಲಿ ಬಂಗಾರದ ಹಾಗೂ ಬೆಳ್ಳಿ ಜರಿಯ ವಿನ್ಯಾಸಗಳು.

ಕಾಂತಾ: ಕಲ್ಕತ್ತಾ ಹಾಗೂ ಡಾಕಾದ ಸಾಂಪ್ರದಾಯಕ

ಗಂಡಭೇರುಂಡ: ಎರಡು ತಲೆಯ ಗಂಡಭೇರುಂಡ ಪಕ್ಷಿಯ ವಿನ್ಯಾಸದ ಸೀರೆಗಳು

ಜಾಮ್ದಾನಿ: ನೇಯ್ಗೆಯ ಸಮಯದಲ್ಲಿಯೇ ಅಂಚುಗಳಲ್ಲಿ ಅಳವಡಿಸಿದ ಆಕರ್ಷಕ ಕಸೂತಿಯ ವಿನ್ಯಾಸ

ಕಲಾಂಜಲಿ: ಕಂಠಹಾರದ ಮಾದರಿಯಲ್ಲಿ ನೇಯ್ದ ವಿಶಿಷ್ಠ ಸೀರೆ.

ಪ್ರಿಯದರ್ಶಿನಿ
ಕೈಮಗ್ಗದ ತವರು

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಪ್ರಿಯದರ್ಶಿನಿ ಕಮರ್ಷಿಯಲ್ ಕಾಂಪ್ಲೆಕ್ಸ್, ನಂ. 1, ಟ್ಯಾಂಕ್ ರೋಡ್, ಹಲಸೂರು,
ಬೆಂಗಳೂರು - 560 042 ಫೋನ್: 080-25575421/2 e-mail: khdc@vsnl.net website: www.khdcl.com

ಕರ್ನಾಟಕದಾದ್ಯಂತ ಮಾರಾಟ ಮಳಿಗೆಗಳು ಮತ್ತು:
• ನವದೆಹಲಿ • ಮುಂಬೈ • ಕೊಲ್ಕತ್ತ • ಚೆನ್ನೈ • ಹೈದರಾಬಾದ್ • ಜೈಪುರ್ • ಕಾನ್‌ಪುರ್ ಗಳಲ್ಲಿ ಸಹ